ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 14 ಶನಿವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 323 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕೊನೆ ಉಸಿರಿರುವವರೆಗೂ ರಾಜಕೀಯ ಮಾಡ್ತೇನೆ!

- ವರುಣ, ಚಾಮುಂಡೇಶ್ವರಿ ಕ್ಷೇತ್ರದ ಜನರ ದಯೆ; 2 ಬಾರಿ ಸಿಎಂ, 2 ಬಾರಿ ವಿಪಕ್ಷ ನಾಯಕನಾದೆ
- ನನಗೆ ರಾಜಕೀಯ ಜೀವನ ಕೊಟ್ಟಿದ್ದೆ ಕ್ಷೇತ್ರಗಳಲ್ಲಿನ ಹುಂಡಿಗಳು; ಅವ ಕಂಡರೆ ನನಗೆ ಬಹುಪ್ರಿಯ!



ಮೈಸೂರು ತಾಲೂಕಿನ ವರಕೋಡು ಗ್ರಾಮದಲ್ಲಿ ಶ್ರೀ ಬೀರೇಶ್ವರಸ್ವಾಮಿ ದೇವಾಲಯ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗ್ರಾಮಸ್ಥರು ಬೆಳ್ಳಿ ಗದೆ ನೀಡಿ, ಅಭಿನಂದಿಸಿದರು.

ಮೈಸೂರು, ಮಾ.13(ಎಂಟಿವೈ)– ಕೊನೆ ಉಸಿರಿರುವವರೆಗೂ ನಾನು ರಾಜಕೀಯದಲ್ಲಿ ಇರುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮೈಸೂರು ತಾಲೂಕಿನ ವರಕೋಡು ಗ್ರಾಮದಲ್ಲಿ ಪುನರ್ ನಿರ್ಮಿಸಿರುವ ಶ್ರೀ ಬೀರೇಶ್ವರಸ್ವಾಮಿ ದೇವಾಲಯವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜಕೀಯ ಜೀವನದಲ್ಲಿ ಸೋಲು–ಗೆಲುವು ಎರಡನ್ನೂ ಕಂಡಿದ್ದೇನೆ. ಸೋತಾಗಲೂ ಜನರ ಸೇವೆಯನ್ನು ಪ್ರಾಮಾಣಿಕವಾಗಿ ಕೈಲಾದಷ್ಟು ಮಾಡಿಕೊಂಡು ಬಂದಿದ್ದೇನೆ. ನನ್ನ ಕೊನೆ ಉಸಿರು ಇರುವವರೆಗೂ ನಾನು ರಾಜಕೀಯದಲ್ಲಿದ್ದು ನಿಮ್ಮ ಸೇವೆ ಮಾಡುತ್ತೇನೆ ಎಂದರು.

ನನ್ನ 48 ವರ್ಷಗಳ ಸುದೀರ್ಘ ರಾಜಕಾರಣದಲ್ಲಿ 13 ಚುನಾವಣೆ ಎದುರಿಸಿದ್ದೇನೆ. ನಾಲ್ಕು ಬಾರಿ ಸೋತು, 9 ಬಾರಿ ಗೆಲುವು ಸಾಧಿಸಿರುವ ನಾನು ಎರಡು ಬಾರಿ ಮುಖ್ಯಮಂತ್ರಿ, ಎರಡು ಬಾರಿ ವಿರೋಧ ಪಕ್ಷದ ನಾಯಕನಾಗಿ ಸೇವೆ ಸಲ್ಲಿಸಿದ್ದೇನೆ. 17 ಬಾರಿ ಬಜೆಟ್ ಮಂಡಿಸಿದ್ದೇನೆ. ಈ ಎಲ್ಲಾ ಸಾಧನೆ ಮಾಡಲು ಚಾಮುಂಡೇಶ್ವರಿ ಮತ್ತು ವರುಣ ಕ್ಷೇತ್ರದ ಜನತೆ ನೀಡಿದ ಸಹಕಾರವೇ ಕಾರಣ. ಅದರಲ್ಲೂ ಹುಂಡಿಗಳ ಜನ ನೀಡಿದ ಬೆಂಬಲ ಅತೀ ಮುಖ್ಯ ಎಂದರು.

ಚಾಮುಂಡೇಶ್ವರಿ ಮತ್ತು ವರುಣ ಕ್ಷೇತ್ರದ ಜನರು ನಿರಂತರವಾಗಿ ಬೆಂಬಲ ನೀಡುತ್ತಾ ಬಂದಿರುವ ಕಾರಣ ಎಂದಿಗೂ ಈ ಕ್ಷೇತ್ರಗಳ ಜನರನ್ನು ಮರೆಯಲು ಸಾಧ್ಯವಿಲ್ಲ. ಇಂದು ನಾನು ರಾಜಕೀಯದಲ್ಲಿ ಬೆಳೆಯಲು, ಮುಖ್ಯಮಂತ್ರಿ ಆಗಲು ನೀವೆಲ್ಲರೂ ಕಾರಣ ಎಂದು ನೆರೆದಿದ್ದ ಜನರತ್ತ ಕೈ ತೋರಿದರು. ಈ ವೇಳೆ ನೆರೆದಿದ್ದ ಜನ ಶಿಳ್ಳೆ ಹೊಡೆದು ಸಂಭ್ರಮಿಸಿದರು. ■ 6ನೇ ಪುಟಕ್ಕೆ

ನನ್ನಂತೆ ನನ್ನ ಮಗನನ್ನೂ ಬೆಳೆಸಿ...

ಮೈಸೂರು: ನನ್ನಂತೆ ನನ್ನ ಮಗನನ್ನೂ ರಾಜಕೀಯವಾಗಿ ಬೆಳೆಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜನತೆಗೆ ಮನವಿ ಮಾಡಿದರು.

ವರಕೋಡು ಗ್ರಾಮದಲ್ಲಿ ಪುನರ್ ನಿರ್ಮಿಸಿರುವ ಶ್ರೀ ಬೀರೇಶ್ವರಸ್ವಾಮಿ ದೇವಾಲಯ ಉದ್ಘಾಟಿಸಿ ಮಾತನಾಡಿದ ಅವರು, ನಾನು ವರುಣ ಕ್ಷೇತ್ರಕ್ಕೆ ಹೆಚ್ಚಾಗಿ ಬರಲು ಸಾಧ್ಯವಾಗುತ್ತಿಲ್ಲ. ಆದರೆ, ಕ್ಷೇತ್ರದ ಅಭಿವೃದ್ಧಿ ಜವಾಬ್ದಾರಿಯನ್ನು ವಿಧಾನ ಪರಿಷತ್ ಸದಸ್ಯ, ನನ್ನ ಪುತ್ರ ಡಾ.ಯತೀಂದ್ರ ನೋಡಿಕೊಳ್ಳುತ್ತಿದ್ದಾರೆ. ಅವರು ಹೇಳಿದ ಎಲ್ಲಾ ಅಭಿವೃದ್ಧಿ ಕೆಲಸವನ್ನು ಮಾಡುತ್ತಿದ್ದೇನೆ. ರಾಜಕೀಯವಾಗಿ ಡಾ.ಯತೀಂದ್ರ ಅವರನ್ನು ಬೆಳೆಸುವ ಜವಾಬ್ದಾರಿ ನಿಮ್ಮದು. ಮುಂದೆಯೂ ಆತನನ್ನು ಕೈ ಹಿಡಿದು ಬೆಳೆಸುತ್ತೀರಾ ಎನ್ನುವ ನಂಬಿಕೆ, ವಿಶ್ವಾಸವಿದೆ ಎಂದರು.

ಈ ವೇಳೆ ನೆರೆದಿದ್ದವರು ಯತೀಂದ್ರ ಅವರನ್ನು ಮಂತ್ರಿ ಮಾಡಬೇಕು... ಡಿಸಿಎಂ ಮಾಡಬೇಕು ಎಂದು ಕೂಗಿ ಹೇಳಿದರು. ಇದಕ್ಕೆ ನಗುತ್ತಲೇ, ವಿಷಯಾಂತರ ಮಾಡಿದ ಸಿಎಂ, ಈಗಿನ ಹುಂಡಿಗಳಿಗೂ ಅಂದಿನ ಹುಂಡಿಗಳಿಗೂ ವ್ಯತ್ಯಾಸ ಇದೆ. ಸಾಕಷ್ಟು ಅಭಿವೃದ್ಧಿಯಾಗಿವೆ. ನಮ್ಮ ಸರ್ಕಾರದಲ್ಲಿ ಎಲ್ಲಾ ಜಾತಿ, ಧರ್ಮದವರಿಗೆ ಯೋಜನೆಗಳನ್ನು ನೀಡಿದ್ದೇನೆ. ಅನೇಕ ಭಾಗ್ಯ, ಗ್ಯಾರಂಟಿ ಯೋಜನೆಗಳನ್ನು ನೀಡಿದ್ದೇನೆ ಎಂದರು.

ಮುಂದಿನ ಸೋಮವಾರದಿಂದಲೇ ತಂಬಾಕು ಖರೀದಿ ಪುನಾರಂಭ

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದ ನಿಯೋಗಕ್ಕೆ ಕೇಂದ್ರ ಸಚಿವ ಪಿಯೂಷ್ ಗೋಯಲ್ ಭರವಸೆ

- ಮೈಸೂರು, ಚಾಮರಾಜನಗರ, ಹಾಸನ ಜಿಲ್ಲೆ ಜನಪ್ರತಿನಿಧಿಗಳು, ನಾಯಕರು ಸಭೆಯಲ್ಲಿ ಭಾಗಿ
- ಉತ್ತಮ ಬೆಲೆ, ವಿದೇಶ ಮಾರುಕಟ್ಟೆಗಳಿಗೆ ರಫ್ತು ಹೆಚ್ಚಳ, ಹೊಸ ವಿದೇಶಿ ಮಾರುಕಟ್ಟೆಗಳ ಅನ್ವೇಷಣೆ ವಿಶ್ವಾಸ



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಉಪಸ್ಥಿತಿಯಲ್ಲಿ ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಮೈಸೂರು ಭಾಗದ ಜನಪ್ರತಿನಿಧಿಗಳು ಹಾಗೂ ಮುಖಂಡರೊಂದಿಗೆ ಕೇಂದ್ರದ ವಾಣಿಜ್ಯ ಮತ್ತು ಕೈಗಾರಿಕೆ ಖಾತೆ ಸಚಿವರಾದ ಪಿಯೂಷ್ ಗೋಯಲ್ ಅವರನ್ನು ಭೇಟಿ ಮಾಡಿ, ತಂಬಾಕು ಸಮಸ್ಯೆ ಬಗ್ಗೆ ಮಹತ್ವದ ಚರ್ಚೆ ನಡೆಸಿದರು.

ನವದೆಹಲಿ, ಮಾ.13– ಕರ್ನಾಟಕ ಸೇರಿದಂತೆ ದೇಶಾದ್ಯಂತ ತಂಬಾಕು ಬೆಳೆಗಾರರ ನೆರವಿಗೆ ಕೇಂದ್ರ ಸರಕಾರ ಧಾವಿಸಿದ್ದು, ಮುಂದಿನ ಸೋಮವಾರದಿಂದಲೇ ತಂಬಾಕು ಖರೀದಿಗೆ ಸೂಚಿಸಲಾಗಿದೆ.

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಉಪಸ್ಥಿತಿಯಲ್ಲಿ ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಮೈಸೂರು ಭಾಗದ ಜನಪ್ರತಿನಿಧಿಗಳು ಹಾಗೂ ಮುಖಂಡರೊಂದಿಗೆ ಕೇಂದ್ರದ ವಾಣಿಜ್ಯ ಮತ್ತು ಕೈಗಾರಿಕೆ ಖಾತೆ ಸಚಿವರಾದ ಪಿಯೂಷ್ ಗೋಯಲ್ ಅವರನ್ನು ಭೇಟಿ ಮಾಡಿ, ಸಭೆ ನಡೆಸಿದ ಬಳಿಕ ಸಚಿವ ಗೋಯಲ್ ಅವರು ಈ ಭರವಸೆ ನೀಡಿದ್ದಾರೆ.

ಸಚಿವ ಗೋಯಲ್ ಅವರಿಗೆ ತಂಬಾಕು ಬೆಳೆಗಾರರ ಸಮಸ್ಯೆಗಳನ್ನು ಸಚಿವ ಹೆಚ್.ಡಿ.ಕುಮಾರಸ್ವಾಮಿ ಮನವರಿಕೆ ಮಾಡಿಕೊಟ್ಟರು. ಇದಕ್ಕೆ ಸ್ಪಂದಿಸಿದ ಗೋಯಲ್, ಕೂಡಲೇ ಪರಿಹರಿಸುವ ಭರವಸೆ ನೀಡಿದರಲ್ಲದೆ, ಮುಂದಿನ ಸೋಮವಾರದಿಂದಲೇ ತಂಬಾಕು ಖರೀದಿ ಸಂಬಂಧ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇದೇ ವೇಳೆ ವಿದೇಶ ಮಾರುಕಟ್ಟೆಗಳಿಗೆ ತಂಬಾಕು ರಫ್ತು, ಹೊಸ ವಿದೇಶಿ ಮಾರುಕಟ್ಟೆಗಳ ಅನ್ವೇಷಣೆ ಸೇರಿದಂತೆ ಬೆಳೆಗಾರರ ಹಲವು ಬೇಡಿಕೆಗಳಿಗೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದರು. ತಮ್ಮ ಸಚಿವಾಲಯದ ಉನ್ನತ ಅಧಿಕಾರಿಗಳು ಹಾಗೂ ತಂಬಾಕು ಖರೀದಿಸುವ ಉದ್ಯಮದ ಪ್ರಮುಖರ ಜತೆ ಮಾತನಾಡಿ ಬೆಳೆಗಾರರ ನೆರವಿಗೆ ಬರುವಂತೆ ಸೂಚಿಸಿದ್ದಾಗಿ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಮಾಹಿತಿ ನೀಡಿದ್ದಾರೆ.

ಸಭೆಯಲ್ಲಿ ಮಾಜಿ ಸಚಿವ ಸಾ.ರಾ. ಮಹೇಶ್, ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಎ.ಮಂಜು, ■ 6ನೇ ಪುಟಕ್ಕೆ

ಶಾಶ್ವತ ಪರಿಹಾರಕ್ಕೆ ಮನವಿ

ತಂಬಾಕು ಬೆಳೆಗಾರರ ಸಮಸ್ಯೆಗೆ ಶಾಶ್ವತ ಪರಿಹಾರ ಬೇಕಿದೆ. ವಿದೇಶಗಳಿಗೆ ರಫ್ತು ಹೆಚ್ಚಳ, ಸೂಕ್ತ ಮಾರುಕಟ್ಟೆ ಹಾಗೂ ಬೆಲೆಗೆ ಮನವಿ ಮಾಡಿದ್ದೇವೆ. ಮಾರುಕಟ್ಟೆಗಳಲ್ಲಿ ತಂಬಾಕು ಮಂಡಳಿ ವತಿಯಿಂದ ಮೂಲ ಸೌಕರ್ಯ ಕಲ್ಪಿಸಿಕೊಡುವ ಬಗ್ಗೆಯೂ ಚರ್ಚಿಸಲಾಗಿದೆ. ಹಿಂದಿನ ವರ್ಷಗಳಲ್ಲಿ ತಂಬಾಕಿಗೆ ಉತ್ತಮ ಬೆಲೆ ಸಿಕ್ಕಿದೆ. ಕಳೆದ ವರ್ಷ 320 ರೂ. ಗರಿಷ್ಠ ಬೆಲೆ ನೀಡಲಾಗಿತ್ತು. ಪ್ರಸಕ್ತ ವರ್ಷ 220 ರೂ. ಕನಿಷ್ಠ ಬೆಲೆ ನೀಡಲಾಗಿದೆ. ಎರಡು ಮೂರು ದಿನಗಳಲ್ಲಿ ಸೂಕ್ತ ಬೆಲೆ ಸಿಗುವ ವಿಶ್ವಾಸವಿದೆ. ಈಗಿನಿಂದಲೇ ಬಿತ್ತನೆ ಬೀಜ ವಿತರಿಸಿದರೆ ಬೆಳೆ ಪ್ರಮಾಣ ಹೆಚ್ಚಾಗುವ ಸಾಧ್ಯತೆ ಇದೆ. ಹಾಗಾಗಿ ಇಂತಹ ವ್ಯತ್ಯಾಸಗಳನ್ನು ಸರಿಪಡಿಸಿಕೊಂಡು ಎಷ್ಟು ಪ್ರಮಾಣದ ತಂಬಾಕು ಬೆಳೆಯಬೇಕೆಂದು ರೈತರಿಗೆ ಜಾಗೃತಿ ಮೂಡಿಸಲು ತಂಬಾಕು ಮಂಡಳಿ ಮುಂದಾಗಬೇಕು.

-ಯದುವೀರ್, ಸಂಸದ

ಸಿದ್ದರಾಮಯ್ಯ ಬಜೆಟ್ ಸಮಾಧಾನ ತಂದಿಲ್ಲ!

- ರಾಮನಗರ ಕಾಂಗ್ರೆಸ್ ಶಾಸಕ ಇಕ್ಬಾಲ್ ಹುಸೇನ್ ಅಸಮಾಧಾನ
- ಸ್ವಪಕ್ಷೀಯರ ಆಕ್ರೋಶಕ್ಕೂ ಡೋಂಟ್ ಕೇರ್; ತಮ್ಮ ಹೇಳಿಕೆಗೆ ಸಮರ್ಥನೆ

ಬೆಂಗಳೂರು, ಮಾ.13– ಮುಖ್ಯಮಂತ್ರಿ ಸಿದ್ದರಾಮಯ್ಯ ಮಾರ್ಚ್ 6 ರಂದು ಮಂಡಿಸಿದ ಬಜೆಟ್ ಕುರಿತ ತಮ್ಮ ಹೇಳಿಕೆಗೆ ಸ್ವಪಕ್ಷ ನಾಯಕರ ಆಕ್ರೋಶದ ನಡುವೆಯೂ ರಾಮನಗರ ಶಾಸಕ ಇಕ್ಬಾಲ್ ಹುಸೇನ್ ತಾವು ಆಡಿದ್ದ ಮಾತನ್ನು ಸಮರ್ಥಿಸಿಕೊಂಡಿದ್ದಾರೆ. ತಮ್ಮ ಕ್ಷೇತ್ರದ ಜನರ ಪರವಾಗಿ ಮಾತನಾಡಿರುವುದರಲ್ಲಿ ಯಾವುದೇ ತಪ್ಪಿಲ್ಲ ಎಂದು ಪುನರುಚ್ಚರಿಸಿದ್ದಾರೆ.



ಇಕ್ಬಾಲ್ ಹುಸೇನ್

ಇತ್ತೀಚಿಗೆ ಮಾಧ್ಯಮದವರೊಂದಿಗೆ ಮಾತನಾಡಿದ ಇಕ್ಬಾಲ್ ಹುಸೇನ್, ಬಜೆಟ್ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು. ಈ ಕುರಿತು ಇಂದು ಪ್ರತಿಕ್ರಿಯಿಸಿದ ಶಾಸಕ ಬೇಳೂರು ಗೋಪಾಲಕೃಷ್ಣ, ಹುಸೇನ್ ಹೇಳಿಕೆ ಪಕ್ಷ ವಿರೋಧಿ ಚಟುವಟಿಕೆಯಾಗಿದ್ದು, ಅವರನ್ನು ಪಕ್ಷದಿಂದ ಉಚ್ಚಾಟಿಸಬೇಕು ಎಂದು ಒತ್ತಾಯಿಸಿದ್ದಾರೆ.


ಸ್ವಪಕ್ಷೀಯರ ವಿರುದ್ಧದ ಬಜೆಟ್ ಕುರಿತ ಹೇಳಿಕೆಯನ್ನು ಸಮರ್ಥಿಸಿಕೊಂಡ ಇಕ್ಬಾಲ್ ಹುಸೇನ್, ಬಜೆಟ್ ಸಮಾಧಾನ ತಂದಿಲ್ಲ ಮತ್ತು ತಮ್ಮ ನಂಬಿಕೆ ಹುಸಿಯಾಗಿದೆ ಎಂದು ಹೇಳಿರುವುದರಲ್ಲಿ ಯಾವುದೇ ತಪ್ಪಿಲ್ಲ. ನಾನು ಐಎಎಸ್ ಅಥವಾ ಕೆಎಎಸ್ ಅಧಿಕಾರಿ ಅಲ್ಲ. ಬದಲಿಗೆ ಜನರ ಮತದಿಂದ ಆಯ್ಕೆಯಾದ ಜನಪ್ರತಿನಿಧಿ. ಕ್ಷೇತ್ರದ ಜನರ ಸಮಸ್ಯೆಗಳಿಗೆ ಸ್ಪಂದಿಸುವುದು ನನ್ನ ಕರ್ತವ್ಯವಾಗಿದೆ.

ನನ್ನ ಕ್ಷೇತ್ರವಾದ ರಾಮನಗರದ ಅಭಿವೃದ್ಧಿಗಾಗಿ ಮುಖ್ಯಮಂತ್ರಿಗಳಿಗೆ ಹಲವಾರು ಬಾರಿ ಮನವಿ ಮಾಡಿದ್ದರೂ ಯಾವುದೇ ಸ್ಪಂದನೆ ದೊರೆತಿಲ್ಲ. ಹೀಗಿರುವಾಗ ತಮ್ಮ ಕ್ಷೇತ್ರದ ಜನರ ಪರವಾಗಿ ಮಾತನಾಡಿರುವುದರಲ್ಲಿ ಯಾವುದೇ ತಪ್ಪಿಲ್ಲ ಎಂದು ಅವರು ಪುನರುಚ್ಚರಿಸಿದ್ದಾರೆ.

ತನ್ನ ಕ್ಷೇತ್ರದ ಅಭಿವೃದ್ಧಿ ಕೆಲಸದ ಬಗ್ಗೆ ಅನೇಕ ಬಾರಿ ಮನವಿ ಸಲ್ಲಿಸಿದ್ದರೂ ಮುಖ್ಯಮಂತ್ರಿ ಸ್ಪಂದಿಸಿಲ್ಲ. ಹತ್ತು ಬಾರಿ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಸಿಎಂ ಗೆ ಮನವರಿಕೆ ಮಾಡಿಕೊಟ್ಟಿದ್ದೇನೆ. ಹಾಗಾಗಿ ನನ್ನ ಕ್ಷೇತ್ರದ ಬಗ್ಗೆ ಮಾತನಾಡಿದ್ದೇನೆ. ಇದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸುವುದರಲ್ಲಿ ಯಾವ ತಪ್ಪಿದೆ. ಇಡೀ ರಾಜ್ಯದ ಬಗ್ಗೆ ನಾನು ಮಾತನಾಡಿಲ್ಲ. ನನ್ನ ಕ್ಷೇತ್ರದ ಬಗ್ಗೆ ಮಾತ್ರ ಮಾತನಾಡಿದ್ದೇನೆ ಎಂದು ಇಕ್ಬಾಲ್ ಹುಸೇನ್ ಹೇಳಿದರು. ■ 6ನೇ ಪುಟಕ್ಕೆ

ಅಕ್ರಮ ಬಡಾವಣೆ ನಿರ್ಮಾಣ ಮಾಡಿದರೆ ಕಾನೂನು ಕ್ರಮ

ಬೆಂಗಳೂರು, ಮಾ.13(ಕೆಎಂಶಿ)– ಅಕ್ರಮ ಬಡಾವಣೆ ನಿರ್ಮಾಣ ಮಾಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ವಿಧಾನಪರಿಷತ್‌ನಲ್ಲಿಂದು ಎಚ್ಚರಿಸಿದ್ದಾರೆ.



ಪ್ರಶ್ನೋತ್ತರ ವೇಳೆಯಲ್ಲಿ ಎಚ್.ಗೋಪಿನಾಥ್ ಪ್ರಸ್ತಾವಕ್ಕೆ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಉತ್ತರಿಸುವಾಗ ಮಧ್ಯಪ್ರವೇಶಿಸಿ ಮಾತನಾಡಿದ ಅವರು, ಅಕ್ರಮ ಬಡಾವಣೆಯ ನಿವೇಶನ ನೋಂದಣಿ ಮಾಡುವುದನ್ನು ಸ್ಥಗಿತಗೊಳಿಸಲಾಗಿದೆ.

ಕಾನೂನು ಪ್ರಕಾರ ನಿಯಮ ಪಾಲನೆ ಮಾಡುತ್ತಿರಲಿಲ್ಲ. ಆದರೆ ಅಂತಹ ಬಡಾವಣೆಗಳಲ್ಲಿ ನಿವೇಶನ ಖರೀದಿ ಮಾಡಿದವರು ಸಂತ್ರಸ್ತರಾಗುತ್ತಿದ್ದಾರೆ. ಈ ಕಾರಣಕ್ಕಾಗಿ ಅಕ್ರಮ ಬಡಾವಣೆ ನೋಂದಣಿಯನ್ನು ನಿಲ್ಲಿಸಿದ್ದೇವೆ. ಬಡಾವಣೆಯಲ್ಲಿ ಉಳಿದಿರುವ ನಿವೇಶನಗಳಿಗೆ ನೋಂದಣಿ ಮಾಡಬೇಕಾದರೆ ನಿಯಮಗಳನ್ನು ಪಾಲಿಸಬೇಕು. ಬಡಾವಣೆ ವಿನ್ಯಾಸ ಯೋಜನೆಗೆ ಅನುಮೋದನೆ ಪಡೆದುಕೊಂಡರೆ ಉಳಿದ ನಿವೇಶನಗಳ ನೋಂದಣಿಗೆ ಅವಕಾಶ ಮಾಡಿಕೊಡುವುದಾಗಿ ಸ್ಪಷ್ಟಪಡಿಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಪ್ರಿಯಾಂಕ್ ಖರ್ಗೆ, ಅನಧಿಕೃತ ಬಡಾವಣೆಗಳಿಂದ ತೆರಿಗೆ ಬರುತ್ತಿಲ್ಲ. ನಿಯಮ ಮೀರಿ ಬಡಾವಣೆ ನಿರ್ಮಿಸಿದರೆ ಸಕ್ರಮ ಮಾಡುವುದಾದರೂ ಹೇಗೆ, ಬಿ–ಖಾತಾ ನೀಡುವ ವಿಚಾರದಲ್ಲೂ ನಿಯಮ ತರಬೇಕಾಗುತ್ತದೆ ಎಂದರು. ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ಅಧಿನಿಯಮದ ಪ್ರಕಾರ, 1993, 190 ಎ ಪ್ರಕರಣದ ತರುವಾಯ 190 ಬಿ ಮತ್ತು 199 ಸಿ ಹೊಸ ಪ್ರಕರಣಗಳನ್ನು ಸೇರ್ಪಡೆ ಮಾಡಿದೆ.

ಈಗಾಗಲೇ ಭೂ ಪರಿವರ್ತನೆ ವರ್ಗಾವಣೆಗೆ ಒಳಪಟ್ಟಿರುವ ನಿವೇಶನಗಳನ್ನು ಹೊರತುಪಡಿಸಿ ಉಳಿಕೆ ಜಾಗವನ್ನು ಮಾಲೀಕನ ಹೆಸರಿನಲ್ಲಿ ಏಕ ನಿವೇಶನವೆಂದು ಪರಿಗಣಿಸಬಹುದು ಎಂದರು.

ಭಿಕ್ಷಾಟನೆ ಮುಕ್ತ ರಾಜ್ಯಕ್ಕೆ ಕ್ರಮ

- ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ.ಮಹದೇವಪ್ಪ ಭರವಸೆ
- ಭಿಕ್ಷಾಟನೆ ಹಿಂದೆ ಮಾಫಿಯಾ ಕಾರ್ಯನಿರತವಾಗಿದ್ದರೆ ಕಠಿಣ ಕ್ರಮ

ಬೆಂಗಳೂರು, ಮಾ.13(ಕೆಎಂಶಿ)– ರಾಜ್ಯವನ್ನು ಭಿಕ್ಷಾಟನೆ ಮುಕ್ತ ಮಾಡಲು ಕ್ರಮ ವಹಿಸಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ವಿಧಾನಪರಿಷತ್‌ನಲ್ಲಿಂದು ತಿಳಿಸಿದರು.



ಪ್ರಶ್ನೋತ್ತರ ಅವಧಿಯಲ್ಲಿ ಕೆ.ಗೋವಿಂದರಾಜು ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಭಿಕ್ಷಾಟನೆ ಹಿಂದೆ ಮಾಫಿಯಾ ಇದ್ದರೆ ನಿರ್ಬಂಧಿಸಲು ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು.

ಮಾಫಿಯಾ ಹತ್ತಿಕ್ಕಲು ಪೊಲೀಸ್ ಇಲಾಖೆ ಸಹಕಾರದೊಂದಿಗೆ ನಮ್ಮ ಅಧಿಕಾರಿಗಳು ಕಠಿಣ ಕ್ರಮ ಜರುಗಿಸಲಿದ್ದಾರೆ. ರಾಜ್ಯದಲ್ಲಿ ಕೇಂದ್ರ ಪರಿಹಾರ ಸಮಿತಿಯ ಅಧೀನದಲ್ಲಿ ಒಟ್ಟು 15 ನಿರಾಶ್ರಿತರ ಪರಿಹಾರ ಕೇಂದ್ರಗಳಿವೆ. 2025–26ನೇ ಸಾಲಿನಲ್ಲಿ 5,649 ಮಂದಿಯನ್ನು ಬಂಧಿಸಿ 5,402 ಮಂದಿಯನ್ನು ಬಿಡುಗಡೆ ಮಾಡಲಾಗಿದೆ. ಈ ಸಾಲಿನಲ್ಲಿ ಭಿಕ್ಷುಕರ ಪುನರ್ ವಸತಿಗಾಗಿ 69.07 ಕೋಟಿ ರೂ. ವೆಚ್ಚ ಮಾಡಲಾಗಿದೆ ಎಂದರು.




ಹೊರರಾಜ್ಯದಿಂದ ಬಂದಿರುವವರೇ ಹೆಚ್ಚು ಮಂದಿ ಭಿಕ್ಷಾಟನೆಯಲ್ಲಿ ತೊಡಗಿದ್ದಾರೆ. ಅವರ ಹಿಂದೆ ಕೆಲವು ಕಾಣದ ಕೈಗಳು ಇವೆ. ಮುಂದಿನ ದಿನಗಳಲ್ಲಿ ಕಠಿಣ ಕ್ರಮ ಕೈಗೊಂಡು ರಾಜ್ಯದಲ್ಲಿ ಭಿಕ್ಷಾಟನೆ ನಿರ್ಮೂಲನೆ ಮಾಡಲಾಗುವುದು.

ಭಿಕ್ಷಾಟನೆ ವೃತ್ತಿಗೆ ಮತ್ತೆ ಮರಳಬಾರದೆಂದು ವಿವಿಧ ವೃತ್ತಿ ತರಬೇತಿಯನ್ನು ಪುನರ್ ವಸತಿ ಕೇಂದ್ರದಲ್ಲಿ ನೀಡಲಾಗುತ್ತಿದೆ. ಮಕ್ಕಳೊಂದಿಗೆ ಭಿಕ್ಷಾಟನೆ ಮಾಡುವುದನ್ನು ನಿರ್ಮೂಲನೆ ಮಾಡಲು ಮಕ್ಕಳೊಂದಿಗೆ ತೊಡಗಿರುವ ಮಹಿಳೆಯರನ್ನು ಬಂಧಿಸಿ ಕಾನೂನು ರೀತಿ ಕ್ರಮ ಜರುಗಿಸಲಾಗುತ್ತಿದೆ ಎಂದರು. ■ 6ನೇ ಪುಟಕ್ಕೆ

ಗೃಹ ಬಳಕೆ ಸಿಲಿಂಡರ್ ಅಕ್ರಮ ದಾಸ್ತಾನಿದ್ದರೆ ಕ್ರಿಮಿನಲ್ ಕೇಸ್

- ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕ ಮಂಟೇಸ್ವಾಮಿ ಎಚ್ಚರಿಕೆ
- ಸಾರ್ವಜನಿಕರಲ್ಲಿ ಗೃಹಬಳಕೆ ಸಿಲಿಂಡರ್ ವಿಷಯದಲ್ಲಿ ಆತಂಕ ಬೇಡ
- ನಗರ ಪ್ರದೇಶದಲ್ಲಿ 25 ದಿನ, ಗ್ರಾಮೀಣ ಭಾಗದಲ್ಲಿ 45 ದಿನಕ್ಕೆ ರೀ ಫಿಲ್ಲಿಂಗ್‌ಗೆ ಅವಕಾಶ

ಮೈಸೂರು, ಮಾ.13(ಎಂಕೆ)– ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಅಕ್ರಮ ದಾಸ್ತಾನು ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ನಿರ್ಧರಿಸಿದ್ದು, ಇತ್ತೀಚೆಗಷ್ಟೇ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ 130 ಎಲ್‌ಪಿಜಿ ಸಿಲಿಂಡರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕ ಮಂಟೇಸ್ವಾಮಿ ಎಚ್ಚರಿಸಿದರು.



ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಮೈಸೂರಿನ ಗ್ಯಾಸ್ ಸಿಲಿಂಡರ್ ಏಜೆನ್ಸಿ ಮಾಲೀಕರೊಂದಿಗೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕ ಮಂಟೇಸ್ವಾಮಿ ಸಭೆ ನಡೆಸಿದರು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮೈಸೂರಿನ ಗ್ಯಾಸ್ ಸಿಲಿಂಡರ್ ಏಜೆನ್ಸಿ ಮಾಲೀಕರೊಂದಿಗೆ ಸಭೆ ನಡೆಸಿದ ಅವರು, ಹೋಟೆಲ್‌ಗಳಲ್ಲಿ ಗೃಹಬಳಕೆ ಸಿಲಿಂಡರ್‌ಗಳನ್ನು ಬಳಸಿದರೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು. ಈ ನಿಟ್ಟಿನಲ್ಲಿ ಹೋಟೆಲ್‌ಗಳಲ್ಲಿ ಪರಿಶೀಲನೆ ನಡೆಸಲಾಗುತ್ತಿದೆ ಎಂದರು.

ಇರಾನ್–ಇಸ್ರೇಲ್ ಮತ್ತು ಅಮೆರಿಕಾ ಯುದ್ಧದ ಪರಿಣಾಮದಿಂದ ಉಂಟಾಗಿರುವ ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಕೊರತೆಯನ್ನು ವ್ಯವಸ್ಥಿತವಾಗಿ ಸರಿದೂಗಿಸಬೇಕಿದೆ. ವಾಣಿಜ್ಯ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆಯೇ ಹೊರತು ಗೃಹ ಬಳಕೆ ಸಿಲಿಂಡರ್ ಪೂರೈಕೆಯಲ್ಲಿ ಯಾವುದೇ ಲೋಪವಾಗಿಲ್ಲ. ಸ್ಟಾಕ್ ಇರುವ ವಾಣಿಜ್ಯ ಸಿಲಿಂಡರ್‌ಗಳನ್ನು ಆಸ್ಪತ್ರೆ, ಹಾಸ್ಟೆಲ್, ಅನಾಥಾಶ್ರಮ, ಸರ್ಕಾರಿ ಇಲಾಖೆಗಳು ಹಾಗೂ ಇನ್ನಿತರೆ ಅವಶ್ಯಕತೆ ಇರುವ ಕಡೆಗಳಿಗೆ ಮಾತ್ರ ಪೂರೈಕೆ ಮಾಡುವಂತೆ ತಿಳಿಸಿದರು. ಗೃಹ ಬಳಕೆ ಸಿಲಿಂಡರ್ ಬುಕ್ಕಿಂಗ್ ಮತ್ತು ಪೂರೈಕೆಯಲ್ಲಿ ಯಾವುದೇ ವಿಳಂಬವಾಗದಂತೆ ಏಜೆನ್ಸಿ ಮಾಲೀಕರು ಕ್ರಮವಹಿಸಬೇಕು. ■ 6ನೇ ಪುಟಕ್ಕೆ

ಹೋಟೆಲ್‌ಗಳಿಗೆ ಇನ್ನೂ ಒಂದು ವಾರ ಅಡಿಗೆ ಅನಿಲ ಪೂರೈಕೆ ಮಾಡಲಾಗದು

ಆಸ್ಪತ್ರೆ, ವಿದ್ಯಾರ್ಥಿನಿಲಯಕ್ಕೆ ಕಲ್ಪಿಸುವ ವ್ಯವಸ್ಥೆ

ಬೆಂಗಳೂರು, ಮಾ.13(ಕೆಎಂಶಿ)– ಹೋಟೆಲ್ ಹಾಗೂ ಉಪಹಾರ ಕೇಂದ್ರಗಳಿಗೆ ಇನ್ನೂ ಒಂದು ವಾರ ಅಡುಗೆ ಅನಿಲ ಸರಬರಾಜು ಸಾಧ್ಯವಿಲ್ಲ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ವಿಧಾನಪರಿಷತ್‌ನಲ್ಲಿಂದು ಸ್ಪಷ್ಟಪಡಿಸಿದರು.

ಶೂನ್ಯವೇಳೆಯಲ್ಲಿ ಐವಾನ್ ಡಿಸೋಜ ಹಾಗೂ ಎಂ.ನಾಗರಾಜ ಯಾದವ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಆಸ್ಪತ್ರೆ, ವಿದ್ಯಾರ್ಥಿನಿಲಯಗಳಿಗೆ ವಾಣಿಜ್ಯ ಬಳಕೆ ಅನಿಲ ಸಿಲಿಂಡರ್‌ಗಳನ್ನು ಒದಗಿಸಲಾಗುವುದು. ಹೋಟೆಲ್‌ನವರು ಇನ್ನೂ ಕಾಯಬೇಕಾಗುತ್ತದೆ.



ಕೆ.ಎಚ್.ಮುನಿಯಪ್ಪ

ನಮ್ಮ ಅಧಿಕಾರಿಗಳು ತೈಲ ಕಂಪನಿಗಳ ಅಧಿಕಾರಿಗಳ ಜೊತೆ ಸಭೆ ನಡೆಸಿದ್ದು, ಅವರು ನೀಡಿರುವ ಮಾಹಿತಿಯಂತೆ ತಕ್ಷಣಕ್ಕೆ ವಾಣಿಜ್ಯ ಬಳಕೆ ಅನಿಲ ಪೂರೈಕೆಗೆ ಸಮಸ್ಯೆ ಇದೆ ಎಂದಿದ್ದಾರೆ. ಇನ್ನು ಒಂದು ವಾರದ ಬಳಿಕ ಸಮಸ್ಯೆ ಬಗೆಹರಿಸುವ ■ 6ನೇ ಪುಟಕ್ಕೆ

ಮಡಿವಾಳ ಸಮುದಾಯ ಪರಿಶಿಷ್ಟ ಜಾತಿಗೆ ಸೇರಿಸುವಂತೆ ಆಗ್ರಹಿಸಿ ಅಹೋರಾತ್ರಿ ಧರಣಿ

ಮೈಸೂರು, ಮಾ.13(ಜಿಎ)– ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕೆಂದು ಆಗ್ರಹಿಸಿ ರಾಜ್ಯ ಸಂಘ ಮಾ.16 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹಮ್ಮಿಕೊಂಡಿರುವ ಅಹೋರಾತ್ರಿ ಧರಣಿಯಲ್ಲಿ ಜಿಲ್ಲೆಯ ಸಮುದಾಯದ ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಜಿಲ್ಲಾ ಮಡಿವಾಳರ ಪರಿಶಿಷ್ಟ ಜಾತಿ ಹೋರಾಟ ಸಮಿತಿ ಅಧ್ಯಕ್ಷ ಎಸ್.ಜಿ. ಪ್ರಶಾಂತ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದ 18 ರಾಜ್ಯಗಳಲ್ಲಿ ಹಾಗೂ ಐದು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈಗಾಗಲೇ ಮಡಿವಾಳರನ್ನು ಪರಿಶಿಷ್ಟ ಜಾತಿಯಲ್ಲಿ ಗುರುತಿಸಲಾಗಿದೆ. ಆದರೆ ರಾಜ್ಯದಲ್ಲಿ ಮಾತ್ರ ಇದು ಆಗಿಲ್ಲ ಎಂದರು.

ರಾಜ್ಯದ 137 ಶಾಸಕರು ಈಗಾಗಲೇ ಪರಿಶಿಷ್ಟ ಜಾತಿಗೆ ಈ ಸಮುದಾಯ ಸೇರಲು ಅರ್ಹ ಎಂದು ಶಿಫಾರಸು ಪತ್ರ ಕೊಟ್ಟಿದ್ದಾರೆ. ರಾಜ್ಯ ಸರ್ಕಾರ ಈ ಬಗ್ಗೆನ ನಿರ್ಧಾರವನ್ನು ಕೇಂದ್ರಕ್ಕೆ ತಲುಪಿಸುವುದಷ್ಟೇ ಬಾಕಿ ಇದೆ. ಹೀಗಿದ್ದರೂ ನಿರ್ಲಕ್ಷ್ಯ ವಹಿಸಿರುವ ಕಾರಣ ಈ ಹೋರಾಟ ಹಮ್ಮಿಕೊಳ್ಳಲಾಗುತ್ತಿದೆ. ಸಮುದಾಯ ಎಲ್ಲರಿಗೂ ತಿಳಿದಿದ್ದು ಹಿಂದುಳಿದಿರುವ ಕಾರಣ ಪರಿಶಿಷ್ಟ ಜಾತಿಗೆ ಸೇರಿಸಬೇಕಾದ ಅಗತ್ಯವಿದೆ. ಹೀಗಾಗಿ ಹೋರಾಟ ಯಶಸ್ವಿಗೊಳಿಸಬೇಕೆಂದು ಸಮುದಾಯದವರಲ್ಲಿ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಚಂದ್ರು, ನಂಜುಂಡಸ್ವಾಮಿ, ಸತೀಶ್, ವಿಜಯಲಕ್ಷ್ಮಿ, ಎನ್.ಜಗದೀಶ್ ಕುಮಾರ್, ಸುನಂದ, ಎಂ.ಎನ್.ರಾಜೇಶ್, ಸಿದ್ದಪ್ಪಾಜಿ, ಶಿವಣ್ಣ ದುದ್ದಗೆರೆ ಉಪಸ್ಥಿತರಿದ್ದರು.

ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ಕಿಡ್ಸ್ ಗ್ರ್ಯಾಜ್ಯುಯೇಷನ್ ಕಾರ್ಯಕ್ರಮ



ಮೈಸೂರಿನ ಮಹರ್ಷಿ ವಿದ್ಯಾಸಂಸ್ಥೆಯಲ್ಲಿ ಕಿಡ್ಸ್ ಗ್ರ್ಯಾಜ್ಯುಯೇಷನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಮುಖ್ಯ ಅತಿಥಿಗಳಾಗಿ ಕೆಎಸ್‌ಜಿಹೆಚ್ ಕಲಾ ವಿಶ್ವವಿದ್ಯಾಲಯದ ನೃತ್ಯ ಮತ್ತು ಸಂಗೀತ ವಿಭಾಗದ ಡಾ.ಎಸ್. ಭುವನೇಶ್ವರಿ ಭಾಗವಹಿಸಿ ಬಾಲ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರವನ್ನು ನೀಡಿ ಗೌರವಿಸಿದರು. ವೇದಿಕೆಯಲ್ಲಿ ಮಹರ್ಷಿ ವಿದ್ಯಾಸಂಸ್ಥೆಯ ಕಾರ್ಯಕಾರಿ ಸಂಯೋಜಕ ತೇಜಸ್ ಬಿ ಶಂಕರ್, ನಿರ್ದೇಶಕಿಯರಾದ ಅಪೂರ್ವಶ್ರೇಯಸ್, ಸಂಸ್ಥೆಯ ಪ್ರಾಚಾರ್ಯ ಗೋಪಾಲಸ್ವಾಮಿ, ಸಂಯೋಜಕರಾದ ಅನಿತಾ ಉಪಸ್ಥಿತರಿದ್ದರು.

ಭಾರತೀಯ ರಾಷ್ಟ್ರೀಯ ಭ್ರಷ್ಟಾಚಾರ ನಿರ್ಮೂಲನೆ ಘಟಕ ಉದ್ಘಾಟನೆ

ಮೈಸೂರು, ಮಾ.13(ಜಿಎ)–ಭಾರತೀಯ ರಾಷ್ಟ್ರೀಯ ಭ್ರಷ್ಟಾಚಾರ ನಿರ್ಮೂಲನೆ ಹಾಗೂ ಕಾರ್ಯಾಚರಣೆಯ ತಾಲೂಕು ಘಟಕ ಉದ್ಘಾಟನಾ ಹಾಗೂ ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಪ್ರಗತಿಪರ ರೈತರನ್ನು ಗುರುತಿಸಿ ಸನ್ಮಾನಿಸುವ ಕಾರ್ಯಕ್ರಮವನ್ನು ಮಾ.17ರಂದು ಬೆಳಗ್ಗೆ 10.30ಕ್ಕೆ ಜೆ.ಪಿ.ನಗರ ಬಾಲ ಗಂಗಾಧರ ನಾಥ ಉದ್ಯಾನವನದಲ್ಲಿ ಆಯೋಜಿಸಲಾಗಿದೆ ಎಂದು ಕಾರ್ಯದರ್ಶಿ ಆರ್. ಮಂಜುಳಾ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮಹಿಳಾ ದಿನಾಚರಣೆ ಅಂಗವಾಗಿ ಇಬ್ಬರು ಮಹಿಳೆಯರನ್ನು ಸನ್ಮಾನಿಸಲಾಗುವುದು, ಇದರೊಡನೆ ಇತರ ಮೂವರು ಪ್ರಗತಿಪರ ರೈತರೂ ಸೇರಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಾದಪ್ಪ, ಗುರುಪ್ರಸಾದ್, ಹೇಮಲತಾ ಪ್ರಕಾಶ್, ಮಹದೇವಸ್ವಾಮಿ, ಮಲ್ಲೇಶ್, ಸಿದ್ದಲಿಂಗಸ್ವಾಮಿ ಉಪಸ್ಥಿತರಿದ್ದರು.

ರಾಷ್ಟ್ರ ಮಟ್ಟಕ್ಕೆ ಆಯ್ಕೆ



ರೋಟರಿ ಮೈಸೂರು ಉತ್ತರ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಎಸ್. ಸುದರ್ಶನ್ "Sustainable Projects and Research Challenge 2026 " ವಿಜ್ಞಾನದ ಮಾದರಿಗಳನ್ನು ತಯಾರು ಮಾಡುವುದರಲ್ಲಿ ರಾಷ್ಟ್ರ ಮಟ್ಟದಲ್ಲಿ ಸೆಮಿಫೈನಲ್‌ಗೆ ಆಯ್ಕೆಯಾಗಿದ್ದಾರೆ. ಚಿತ್ರದಲ್ಲಿ ರೊ.ಎಸ್.ರಾಮಪ್ರಸಾದ್, ರೋಟರಿ ಶಾಲೆಯ ಕಾರ್ಯದರ್ಶಿಎಂ.ಜೆ.ಸ್ವಾಮಿ ಮತ್ತು ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ಕಾಣಬಹುದು.

ಶೀಘ್ರದಲ್ಲೇ 'ರೀ ಬರ್ತ್ ಆಫ್ ಪ್ರೇಮ' ಬಿಡುಗಡೆ

ಮೈಸೂರು, ಮಾ.13(ಜಿಎ)– ಮೈಸೂರಿನ ರಾಜರಾಜೇಶ್ವರಿ ನಗರದ ಕೆಂಚಾಂಬ ಪ್ರೊಡಕ್ಷನ್ ವತಿಯಿಂದ ನಿರ್ಮಿಸಿರುವ 'ರೀ ಬರ್ತ್ ಆಫ್ ಪ್ರೇಮ' ಚಲನಚಿತ್ರ ಶೀಘ್ರದಲ್ಲೇ ತೆರೆಕಾಣಲಿದ್ದು, ಸಿನಿಮಾ ಪ್ರಿಯರು ಚಿತ್ರಮಂದಿರಗಳಲ್ಲಿ ವೀಕ್ಷಿಸಿ ಪ್ರೋತ್ಸಾಹಿಸ ಬೇಕೆಂದು ನಿರ್ಮಾಪಕಿ ಮಂಜುಳ ರುದ್ರೇಗೌಡ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮನವಿ ಮಾಡಿದರು.

ಚಲನಚಿತ್ರ ರಂಗದಲ್ಲಿ ಬಹಳಷ್ಟು ಕೆಲಸ ಮಾಡಿರುವ ಪ್ರಸನ್ನ ಕಲ್ಲೂರು ಚಿತ್ರವನ್ನು ನಿರ್ದೇಶಿಸಿದ್ದಾರೆ. ಸ್ವತಃ ನಾಯಕರಾಗಿಯೂ ನಟಿಸಿದ್ದು, ಶೈಲಾ ಸಹ ನಿರ್ಮಾಪಕರಾಗಿದ್ದಾರೆ. ಮೈಸೂರಿನ ಜೋಗಿ ಮಂಜು ಇನ್ನಿತರರು ತಾರಾಗಣದಲ್ಲಿದ್ದಾರೆ.

ಮಧ್ಯಮ ವಯಸ್ಸಿನ ಮಹಿಳೆ ಚಿಕ್ಕ ವಯಸ್ಸಿನಲ್ಲಿಯೇ ಪ್ರೀತಿಸಿ ವಿವಾಹವಾಗಿ ತಂದೆ ತಾಯಿ ಯಿಂದ ದೂರವಾಗಿರುತ್ತಾಳೆ. ಪತಿ ನಡು ನೀರಿನಲ್ಲಿ ಕೈಬಿಟ್ಟು ಹೋದ ಬಳಿಕದ ನಂತರದ ಆಕೆಯ ಹೋರಾಟದ ಎಳೆ ಚಿತ್ರದಲ್ಲಿ ಮೂಡಿ ಬಂದಿದೆ ಎಂದರು. ಗೋಷ್ಠಿಯಲ್ಲಿ ಸ್ನೇಕ್ ಶ್ಯಾಂ, ಶೋಭಾ ಇದ್ದರು.

ಉಪ್ಪಿನ ಸತ್ಯಾಗ್ರಹ ಸ್ಮರಣೆ



ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಚಾಮುಂಡೇಶ್ವರಿ ಯುವ ಬಳಗದಿಂದ ಗಾಂಧೀಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಉಪ್ಪಿನ ಸತ್ಯಾಗ್ರಹ ಆರಂಭಿಸಿದ ದಿನವನ್ನು ಸ್ಮರಿಸಿದರು. ಈ ವೇಳೆ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ರಮೇಶ್ ರಾಮಪ್ಪ, ರವಿಚಂದ್ರ, ವೆಂಕಟೇಶ್, ಕಡಕೊಳ ಶಿವು, ರಾಜೇಶ್, ಉಮೇಶ್, ರಾಕೇಶ್, ರಾಮಚಂದ್ರ, ಸುಚೇಂದ್ರ ರಾಜು, ನಿತಿನ್, ಗುರು ಹಾಗೂ ಇನ್ನಿತರರಿದ್ದರು.

ಲಯವಾದ್ಯ ಕಾರ್ಯಾಗಾರ; ಪರಮೇಶಿ ಪ್ರೇಮ ಪ್ರಸಂಗ ನಾಟಕ ಪ್ರದರ್ಶನ

ಮೈಸೂರು, ಮಾ.13– ಮೈಸೂರಿನ ರಂಗವಲ್ಲಿ ಸಂಸ್ಥೆ ಮತ್ತು ಹೊರೈಜಾನ್ ಸ್ಕೂಲ್ ಆಫ್ ಡ್ರಮ್ಸ್ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದಲ್ಲಿ ನಾಳೆ (ಮಾ. 14) ಬೆಳಿಗ್ಗೆ 10.30ಕ್ಕೆ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಒಂದು ದಿನದ ಡ್ರಮ್ ಕ್ಲಿನಿಕ್ ಲಯವಾದ್ಯ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಾಗಾರವನ್ನು ಹೆಸರಾಂತ ಡ್ರಮ್ ವಾದಕ ಜಿಯೋರಾಜ್ ಜಾರ್ಜ್ ನಡೆಸಿಕೊಡಲಿದ್ದಾರೆ. ಆಸಕ್ತರು 96209 60051, 9061643272 ಸಂಪರ್ಕಿಸಬಹುದು. ಅದೇ ದಿನ ಸಂಜೆ 6.30ಕ್ಕೆ ಕಿರುರಂಗ ಮಂದಿರ ವೇದಿಕೆಯಲ್ಲಿ ಹೊರೈಜ್ಹಾನ್ ಸ್ಕೂಲ್ ಆಫ್ ಡ್ರಮ್ಸ್ ಸಂಸ್ಥೆಯ ವಿದ್ಯಾರ್ಥಿಗಳು 'ಡ್ರಮ್ ಜಾಮ್' ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ರಂಗವಲ್ಲಿ ಮೈಸೂರು ಸಂಸ್ಥೆಯು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದಲ್ಲಿ ಮಾ.15 ರಂದು ಸಂಜೆ 6.30ಕ್ಕೆ 'ಪರಮೇಶಿ ಪ್ರೇಮ ಪ್ರಸಂಗ' ಹಾಸ್ಯ ನಾಟಕವನ್ನು ಪ್ರಸ್ತುತಪಡಿಸಲಿದೆ. ಹೆಸರಾಂತ ರಂಗ ನಿರ್ದೇಶಕ ಶ್ರೀನಿವಾಸ ಪ್ರಭು ಅವರು ರಚಿಸಿರುವ ಈ ನಾಟಕವನ್ನು ರವಿಪ್ರಸಾದ್ ನಿರ್ದೇಶಿಸಿದ್ದಾರೆ.

ಹೆಚ್ಚಿನ ಮಾಹಿತಿಗೆ ಮೊ.ನಂ.: 99646 56482 ಸಂಪರ್ಕಿಸಬಹುದು.

ಮಹಿಳೆಯರ ಜೊತೆ ಸೌಜನ್ಯದಿಂದ ವರ್ತಿಸಿ, ದರ್ಪ ಪ್ರದರ್ಶಿಸಬೇಡಿ...

ಪೊಲೀಸರಿಗೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ತಾಕೀತು

- ಪೊಲೀಸರು ತಮ್ಮ ವರ್ತನೆ ಬದಲಾಯಿಸಿಕೊಳ್ಳಬೇಕು
- ಒಬ್ಬ ಪೊಲೀಸ್ ತಪ್ಪು ಮಾಡಿದರೆ, ಇಡೀ ವ್ಯವಸ್ಥೆಗೆ ಕಪ್ಪು ಚುಕ್ಕೆ
- ಜನರನ್ನು ಅಲೆದಾಡಿಸಬೇಡಿ, ಜನ ಸ್ನೇಹಿಯಾಗಿ ಕಾರ್ಯ ನಿರ್ವಹಿಸಿ
- ಪೊಲೀಸ್ ಠಾಣೆ ಮಹಿಳೆಯರಿಗೆ ರಕ್ಷಣೆ ನೀಡುವ ತವರು ಮನೆ ಇದ್ದಂತೆ



ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಅವರು ಮಹಿಳಾ ಜನ ಸುನ್ವಾಯಿ ಕಾರ್ಯಕ್ರಮದ ಅಂಗವಾಗಿ ಸಭೆ ನಡೆಸಿದರು.

ಮೈಸೂರು, ಮಾ.13(ಬಿಎಲ್‌ಯು)– ಪೊಲೀಸರನ್ನು ಕಂಡರೆ ಜನರು ಮೊದಲೇ ಭಯ ಪಡುತ್ತಾರೆ, ಇಂತಹ ಸಂದರ್ಭದಲ್ಲಿ ದೂರು ಕೊಡಲು ಬರುವ ಮಹಿಳೆಯರ ಜೊತೆ ಪೊಲೀಸರು ಸೌಜನ್ಯಯುತವಾಗಿ ವರ್ತಿಸದೆ ದರ್ಪ ತೋರಿದರೆ ಮತ್ತಷ್ಟು ಹೆದರುತ್ತಾರೆ ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷ ಡಾ.ನಾಗಲಕ್ಷ್ಮಿ ಚೌಧರಿ ಗಂಭೀರವಾಗಿ ಪ್ರಸ್ತಾಪಿಸಿದರು.

ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಇಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಮಹಿಳಾ ಜನ ಸುನ್ವಾಯಿ (ಸಾರ್ವಜನಿಕ ವಿಚಾರಣೆ) ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ದೂರು ನೀಡಲು ಬರುವ ಮಹಿಳೆಯರ ಜೊತೆ ಒಬ್ಬನೆ ಒಬ್ಬ ಪೊಲೀಸ್ ಪೇದೆ ಸೌಜನ್ಯದಿಂದ ವರ್ತಿಸದೆ ಇದ್ದಾಗ, ಈ ವಿಚಾರ ಇಂದಿನ ಸಾಮಾಜಿಕ ಜಾಲತಾಣದಲ್ಲಿ ಪ್ರಚಾರವಾಗಿ ಇಡೀ ಪೊಲೀಸ್ ವ್ಯವಸ್ಥೆ ಬಗ್ಗೆ ಕೆಟ್ಟ ಹೆಸರು ಬರುತ್ತದೆ. ಈ ಇಂತಹ ಕೆಟ್ಟ ಬೆಳವಣಿಗೆ ನಡೆಯಲು ಬಿಡಬಾರದು ಎಂದು ಸಲಹೆ ನೀಡಿದರು.

ಯಾವುದೇ ಪ್ರಕರಣವಿರಲಿ, ಆತ ಅಪರಾಧಿ ಅಥವಾ ನಿರಪರಾಧಿ ಎಂದು ನಿರ್ಧಾರ ಮಾಡುವುದು ನ್ಯಾಯಾಲಯ. ಈ ವಿಚಾರದ ಗೋಜಿಗೆ ಹೋಗುವುದು ಬೇಡ. ಆದರೆ ಪೊಲೀಸ್ ಠಾಣೆಗೆ ಬರುವ ಮಹಿಳೆಯರ ಜೊತೆ ಸೌಜನ್ಯದಿಂದ ವರ್ತಿಸ ಬೇಕು, ಈ ವಿಚಾರವಾಗಿ ಪೊಲೀಸರು ತಮ್ಮ ವರ್ತನೆಯನ್ನು ಬದಲಾಯಿಸಿಕೊಳ್ಳ ಬೇಕು ಎಂದು ಡಾ.ನಾಗಲಕ್ಷ್ಮಿ ಚೌದರಿ ಸೂಚಿಸಿದರು.

ಪೊಲೀಸರು ತಮ್ಮೊಡನೆ ಸರಿಯಾಗಿ ವರ್ತಿಸುವುದಿಲ್ಲ, ಪೋಸ್ಟ್ ಮಾರ್ಟಂ ರಿಪೋರ್ಟ್ ಪಡೆಯಲು ಅಲೆದಾಡಿಸುತ್ತಾರೆ ಎಂದು ನಾನು ಹೋದ ಕಡೆಯೆಲ್ಲಾ ಜನರು ದೂರುತ್ತಾರೆ. ಆದರೆ ಇನ್ನು ಮುಂದೆ ಇಂತಹ ಅವ್ಯವಸ್ಥೆ ಎದುರಾಗಬಾರದು. ಪೊಲೀಸರು ಜನಸ್ನೇಹಿಯಾಗಬೇಕು, ಜನರ ಕೆಲಸ ಮಾಡಿಕೊಡಲು ಅಲೆದಾಡಿಸಬಾರದು ಎಂದು ಸಲಹೆ ನೀಡಿದರು.

ಪೊಲೀಸ್ ಠಾಣೆ ಮಹಿಳೆಯರಿಗೆ ತವರು ಮನೆ ಇದ್ದಂತೆ, ತಮ್ಮನ್ನು ಕಾಪಾಡುವ ಹಾಗೂ ತಮಗೆ ರಕ್ಷಣೆ ನೀಡುವ ಮನೆ ಎಂದು ಜನರು ವಿಶ್ವಾಸ ಹೊಂದಿರುತ್ತಾರೆ. ಇದನ್ನು ಪೊಲೀಸರು ಉಳಿಸಿಕೊಳ್ಳಬೇಕು ಎಂದು ಹೇಳಿದರು.

ಪೊಲೀಸರು ಜನರ ನಂಬಿಕೆ ಉಳಿಸಿಕೊಳ್ಳದಿದ್ದರೆ, ಇಡೀ ಪೊಲೀಸ್ ವ್ಯವಸ್ಥೆ ವಿಫಲವಾದಂತೆ. ಬಹುತೇಕ ಪೊಲೀಸರು ಸೌಜನ್ಯದಿಂದ ವರ್ತಿಸುತ್ತಾರೆ, ಆದರೆ ಅಲ್ಲೊ, ಇಲ್ಲೊ ಯಾರೊ ಒಬ್ಬ ಪೊಲೀಸ್ ಸಿಬ್ಬಂದಿ ತನ್ನ ಕರ್ತವ್ಯದಲ್ಲಿ ಲೋಪವೆಸಗಿದರೆ ಇಡೀ ಪೊಲೀಸ್ ವ್ಯವಸ್ಥೆ ವೈಫಲ್ಯಕ್ಕೆ ಗುರಿಯಾಗಬೇಕಾಗುತ್ತದೆ. ಆದ ಕಾರಣ ಪೊಲೀಸರು ಎಚ್ಚರಿಕೆಯಿಂದ ಕೆಲಸ ಮಾಡಬೇಕು ಎಂದು ಡಾ.ನಾಗಲಕ್ಷ್ಮಿ ಚೌದರಿ ಕಿವಿಮಾತು ಹೇಳಿದರು.

ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಪಾಷ್ (Posch) ಸಮಿತಿ ಇದ್ದು, ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಸಭೆ ನಡೆಸಿ ಪರಿಶೀಲನೆ ಮಾಡಬೇಕು ಎಂದು ತಾಕೀತು ಮಾಡಿದರು.

ಲಿಂಗ ಸೂಕ್ಷ್ಮತೆ ಸೇರಿದಂತೆ ಸರ್ಕಾರ ನಿರ್ದೇಶಿಸಿರುವ ಇತರೆ ಕಾರ್ಯಕ್ರಮಗಳು, ಮಹಿಳೆಯರು ಹಾಗೂ ಬಾಲಕಿಯರ ನಾಪತ್ತೆ, ಮಾನವ ಕಳ್ಳಸಾಗಾಣಿಕೆ ಸೇರಿದಂತೆ ಇತರೆ ವಿಚಾರಗಳ ಬಗ್ಗೆ ವಿವರ ನೀಡುವಂತೆ ಡಾ.ನಾಗಲಕ್ಷ್ಮಿ ಚೌದರಿ ಸೂಚಿಸಿದರು.

ಅಪರ ಜಿಲ್ಲಾಧಿಕಾರಿ ಡಾ.ಶಿವರಾಜ್, ಡಿಸಿಪಿ ಸುಂದರ್ ರಾಜ್, ಮಹಿಳಾ ಆಯೋಗದ ಕಾರ್ಯದರ್ಶಿ ರೂಪ ಅವರು ಉಪಸ್ಥಿತರಿದ್ದರು.

ಸೀರೆ ಧರಿಸಿ ಬಾ... ವಯೋವೃದ್ಧರ ನಿಂದಿಸಿದ ಪೊಲೀಸ್ ಇನ್ಸ್‌ಪೆಕ್ಟರ್...!

ದೂರು ಕೊಡಲು ಹೋದ ನಮ್ಮ ವಯೋವೃದ್ಧ ತಂದೆಗೆ ಪೊಲೀಸ್ ಇನ್ಸ್‌ಪೆಕ್ಟರ್ ಒಬ್ಬರು ನೀನು ಸೀರೆ ಧರಿಸಿ ಬಾ ಎಂದು ಅತ್ಯಂತ ಹೀನಾಯವಾಗಿ ನಿಂದಿಸಿದರು ಎಂದು ಮೈಸೂರು ಜಿಲ್ಲೆ ನಂಜನಗೂಡು ತಾಲೂಕಿನ ದೊಡ್ಡ ಕವಲಂದೆಯ ಪದ್ಮ ಎಂಬಾಕೆ ತಮ್ಮ ಅಳಲು ತೋಡಿಕೊಂಡರು.

ಪಿತ್ರಾರ್ಜಿತ ಆಸ್ತಿ ಸಂಬಂಧ ಗಲಾಟೆ ವಿಚಾರವಾಗಿ ದೂರು ನೀಡಲು ಹೋದ ನಮ್ಮ ತಂದೆ ಹಾಗೂ ನಮ್ಮ ಜೊತೆ, ಅಲ್ಲಿನ ಇನ್ಸ್‌ಪೆಕ್ಟರ್ ಸೌಜನ್ಯದಿಂದ ವರ್ತಿಸಲಿಲ್ಲ. ನೀನು ಸೀರೆ ಧರಿಸಿ ಬಾ ಎಂದು ನಮ್ಮ ತಂದೆಗೆ ಹೀನಾಯವಾಗಿ ನಿಂದಿಸಿದರು.

ಮಹಿಳೆಯರಾದ ನಮ್ಮೊಡನೆ ಕೂಡ ನಿಂದನೀಯ ವರ್ತನೆ, ದರ್ಪ ಮೆರೆದರು. ಬಹಳ ಅಸಭ್ಯವಾದ ಮಾತುಗಳಿಂದ ನಮ್ಮನ್ನು ನಿಂದಿಸಿದರು. ಈ ರೀತಿಯಾದರೆ ಯಾವ ಧೈರ್ಯದ ಮೇಲೆ ಪೊಲೀಸ್ ಠಾಣೆಗೆ ಹೋಗುವುದು ಎಂದು ಪದ್ಮ ಪ್ರಶ್ನಿಸಿದರು.

ಈ ವೇಳೆ ಅಡಿಷನಲ್ ಎಸ್ಪಿ ನಾಗೇಶ್ ಅವರು, ಸ್ವಲ್ಪ ಏರು ಧ್ವನಿಯಲ್ಲಿ ಸ್ಪಷ್ಟನೆ ನೀಡಲು ಮುಂದಾದರು.

ತಕ್ಷಣವೇ ಮಧ್ಯ ಪ್ರವೇಶಿಸಿದ ಡಾ.ನಾಗಲಕ್ಷ್ಮಿ ಚೌದರಿ, ಪೊಲೀಸರು ಇಲ್ಲೇ ತಪ್ಪು ಮಾಡುತ್ತಿರುವುದು. ನೀವು ಮೆಲು ಧ್ವನಿಯಲ್ಲಿ ಮಾತನಾಡಿ, ಅವರನ್ನು ಹೆದರಿಸುವಂತೆ ಮಾತನಾಡಬೇಡಿ, ಪ್ರೀತಿಯಿಂದ ಮಾತನಾಡುವುದನ್ನು ಕಲಿಯಿರಿ ಎಂದು ಸಲಹೆ ನೀಡಿದರು.

ನಿರ್ಭೀತಿಯಿಂದ ದೂರು ಕೊಡಿ, ರಕ್ಷಣೆ ನೀಡುತ್ತೇವೆ

ಯಾವುದೇ ತೊಂದರೆ ಇದ್ದರೂ ಮಹಿಳೆಯರು ನಿರ್ಭೀತಿಯಿಂದ ದೂರು ಕೊಟ್ಟರೆ ಅವರಿಗೆ ರಕ್ಷಣೆ ನೀಡುವುದಾಗಿ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಭರವಸೆ ನೀಡಿದರು.

ಪ್ರತಿ ತಿಂಗಳ ಭಾನುವಾರದಂದು ಪ್ರತಿ ಪೊಲೀಸ್ ಠಾಣೆಯಲ್ಲಿ ಸಂತ್ರಸ್ತೆ ದಿನವಾಗಿ ಆಚರಣೆ ಮಾಡಲಾಗುವುದು. ಅಲ್ಲದೆ ಜನ ಸಂಪರ್ಕ ಸಭೆ, ಎಸ್‌ಸಿ–ಎಸ್‌ಟಿ ಸಭೆ ಸೇರಿದಂತೆ ಇತರೆ ಸಭೆಗಳನ್ನು ನಡೆಸಲಾಗುವುದು. ಜನರ ಸಮಸ್ಯೆ ಪರಿಹಾರ ಮಾಡುವ ನಿಟ್ಟಿನಲ್ಲಿ ಪರಿಣಾಮಕಾರಿ ಹಾಗೂ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಈ ವಿಚಾರವಾಗಿ ಸರ್ಕಾರದ ನಿರ್ದೇಶನವನ್ನು ಕಟ್ಟು ನಿಟ್ಟಾಗಿ ಪಾಲಿಸಿ, ಸಂಬಂಧಪಟ್ಟ ಇಲಾಖೆಗೆ ವರದಿ ಕೂಡ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಹೆಣ್ಣು ಮಕ್ಕಳ ರಕ್ಷಣೆಗಾಗಿ 'ಅಕ್ಕ ಪಡೆ' ಶಾಲಾ–ಕಾಲೇಜುಗಳ ಬಳಿ ಗಸ್ತು ತಿರುಗುತ್ತದೆ. ಹೆಣ್ಣು ಮಕ್ಕಳಿಗೆ ಯಾವುದೇ ತೊಂದರೆ ಆಗದಂತೆ ಈ ಪಡೆ ರಕ್ಷಣೆ ನೀಡುತ್ತದೆ ಎಂದು ಸೀಮಾ ಲಾಟ್ಕರ್ ಮಾಹಿತಿ ನೀಡಿದರು.

ಡ್ರಗ್ಸ್ ಮುಕ್ತ ಮೈಸೂರು ಮಾಡಲು ವಿಮುಕ್ತಿ ಅಭಿಯಾನ ಆರಂಭಿಸಿದ್ದು, ಮಾದಕ ದ್ರವ್ಯಗಳ ಸಾಗಾಣಿಕೆ, ಮಾರಾಟ, ಖರೀದಿ ಸೇರಿದಂತೆ ಇತರೆ ದೂರುಗಳಿದ್ದರೆ 82779 48080ಗೆ ವಾಟ್ಸ್ ಆಪ್ ಮೂಲಕ ದೂರು ನೀಡಬಹುದು. ಹೀಗೆ ದೂರು ನೀಡುವವರ ಬಗ್ಗೆ ಗೌಪ್ಯತೆ ಕಾಪಾಡಲಾಗುವುದು ಎಂದರು.

ಮಾದಕ ವಸ್ತುಗಳ ಸೇವನೆ ಕುರಿತಂತೆ ತಮ್ಮ ಮಕ್ಕಳು ಅಡ್ಡದಾರಿ ಹಿಡಿಯದಂತೆ ಪೋಷಕರು ಹಾಗೂ ಶಾಲಾ ಶಿಕ್ಷಕರು ಕೂಡ ಜವಾಬ್ದಾರಿ ವಹಿಸಬೇಕು. ಮಕ್ಕಳ ವರ್ತನೆಯಲ್ಲಿ ಏನಾದರೂ ಬದಲಾವಣೆ ಕಂಡು ಬಂದರೆ ಗುರುತಿಸಬೇಕು. ಮೈಸೂರಿನಲ್ಲಿ 15 ಲಕ್ಷ ಜನಸಂಖ್ಯೆ ಇದ್ದು, 2 ಸಾವಿರ ಪೊಲೀಸರಿದ್ದಾರೆ. ಪ್ರತಿಯೊಂದು ಸಮಸ್ಯೆ ಪರಿಹಾರ ಮಾಡುವ ಪೂರ್ಣ ಜವಾಬ್ದಾರಿಯನ್ನು ಪೊಲೀಸ್ ಇಲಾಖೆ ಒಂದರ ಮೇಲೆ ಹೊರಿಸುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು.

ಅತ್ಯಾಚಾರ, ಲೈಂಗಿಕ ಕಿರುಕುಳ, ವರದಕ್ಷಿಣೆ ಕಿರುಕುಳ ಸೇರಿದಂತೆ ಅಪರಾಧ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿದೆ ಎಂದು ಇದೇ ವೇಳೆ ಸೀಮಾ ಲಾಟ್ಕರ್ ಅಂಕಿ ಅಂಶಗಳ ಸಹಿತ ಮಾಹಿತಿ ನೀಡಿದರು.

ಈ ವೇಳೆ ಮಾತನಾಡಿದ ಎಸಿಪಿ ಗಂಗಾಧರ್ ಸ್ವಾಮಿ, ಮಾನವ ಕಳ್ಳ ಸಾಗಾಣಿಕೆ ತಡೆಗಟ್ಟಲು ಪ್ರತ್ಯೇಕ ಪೊಲೀಸ್ ತಂಡ ಕಾರ್ಯ ನಿರ್ವಹಿಸುತ್ತಿದೆ. ಪ್ರತಿ ಗುರುವಾರ ತೆರೆದ ಮನೆ ಕಾರ್ಯಕ್ರಮ, ಎರಡು ತಿಂಗಳಿಗೊಮ್ಮೆ ವಿವಿಧ ಇಲಾಖೆ ಹಾಗೂ ಎನ್ ಜಿಒಗಳ ಜೊತೆ ಸಭೆ ನಡೆಸಲಾಗುವುದು ಎಂದು ವಿವರಣೆ ನೀಡಿದರು.

ಪದ್ಮಶ್ರೀ ಡಾ.ಪಂಡಿತ್ ಎಂ.ವೆಂಕಟೇಶ್‌ಕುಮಾರ್‌ಗೆ 'ಗಾನಯೋಗಿ' ಪ್ರಶಸ್ತಿ

ಮೈಸೂರು: ಮೈಸೂರಿನ ಶ್ರೀ ಗಾನಯೋಗಿ ಕಲಾ ಟ್ರಸ್ಟ್ ವತಿಯಿಂದ ಶ್ರೀ ಗಾನಯೋಗಿ ಪಂಡಿತ್ ಪಂಚಾಕ್ಷರಿ ಗವಾಯಿಗಳವರ 135ನೇ ಜಯಂತಿ, ಡಾ.ಪಂಡಿತ್ ಪುಟ್ಟರಾಜ ಗವಾಯಿ ಗಳವರ 112ನೇ ಜಯಂತಿ ಅಂಗವಾಗಿ, 'ಗಾನ ಯೋಗಿ' ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಮಾ.15 ರಂದು ಬೆಳಗ್ಗೆ 10 ಗಂಟೆಗೆ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಖ್ಯಾತ ಹಿಂದೂಸ್ಥಾನಿ ಗಾಯಕ, ಪದ್ಮಶ್ರೀ ಡಾ.ಪಂಡಿತ್ ಎಂ.ವೆಂಕಟೇಶ್ ಕುಮಾರ್ ಅವರಿಗೆ 'ಗಾನಯೋಗಿ' ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು ಎಂದು ಶ್ರೀ ಗಾನಯೋಗಿ ಕಲಾ ಟ್ರಸ್ಟ್‌ನ ಅಧ್ಯಕ್ಷ ಡಾ.ಹೆಚ್.ಎನ್.ಲೋಕೇಶಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು: ನಿರ್ವಹಣಾ ಕಾಮಗಾರಿ ನಿಮಿತ್ತ ಮಾ.15 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಕಡಕೊಳ, ಕೆ.ಐ.ಎ.ಡಿ.ಬಿ ಇಂಡಸ್ಟ್ರೀಯಲ್ ಏರಿಯಾ, ಬ್ಯಾತಹಳ್ಳಿ, ಸಿಂಧುವಳ್ಳಿ, ದಡದಹಳ್ಳಿ, ದೊಡ್ಡಕಾನ್ಯ, ಚಿಕ್ಕಕಾನ್ಯ, ಮರಸೆ, ಮಾಕನಹುಂಡಿ, ಕೂಡನಹಳ್ಳಿ, ಕೋಚನಹಳ್ಳಿ, ವಿಮಾನ ನಿಲ್ದಾಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.3.2026 ಶನಿವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ 4.03.2026 ರಿಂದ 17.03.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಉತ್ತರಾಷಾಢ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

■ **ಒಡನಾಡಿ ಸೇವಾ ಸಂಸ್ಥೆ :** ಯೋಗಾ ಸ್ಟಾಪ್ಸ್ ಟ್ರಾಫಿಕಿಂಗ್ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 7.30ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30 ರಿಂದ ಕಿಡ್ನಿ ಆರೋಗ್ಯ ತಪಾಸಣೆ ಮತ್ತು ವಸಂತ ವಮನ ದೇಹಶುದ್ಧಿ ಚಿಕಿತ್ಸಾ ಶಿಬಿರ, ಪಿಸಿಒಡಿ ತೊಂದರೆಗೆ ಚಿಕಿತ್ಸಾ ಶಿಬಿರ, ಪೈಲ್ಸ್, ಮೂಲವ್ಯಾಧಿ, ಫಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್ ಕಾಯಿಲೆಗಳಿಗೆ ಉಚಿತ ತಪಾಸಣೆ, ಸಲಹಾ ಶಿಬಿರ, ಕುತ್ತಿಗೆ ಹಾಗೂ ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಪಿಸಿಒಡಿ ಮತ್ತು ಕುತ್ತಿಗೆ ನೋವು ಬಗ್ಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು, ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿಯಮಿತ :** ಸೌಹಾರ್ದ ಸಹಕಾರಿಯ ರಜತ ಸಂಭ್ರಮ, ಉದ್ಘಾಟನೆ : ಅಧ್ಯಕ್ಷ ಜಿ. ನಂಜನಗೌಡ, ಸಹಕಾರ ಧ್ವಜಾರೋಹಣ : ಮಾಜಿ ಅಧ್ಯಕ್ಷ ಜಿ.ಹೆಚ್. ಕೃಷ್ಣಾರೆಡ್ಡಿ, ಮುಖ್ಯ ಅತಿಥಿಗಳು : ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಅಧ್ಯಕ್ಷತೆ : ಒಕ್ಕೂಟದ ಅಧ್ಯಕ್ಷ ಎಸ್.ಆರ್. ನಾರಾಯಣರಾವ್, ಸ್ಥಳ: ರಮಾಗೋವಿಂದ ರಂಗ ಮಂದಿರ, ರಾಮಕೃಷ್ಣನಗರ, ಬೆಳಗ್ಗೆ 10ಕ್ಕೆ.

■ **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್ :** ರಾಷ್ಟ್ರೀಯ ಭಾವೈಕ್ಯತಾ ಶಿಬಿರ, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಬೆಳಗ್ಗೆ 10 ರಿಂದ.

■ **ಅಖಿಲ ಭಾರತ ಇನ್ಸೂರೆನ್ಸ್ ಪೆನ್ಷನರ್ಸ್ ಅಸೋಸಿಯೇಷನ್ :** ರಾಜ್ಯ ಮಟ್ಟದ ಮಹಿಳಾ ಇನ್ಸೂರೆನ್ಸ್ ಪೆನ್ಷನರ್ಸ್ ಸಮಾವೇಶ, ಉದ್ಘಾಟನೆ : ಎಐಐಪಿಎ ಪ್ರಧಾನ ಕಾರ್ಯದರ್ಶಿ ಎಂ. ಕುನ್ನಿಕೃಷ್ಣನ್, ಮುಖ್ಯ ಅತಿಥಿಗಳು : ನಿವೃತ್ತ ಪ್ರಾಧ್ಯಾಪಕರಾದ ಶ್ರೀಮತಿ ಶೈಲಜಾ ವೇಣುಗೋಪಾಲ್, ಅಮಾನುಲ್ಲಾ ಖಾನ್, ಬಿ. ಭಾಸ್ಕರ್ ಸೋಮಯಾಜಿ, ಸ್ಥಳ: ಕ್ಯಾಥೋಲಿಕ್ ಸೆಂಟರ್, ಬೆಳಗ್ಗೆ 10.15 ರಿಂದ.

■ **ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ :** ಮಹಿಳೆಯರಿಗಾಗಿ ವೇಷಭೂಷಣ ಸ್ಪರ್ಧೆ, ಸ್ಥಳ: ಬ್ರಹ್ಮಾಕುಮಾರೀಸ್, ಜ್ಞಾನಪ್ರಕಾಶ ಭವನ, ಯಾದವಗಿರಿ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ರಕ್ಷಣಾ ಸಮಿತಿ :** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಯೋಧರ ತಾಯಂದಿರು, ಮಡದಿಯರಿಗೆ ಅಭಿನಂದಿಸುವ ಕಾರ್ಯಕ್ರಮ, ಉದ್ಘಾಟನೆ : ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ, ಮುಖ್ಯ ಅತಿಥಿಗಳು : ಎಂಎಲ್‌ಸಿ ಡಾ. ಯತೀಂದ್ರ ಸಿದ್ದರಾಮಯ್ಯ, ಶಾಸಕರಾದ ಹರೀಶ್‌ಗೌಡ, ತನ್ವೀರ್‌ಸೇಠ್, ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಸ್ಥಳ: ಪುರಭವನ, ಬೆಳಗ್ಗೆ 11.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪತ್ರಿಕಾಧ್ವನಿ – ಮೈಸೂರು ಸೀಮೆಯ ಪತ್ರಕರ್ತರ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ : ಹಿರಿಯ ಪತ್ರಕರ್ತರಾದ ಡಾ. ಕೂಡ್ಲಿ ಗುರುರಾಜ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಅಂಬಯ್ಯನುಲಿ, ದೀಪಿಕಾ ಪಾಂಡುರಂಗಿ ಹಾಗೂ ಎಂ.ಎ. ಶೋಭಾ, ವ್ಯಾಖ್ಯಾನ–ಡಾ. ಕಬ್ಬಿನಾಲೆ ವಸಂತ ಭಾರಧ್ವಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ವಿಜಯಶ್ರೀ ವೈದ್ಯನಾದನ್ ಹಾಗೂ ಶ್ರೀವಿದ್ಯಾ ಸರಸ್ವತುಲ–ಯುಗಳ ಗಾಯನ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ–ರೂಪಾಯಿ ನಿನ್ನ ನುಂಗಿತ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ : ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ ಕುರಿತು ಸಂವಾದ ಭಾಗವಹಿಸುತ್ತಾರೆ ಮೈಸೂರು ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರಾದ ಬೀರೇಂದ್ರ ಮತ್ತು ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆಯ ಕಛೇರಿ ಅಧೀಕ್ಷಕರಾದ ಎಂ.ಎಸ್. ಪೂಜಾ, ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಸವಿನೆನಪು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

■ **ಕರ್ನಾಟಕ ಸೇನಾ ಪಡೆ :** ಕೆಂಗಲ್ ಹನುಮಂತಯ್ಯ ಜಯಂತಿ, ವಿವಿಧ ಕ್ಷೇತ್ರಗಳ ಸಾಧಕರಿಗೆ ಕೆಂಗಲ್ ಹನುಮಂತಯ್ಯ ಸೇವಾರತ್ನ ಪ್ರಶಸ್ತಿ ಪ್ರದಾನ, ಮಹಾರಾಣಿ ವಿಜ್ಞಾನ ಕಾಲೇಜಿನ ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ, ಸಾನ್ನಿಧ್ಯ : ವಿಶ್ವ ಒಕ್ಕಲಿಗರ ಮಹಾಸಂಸ್ಥಾನದ ಪೀಠಾಧಿಪತಿ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ, ಉಪಸ್ಥಿತರು : ಪ್ರೊ. ಭಾಷ್ಯಂ ಸ್ವಾಮೀಜಿ, ಉದ್ಘಾಟನೆ : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ, ಪುಷ್ಪಾರ್ಚನೆ : ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಉಪಸ್ಥಿತರು : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಡಾ. ಎಂ.ಬಿ. ಮಂಜೇಗೌಡ, ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್, ಕರ್ನಾಟಕ ಸೇನಾ ಪಡೆ ರಾಜ್ಯಾಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ, ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜಿ. ಗಂಗಾಧರ್, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11.30ಕ್ಕೆ.

■ **ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ್ :** ಮಾಹಿತಿ ಕೇಂದ್ರದ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಹೆಚ್.ಡಿ. ಕುಮಾರಸ್ವಾಮಿ, ಸ್ಥಳ: ಬ್ಯಾಂಕ್ ಆವರಣ, ಶೇಷಾದ್ರಿ ಅಯ್ಯರ್ ರಸ್ತೆ, ಸಂಜೆ 4.30ಕ್ಕೆ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 923, ಕಥೆ ಹೇಳುವವರು: ಡಾ. ಕೃಷ್ಣಮೂರ್ತಿ ಎ ಆರ್, ನಿವೃತ್ತ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕ್ಲಿನಿಕಲ್ ಸೈಕಾಲಜಿ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ 5.30 ರವರೆಗೆ

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ವೇಣು ವಿದ್ವಾನ್ ಎ.ವಿ. ಪ್ರಕಾಶ್ ಸಂಸ್ಮರಣಾ ಸಂಗೀತ ಕಾರ್ಯಕ್ರಮ, ವಿದುಷಿ ಸಿಂಧು ಸುಚೇತನ್ ಮತ್ತು ವಿದುಷಿ ಹೆಚ್.ಎಂ. ಸ್ಮಿತಾ ಅವರಿಂದ ದ್ವಂದ್ವ ಗಾಯನ, ವಿದ್ವಾನ್ ಹೆಚ್.ಎನ್. ಭಾಸ್ಕರ್–ಪಿಟೀಲು, ವಿದ್ವಾನ್ ಅರ್ಜುನ್ ಕುಮಾರ್–ಮೃದಂಗ, ವಿದ್ವಾನ್ ಜಿ.ಎಸ್. ರಾಮಾನುಜನ್–ಘಟಂ, ಸ್ಥಳ: ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ, ನಾರಾಯಣಶಾಸ್ತ್ರಿ ರಸ್ತೆ, ಸಂಜೆ 6ಕ್ಕೆ.

■ **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಹಂದಿ–ಮಂದಿ ನಾಟಕ ಪ್ರದರ್ಶನ, ನಿರ್ದೇಶನ : ಶಕೀಲ್ ಅಹ್ಮದ್, ಸ್ಥಳ: ಭೂಮಿಗೀತ, ರಂಗಾಯಣ, ಸಂಜೆ 6.30ಕ್ಕೆ.

■ **ಶ್ರೀ ವಾಲ್ಮೀಕಿ ಕಲಾ ಸಂಘ :** ಸುತ್ತೂರಿನ ಶ್ರೀ ಮಾಳಿಗೇಶ್ವರಿ ಅಮ್ಮನವರ ಹಬ್ಬದ ಪ್ರಯುಕ್ತ ಕನಸು ರಮೇಶ್ ವಿರಚಿತ ಸಂಸಾರ ಬಂಧನ ನಾಟಕ ಪ್ರದರ್ಶನ, ಸ್ಥಳ: ಸುತ್ತೂರು, ರಾತ್ರಿ 9ಕ್ಕೆ

ಒಡಿಶಾ ಕೈ ಶಾಸಕರಿಗೆ ಬಿಡದಿಯಲ್ಲಿ ಡಿಕೆಶಿ ಆಶ್ರಯ

ಆರು ವರ್ಷದ ಹಿಂದೆ ಗುಜರಾತ್ ಶಾಸಕರಿಗೆ ರಕ್ಷಣೆ ನೀಡಿದ್ದರು



ಬಿಡದಿಯ ಸಮೀಪದ ವಂಡರ್ ಲಾ ರೆಸಾರ್ಟ್‌ನಲ್ಲಿ ಒಡಿಶಾ ಕೈ ಶಾಸಕರೊಂದಿಗೆ ಡಿಸಿಎಂ ಡಿ.ಕೆ.ಶಿವಕುಮಾರ್

ಬೆಂಗಳೂರು, ಮಾ.13(ಕೆಎಂಶಿ)– ಕಾಂಗ್ರೆಸ್ ಪಕ್ಷ ರಾಷ್ಟ್ರೀಯ ಮಟ್ಟದಲ್ಲಿ ಸಂಕಷ್ಟಕ್ಕೆ ಸಿಲುಕಿದಾಗ ಅದರ ರಕ್ಷಣೆಗೆ ಆಪದ್ಬಾಂಧವರಂತೆ ಧಾವಿಸುವುದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್.

ಈ ಹಿಂದೆ ಹಲವಾರು ಬಾರಿ ಕಾಂಗ್ರೆಸ್ ಸಂಕಷ್ಟಕ್ಕೆ ಸಿಲುಕಿದಾಗ ಅದರ ರಕ್ಷಣೆಗೆ ನಿಂತ ಶಿವಕುಮಾರ್ ಅವರು ಇದಕ್ಕಾಗಿ ತಾವು ಅನೇಕ ಸಲ ಕಷ್ಟಕ್ಕೆ ಸಿಲುಕಿದ್ದಾರೆ. ಅದರೂ ಕಾಂಗ್ರೆಸ್‌ನ ಕಷ್ಟ ಕಾಲದಲ್ಲಿ ಕೈ ಹಿಡಿಯುವುದನ್ನು ಬಿಟ್ಟಿಲ್ಲ. ಈಗ ಒಡಿಶಾದಲ್ಲಿ ನಡೆಯಲಿರುವ ರಾಜ್ಯಸಭಾ ಚುನಾವಣೆ ಹಿನ್ನೆಲೆಯಲ್ಲಿ ಅಡ್ಡ ಮತದಾನದ ಭೀತಿ ಹೆಚ್ಚಾಗಿರುವುದರಿಂದ ಅಲ್ಲಿನ ಕಾಂಗ್ರೆಸ್ ಶಾಸಕರು ಬೆಂಗಳೂರಿಗೆ ಬಂದಿದ್ದಾರೆ. ಡಿ.ಕೆ.ಶಿವಕುಮಾರ್, ಅವರಿಗೆ ಬಿಡದಿಯ ಸಮೀಪದ ವಂಡರ್ ಲಾ ರೆಸಾರ್ಟ್‌ನಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿದ್ದಾರೆ.

ಭುವನೇಶ್ವರದಿಂದ ಇಂಡಿಗೋ ವಿಮಾನದಲ್ಲಿ ಕಳೆದ ರಾತ್ರಿ 11 ಗಂಟೆಗೆ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಶಾಸಕರನ್ನು ವಿಮಾನ ನಿಲ್ದಾಣದಿಂದ ಪೊಲೀಸ್ ಬಂದೋಬಸ್ತ್ ಮತ್ತು ಎಸ್ಕಾರ್ಟ್ ವ್ಯವಸ್ಥೆಯೊಂದಿಗೆ ಶಾಸಕರನ್ನು ನೇರವಾಗಿ ವಂಡರ್ ಲಾ ರೆಸಾರ್ಟ್‌ಗೆ ಕರೆದೊಯ್ಯಲಾಯಿತು. ಶಾಸಕರು ವಾಸ್ತವ್ಯದ ರೆಸಾರ್ಟ್‌ನಲ್ಲಿ ವಿಶೇಷ ಭದ್ರತೆ ವ್ಯವಸ್ಥೆ ಮಾಡಲಾಗಿದೆ.

ಈ ತಂಡದಲ್ಲಿ ಶಾಸಕರಾದ ಮಂಗು ಖಿಲಾ, ಅಪ್ಪಲ ಸ್ವಾಮಿ, ರಾಜನ್ ಎಕ್ಕಾ, ಅಶೋಕ್ ಕುಮಾರ್ ಸೇರಿದಂತೆ ಹಲವು ನಾಯಕರು ಇದ್ದಾರೆ. ಜೊತೆಗೆ ಮಾಜಿ ಸಂಸದ ಭಕ್ತ ಚರಣ್ ದಾಸ್ ಹಾಗೂ ಕಾಂಗ್ರೆಸ್ ವಕ್ತಾರ ದುರ್ಗಾ ಪ್ರಸಾದ್ ಪಾಂಡ ಸೇರಿ ಒಟ್ಟು ಸುಮಾರು 14 ಮಂದಿ ಬಂದಿದ್ದಾರೆ. 147 ಸದಸ್ಯ ಬಲದ ಒಡಿಶಾ ವಿಧಾನಸಭೆಯಲ್ಲಿ ಬಿಜೆಡಿ 50 ಸ್ಥಾನಗಳನ್ನು ಹೊಂದಿದ್ದರೆ, ಕಾಂಗ್ರೆಸ್‌ನ 14 ಶಾಸಕರಿದ್ದಾರೆ. ಬಿಜೆಡಿ ಅಧಿಕೃತ ಅಭ್ಯರ್ಥಿಯಾಗಿ ಡಾ.ಸ್ನಾಂತ್ರನ್ ಮಿಶ್ರಾ ಅವರನ್ನು ನಾಮನಿರ್ದೇಶನ ಮಾಡಿದೆ. ನಾಲ್ಕನೇ ಸ್ಥಾನಕ್ಕೆ ಡಾ. ದತ್ತೇಶ್ವರ್ ಹೋಟಾ ಅವರನ್ನು ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಸಿದೆ. ಕಾಂಗ್ರೆಸ್ ಅವರ ಉಮೇದುವಾರಿಕೆಗೆ ಬೆಂಬಲ ನೀಡಿದೆ.

ಮತ್ತೊಂದೆಡೆ, ಆಡಳಿತಾರೂಢ ಬಿಜೆಪಿ 79 ಶಾಸಕರ ಬೆಂಬಲ ಹೊಂದಿದ್ದು, ಇಬ್ಬರು ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಜೊತೆಗೆ ಸ್ವತಂತ್ರ ಅಭ್ಯರ್ಥಿ ದಿಲೀಪ್ ರೇ ಅವರಿಗೆ ಸಹ ಬೆಂಬಲ ನೀಡಿದೆ. ಹೀಗಾಗಿ ಚುನಾವಣಾ ಅಖಾಡ ಕುತೂಹಲ ಮೂಡಿಸಿದೆ. ಚುನಾವಣೆಯಲ್ಲಿ ಒಬ್ಬ ಅಭ್ಯರ್ಥಿ ಗೆಲ್ಲಲು ಕನಿಷ್ಠ 30 ಪ್ರಥಮ ಪ್ರಾಶಸ್ತ್ಯದ ಮತಗಳು ಅಗತ್ಯವಿದೆ. ಬಿಜೆಡಿ ತನ್ನ ಅಧಿಕೃತ ಅಭ್ಯರ್ಥಿ ಡಾ. ಸಂತೃಪ್ತ್ ಮಿಶ್ರಾ ಗೆಲುವನ್ನು ಖಚಿತ ಪಡಿಸಿಕೊಳ್ಳಲು ಅನುಕೂಲಕರ ಸ್ಥಾನದಲ್ಲಿದೆ. ಹೆಚ್ಚುವರಿ ಮತಗಳ ಜೊತೆಗೆ ಕಾಂಗ್ರೆಸ್ ಶಾಸಕರ ಬೆಂಬಲದೊಂದಿಗೆ ಗೆಲ್ಲಿಸಿಕೊಳ್ಳುವ ವಿಶ್ವಾಸದಲ್ಲಿ ಡಾ. ದತ್ತೇಶ್ವರ್ ಹೋಟಾ ಅವರನ್ನು ಕಣಕ್ಕಿಳಿಸಿದೆ.

ಮತ್ತೊಂದೆಡೆ, ಬಿಜೆಪಿ ಬೆಂಬಲಿಸಿರುವ ಸ್ವತಂತ್ರ ಅಭ್ಯರ್ಥಿ ದಿಲೀಪ್ ರೇ, ಎದುರಾಳಿಗಳಿಂದ ಕನಿಷ್ಠ 8 ಶಾಸಕರ ಬೆಂಬಲವನ್ನು ಪಡೆದರೆ ಮಾತ್ರ ಗೆಲುವು ಸಾಧಿಸಬಹುದು. ಇದು ಸ್ಪರ್ಧೆಯಲ್ಲಿ ಅಡ್ಡ ಮತದಾನವನ್ನು ನಿರ್ಣಾಯಕ ಅಂಶವಾಗಿಸುತ್ತದೆ. ಹೀಗಾಗಿ ಬಿಜೆಪಿ ಕಾಂಗ್ರೆಸ್ ಶಾಸಕರನ್ನು ತನ್ನತ್ತ ಸೆಳೆದುಕೊಳ್ಳಲು ತೆರೆಮರೆಯಲ್ಲಿ ಪ್ರಯತ್ನ ನಡೆಸಿದೆ. ಇದರ ಸುಳಿವು ಅರಿತಿರುವ ಹೈಕಮಾಂಡ್ ಡಿ.ಕೆ. ಶಿವಕುಮಾರ್ ಅವರನ್ನು ಸಂಪರ್ಕಿಸಿದೆ. ಅವರ ಸೂಚನೆಯ ಮೇರೆಗೆ ತನ್ನ ಶಾಸಕರನ್ನು ಒಟ್ಟಿಗೆ ಇರಿಸಿ ಪಕ್ಷದ ನಿರ್ಧಾರಕ್ಕೆ ಬದ್ಧರಾಗುವಂತೆ ಮಾಡಲು ಬೆಂಗಳೂರಿಗೆ ಕಳುಹಿಸಿದೆ.

ಹೈಕಮಾಂಡ್ ನಿರ್ಧಾರ: ಈ ಬಗ್ಗೆ ಸುದ್ದಿಗಾರರಿಗೆ ಮಾಹಿತಿ ನೀಡಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪಕ್ಷದ ಶಿಸ್ತಿನ ಸಿಪಾಯಿಯಾಗಿ ಹೈಕಮಾಂಡ್ ನೀಡುವ ಸೂಚನೆಯನ್ನು ಪಾಲಿಸುವುದು ನಮ್ಮ ಕರ್ತವ್ಯ. ಒಡಿಶಾದಿಂದ ಅತಿಥ್ಯ ಬಯಸಿ ಕಾಂಗ್ರೆಸ್ ಶಾಸಕರು ಬಂದಿದ್ದಾರೆ. ಅವರಿಗೆ ಅತಿಥ್ಯ ನೀಡಬೇಕಾಗುತ್ತದೆ ಎಂದು ಹೇಳಿದ್ದಾರೆ.

ಈ ಹಿಂದೆ ಮಹಾರಾಷ್ಟ್ರದಲ್ಲಿ ವಿಲಾಸ್ ರಾವ್ ದೇಶಮುಖ್ ಅವರ ಸರ್ಕಾರ ಗಂಡಾಂತರಕ್ಕೆ ಸಿಲುಕಿದಾಗ ಅಲ್ಲಿನ ಶಾಸಕರು ಬೆಂಗಳೂರಿಗೆ ಬಂದಿದ್ದರು. ಅದೇ ರೀತಿ ಗುಜರಾತ್ ಮತ್ತು ಮಧ್ಯಪ್ರದೇಶದ ಶಾಸಕರು ಬಂದು ಇಲ್ಲಿ ವಾಸ್ತವ್ಯ ಹೂಡಿದ್ದರು. ಅದೇ ರೀತಿ ಈಗ ಒಡಿಶಾದ ಕಾಂಗ್ರೆಸ್ ಶಾಸಕರು ಬಂದಿದ್ದಾರೆ ಎಂದು ತಿಳಿಸಿದರು. ರಾಜ್ಯಸಭೆ ಚುನಾವಣೆ ಹಿನ್ನೆಲೆಯಲ್ಲಿ ಅವರು ಇಲ್ಲಿಗೆ ಆಗಮಿಸಿದ್ದಾರೆ. ಮತದಾನಕ್ಕೆ ಮುನ್ನ ಅವರು ಒಡಿಶಾಗೆ ತೆರಳಲಿದ್ದಾರೆ ಎಂದು ಹೇಳಿದರು.

ವಿಧಾನಪರಿಷತ್ ಚುನಾವಣೆ, ಉಪಚುನಾವಣೆಗೆ ಬಿಜೆಪಿ ತಂಡ ರಚನೆ



ಪ್ರತಾಪ್ ಸಿಂಹ ರಘು ಕೌಟಿಲ್ಯ ಎನ್.ಮಹೇಶ್ ಪ್ರೀತಮ್‌ಗೌಡ

ಬೆಂಗಳೂರು, ಮಾ.13– ನಾಲ್ಕು ಶಿಕ್ಷಕರ ಹಾಗೂ ಪದವೀಧರ ಕ್ಷೇತ್ರಗಳಿಂದ ವಿಧಾನಪರಿಷತ್‌ಗೆ ನಡೆಯಲಿರುವ ಚುನಾವಣೆ ಹಾಗೂ ಎರಡು ಕ್ಷೇತ್ರಗಳ ಉಪಚುನಾವಣೆ ಉಸ್ತುವಾರಿಗೆ ಬಿಜೆಪಿ ತಂಡಗಳನ್ನು ರಚನೆ ಮಾಡಲಾಗಿದೆ.

ಮೈಸೂರು ಭಾಗದಿಂದ ಮಾಜಿ ಸಂಸದ ಪ್ರತಾಪ್ ಸಿಂಹ ಹಾಗೂ ಪಕ್ಷದ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಬಾಗಲಕೋಟೆ ವಿಧಾನಸಭಾ ಕ್ಷೇತ್ರ, ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ರಘು ಕೌಟಿಲ್ಯ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ತಂಡದಲ್ಲಿದ್ದಾರೆ. ಆಗ್ನೇಯ ಪದವೀಧರರ ಕ್ಷೇತ್ರದ ತಂಡದಲ್ಲಿ ಪ್ರೀತಮ್ ಗೌಡ ಅವರನ್ನು ನೇಮಿಸಲಾಗಿದೆ.

ಬೆಂಗಳೂರು–ಮುಂಬೈ ಹೈ ಸ್ಪೀಡ್ ರೈಲು ಇಲ್ಲ

ರಾಜ್ಯಸಭೆಗೆ ಅಶ್ವಿನಿ ವೈಷ್ಣವ್

ನವದೆಹಲಿ, ಮಾ.13– ಬೆಂಗಳೂರು–ಬೆಳಗಾವಿ–ಮುಂಬೈ ನಡುವೆ ಹೈ ಸ್ಪೀಡ್ ರೈಲು ಮಾರ್ಗ ಆರಂಭಿಸುವ ಪ್ರಸ್ತಾವ ಕೇಂದ್ರ ಸರ್ಕಾರದ ಮುಂದಿಲ್ಲ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಸ್ಪಷ್ಟಪಡಿಸಿದ್ದಾರೆ.

ಈ ಮಾರ್ಗದಲ್ಲಿ ಹೈ ಸ್ಪೀಡ್ ರೈಲು ಸೇವೆ ಆರಂಭಿಸಲು ಪ್ರಸ್ತಾವ ಬಂದಿದೆಯೇ, ಕಾರ್ಯಸಾಧ್ಯತಾ ವರದಿ ಅಥವಾ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲಾಗಿದೆಯೇ ಎಂದು ಬಿಜೆಪಿ ಸದಸ್ಯ ಜಗ್ಗೇಶ್ ಅವರು ರಾಜ್ಯಸಭೆಯಲ್ಲಿ ಲಿಖಿತವಾಗಿ ಪ್ರಶ್ನೆ ಕೇಳಿದ್ದರು. ಇದಕ್ಕೆ ಉತ್ತರ ನೀಡಿರುವ ವೈಷ್ಣವ್, ಈ ಸಲದ ಬಜೆಟ್‌ನಲ್ಲಿ ಏಳು ಹೈ ಸ್ಪೀಡ್ ರೈಲು ಮಾರ್ಗಗಳನ್ನು ಘೋಷಿಸಲಾಗಿದೆ. ಹೆಚ್ಚು ಬಂಡವಾಳ ಹೂಡಿಕೆ ಅಗತ್ಯವಿರುವುದರಿಂದ ಯೋಜನೆಯನ್ನು ಮಂಜೂರು ಮಾಡುವ ನಿರ್ಧಾರವು ಡಿಪಿಆರ್ ಫಲಿತಾಂಶ, ತಾಂತ್ರಿಕ-ಆರ್ಥಿಕ ಕಾರ್ಯಸಾಧ್ಯತಾ ಅಧ್ಯಯನಗಳು ಮತ್ತು ಸಂಪನ್ಮೂಲಗಳ ಲಭ್ಯತೆಯಂತಹ ಹಲವು ಅಂಶಗಳನ್ನು ಅವಲಂಬಿಸಿರುತ್ತದೆ ಎಂದು ತಿಳಿಸಿದ್ದಾರೆ.

ಕೇಂದ್ರ ಬಜೆಟ್ ಬಳಿಕ ರೈಲ್ವೆ ಸಚಿವರು ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ ಹಾಗೂ ಎಚ್.ಡಿ.ಕುಮಾರಸ್ವಾಮಿ ಭೇಟಿ ಮಾಡಿ ಬೆಂಗಳೂರು–ಮುಂಬೈ ನಡುವೆ ಹೈ ಸ್ಪೀಡ್ ರೈಲು ಮಾರ್ಗಕ್ಕೆ ಒತ್ತಾಯಿಸಿದ್ದರು. ಕೆಲವೇ ದಿನಗಳಲ್ಲಿ ಈ ಮಾರ್ಗ ಘೋಷಣೆ ಮಾಡುವುದಾಗಿ ರೈಲ್ವೆ ಸಚಿವರು ಭರವಸೆ ನೀಡಿದ್ದಾರೆ ಎಂದು ಉಭಯ ಸಚಿವರು ಹೇಳಿಕೆ ನೀಡಿದ್ದರು.

ಭಾರತ್ ಆಸ್ಪತ್ರೆಯಲ್ಲಿ ಮಹಿಳಾ ದಿನಾಚರಣೆ

ಉಚಿತ ಎಚ್‌ಪಿವಿ ಲಸಿಕಾ ಅಭಿಯಾನಕ್ಕೆ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌದರಿ ಚಾಲನೆ



ಉಚಿತ ಎಚ್‌ಪಿವಿ ಲಸಿಕಾ ಅಭಿಯಾನದ ವೇಳೆ ಕ್ಯಾನ್ಸರ್‌ನಿಂದ ಚೇತರಿಸಿಕೊಂಡ ಮಹಿಳೆಯರನ್ನು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌದರಿ ಅಭಿನಂದಿಸಿದರು.

ಮೈಸೂರು,ಮಾ.13(ಎಸ್‌ಪಿಎನ್)– ಭಾರತ್ ಆಸ್ಪತ್ರೆ ಮತ್ತು ಇನ್ಸ್ಟಿಟ್ಯೂಟ್ ಆಫ್ ಅಂಕಾಲಜಿ (ಬಿಎಚ್‌ಐಒ) ಆವರಣದಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಉಚಿತ ಎಚ್‌ಪಿವಿ ಲಸಿಕಾ ಅಭಿಯಾನಕ್ಕೆ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌದರಿ ಶುಕ್ರವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಗರ್ಭಕಂಠ ಕ್ಯಾನ್ಸರ್ ತಡೆಗಟ್ಟುವಿಕೆ ಮತ್ತು ಮಹಿಳೆಯರಲ್ಲಿ ಮುನ್ನೆಚ್ಚರಿಕೆ ಆರೋಗ್ಯ ಜಾಗೃತಿ ಮೂಡಿಸುವುದೇ ಅಭಿಯಾನದ ಉದ್ದೇಶವಾಗಿದೆ. ಮೊದಲ ನೋಂದಾಯಿಸಿದ 200 ಮಹಿಳೆಯರಿಗೆ ಉಚಿತ ಲಸಿಕೆ ನೀಡುತ್ತಿರುವುದು ಸಂತೋಷದ ವಿಷಯ ಎಂದರು.

ಕ್ಯಾನ್ಸರ್ ರೋಗಿಗಳಿಗೆ ಔಷಧಿ, ಇಂಜೆಕ್ಷನ್ ಮತ್ತು ಶಸ್ತ್ರಚಿಕಿತ್ಸೆ ಸಾಕಾಗುವುದಿಲ್ಲ. ಅವರ ಮನೋಬಲವನ್ನು ಹೆಚ್ಚಿಸುವುದು ಕೂಡ ಚಿಕಿತ್ಸೆ ಭಾಗವಾಗಿದೆ. ಮನೆಯವರ ಪ್ರೀತಿ, ಮಮತೆ ಮತ್ತು ಆತ್ಮಸ್ಥೈರ್ಯ ರೋಗಿಗಳಿಗೆ ದೊಡ್ಡ ಔಷಧಿಯಿದ್ದಂತೆ. ನಾವು ಅವರನ್ನು ಮಾನಸಿಕವಾಗಿ ಸಿದ್ಧಗೊಳಿಸಿದರೆ ಅವರು ಕ್ಯಾನ್ಸರ್ ರೋಗ ಭಾದೆ ತಡೆಯುವ ಶಕ್ತಿಯನ್ನು ದರೂ ಪಡೆದುಕೊಳ್ಳುತ್ತಾರೆ ಎಂದರು.

ಬಿಎಚ್‌ಐಒ ಅಧ್ಯಕ್ಷ ಡಾ. ಜಿ.ಎಸ್. ಅಜಯ್ ಕುಮಾರ್ ಮಾತನಾಡಿ, ಗರ್ಭಕಂಠದ ಕ್ಯಾನ್ಸರ್ ಅನ್ನು ತಡೆಗಟ್ಟುವಿಕೆ ಮತ್ತು ಮಹಿಳೆಯರಲ್ಲಿ ಮುನ್ನೆಚ್ಚರಿಕೆ ಆರೋಗ್ಯ ಜಾಗೃತಿ ಮೂಡಿಸುವುದೇ ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ ಎಂದರು.

ಬಿಎಚ್‌ಐಒ ಸಂಸ್ಥೆಯ ಮುಖ್ಯ ವೈದ್ಯಕೀಯ ಅಂಕಾಲಜಿಸ್ಟ್ ಡಾ.ಸಿ.ಬಿ. ಅವಿನಾಶ್ ಮಾತನಾಡಿ, ಗರ್ಭಕಂಠ ಕ್ಯಾನ್ಸರ್ ಮಹಿಳೆಯರ ಆರೋಗ್ಯದ ಪ್ರಮುಖ ಸಮಸ್ಯೆಯಾಗಿದೆ. ಜಾಗತಿಕವಾಗಿ ಕಂಡುಬರುವ ಗರ್ಭಕಂಠ ಕ್ಯಾನ್ಸರ್ ಪ್ರಕರಣಗಳಲ್ಲಿ ಶೇ.20ರಷ್ಟು ಭಾರತದಲ್ಲಿ ಪ್ರತಿ ವರ್ಷ ಸುಮಾರು 1.23 ಲಕ್ಷ ಮಹಿಳೆಯರು ಈ ರೋಗಕ್ಕೆ ತುತ್ತಾಗುತ್ತಾರೆ ಮತ್ತು ಸುಮಾರು 67,500 ಮಹಿಳೆಯರು ಸಾವನ್ನಪ್ಪುತ್ತಿದ್ದಾರೆ.

ಸರಿಯಾದ ವೇಳೆಗೆ ಲಸಿಕೆ ಪಡೆಯುವ ಮೂಲಕ ಗರ್ಭಕಂಠ ಕ್ಯಾನ್ಸರ್ ಬಹುಮಟ್ಟಿಗೆ ತಡೆಗಟ್ಟಬಹುದು. ಈ ಲಸಿಕೆ 9–14 ವರ್ಷದ ಬಾಲಕರು ಮತ್ತು ಬಾಲಕಿಯರಿಗೆ ಹೆಚ್ಚು ಪರಿಣಾಮಕಾರಿಯಾಗಿದೆ. ಅಂತೆಯೇ 26 ವರ್ಷದವರೆಗೆ ಇಲ್ಲವೇ ವೈದ್ಯರ ಸಲಹೆ ಮೇರೆಗೆ 45 ವರ್ಷದವರೆಗೆ ಲಸಿಕೆ ಪಡೆಯಬಹುದಾಗಿದೆ ಎಂದರು.

ಈ ವೇಳೆ ಬಿಎಚ್‌ಐಒನ ಹಿರಿಯ ಅಧಿಕಾರಿ ಗೌತಮ್ ಉಪಸ್ಥಿತರಿದ್ದರು. ಈ ವೇಳೆ ಕ್ಯಾನ್ಸರ್‌ನಿಂದ ಚೇತರಿಸಿಕೊಂಡವರನ್ನು ಸನ್ಮಾನಿಸಲಾಯಿತು.

ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದಿಂದ ಭಾರೀ ಗೋಲ್‌ಮಾಲ್

ಸಂಘದ ಅಧ್ಯಕ್ಷ, ಕಾರ್ಯದರ್ಶಿಯಿಂದ ಕೋಟ್ಯಾಂತರ ರೂ. ಬೇನಾಮಿ ಆಸ್ತಿ ಸಂಪಾದನೆ ಆರೋಪ

ಮೈಸೂರು, ಮಾ.13(ಜಿಎ)–ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಮಹೇಶ್ ಮತ್ತು ಕಾರ್ಯದರ್ಶಿ ಪಿ.ವಿಶಾಲಾಕ್ಷಿ ಸಂಘದ ಹಣವನ್ನು ದುರುಪಯೋಗ ಮಾಡಿಕೊಂಡು ಬೇನಾಮಿ ಅಸ್ತಿ ಮಾಡಿದ್ದಾರೆ ಎಂದು ಸಮಾಜ ರಕ್ಷಣೆ ಸೇನೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಕೆ.ಹೆಚ್. ಹನುಮಂತರಾಜು ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹೇಶ್ ಸಹಕಾರ ಸಂಘದ ಬೈಲಾ ನಿಯಮಗಳನ್ನು ಉಲ್ಲಂಘಿಸಿ ತಮ್ಮ ಪತ್ನಿ, ಪುತ್ರ ಮತ್ತು ಕುಟುಂಬದ ಇತರೆ ಸದಸ್ಯರ ಹೆಸರಿನಲ್ಲಿ ಅಕ್ರಮವಾಗಿ ನಿವೇಶನ ಗಳನ್ನು ನೋಂದಣಿ ಮಾಡಿಸಿಕೊಂಡಿದ್ದಾರೆ ಎಂದು ಆಪಾದಿಸಿದರು.

ಇದರಿಂದ ಸೀನಿಯಾರಿಟಿ ಪ್ರಕಾರ ನಿವೇಶನಗಳನ್ನು ಪಡೆಯಬೇಕಿದ್ದ ಷೇರುದಾರರಿಗೆ ವಂಚನೆ ಮಾಡಲಾಗಿದೆ. ನಿವೇಶನಕ್ಕಾಗಿ ಹಲವಾರು ವರ್ಷಗಳಿಂದ ಹಣ ಕಟ್ಟಿದ ಷೇರುದಾರರು ಒಂದು ಕಡೆ ಅಲೆದಾಡುತ್ತಿದ್ದರೆ, ಮತ್ತೊಂದು ಕಡೆ ಯಾರು ತಮಗೆ ಹೆಚ್ಚು ಹಣ ಕೊಡುತ್ತಾರೋ ಅವರಿಗೆ ಮಾತ್ರ ನಿವೇಶನ ನೀಡಲಾಗುತ್ತಿದೆ ಎಂದು ದೂರಿದರು.

ಮಹೇಶ್ ಅವರು ಅಕ್ರಮವಾಗಿ ಸಂಪಾದಿಸಿದ ಹಣದಲ್ಲಿ ವರುಣಾ ಹೋಬಳಿಯ ಮೊಸಂಬಾಯನಹಳ್ಳಿಯಲ್ಲಿ ಕ್ರಮವಾಗಿ 1 ಎಕರೆ 12 ಗುಂಟೆ, 3 ಎಕರೆ 20 ಗುಂಟೆ, 3 ಎಕರೆ 13 ಗುಂಟೆ, 4 ಎಕರೆ 35 ಗುಂಟೆ, ವರಕೋಡು ಗ್ರಾಮದಲ್ಲಿ 34 ಗುಂಟೆ, ವರುಣದಲ್ಲಿ 16 ಗುಂಟೆ, ಜಯಪುರ ಹೋಬಳಿ ಯಡಹಳ್ಳಿಯಲ್ಲಿ 3 ಎಕರೆ, ಅದೇ ಗ್ರಾಮದಲ್ಲಿ ಮತ್ತೆ 3 ಎಕರೆ, ಸಾತಗಳ್ಳಿ, ಭುಗತಹಳ್ಳಿ, ವರಕೋಡು, ವರುಣಾದಲ್ಲಿ ಭಾರಿ ನಿವೇಶನಗಳು ಸೇರಿದಂತೆ ಒಟ್ಟಾರೆ ಸುಮಾರು 500 ಕೋಟಿ ರೂ.ನಷ್ಟು ಅಕ್ರಮ ಅಸ್ತಿ ಹೊಂದಿದ್ದು, ಇವರ ವಿರುದ್ಧ ತನಿಖೆ ನಡೆಸುವಂತೆ ಇಡಿ, ಲೋಕಾಯುಕ್ತ ಮತ್ತು ಸಹಕಾರ ಇಲಾಖೆಗೆ ದೂರು ನೀಡಿದ್ದೇನೆ ಎಂದರು.

ಸಹಕಾರ ಸಂಘದಲ್ಲಿ 25 ವರ್ಷಗಳಿಂದ ಕಾರ್ಯದರ್ಶಿ ಆಗಿದ್ದ ವಿಶಾಲಾಕ್ಷಿ ಎಂಬುವರೂ ಸಹ ಮೈಸೂರು, ತುಮಕೂರು ಜಿಲ್ಲೆ ವಳಗೆರೆಪುರದಲ್ಲಿ ಸುಮಾರು 200 ಕೋಟಿ ರೂ. ಅಧಿಕ ಆಸ್ತಿಪಾಸ್ತಿಗಳನ್ನು ಹೊಂದಿದ್ದಾರೆ. ಇವರ ವಿರುದ್ಧವೂ ತನಿಖೆ ನಡೆಸುವಂತೆ ಇಡಿ, ಲೋಕಾಯುಕ್ತ ಮತ್ತು ಸಹಕಾರ ಇಲಾಖೆಗೆ ದೂರು ನೀಡಿದ್ದೇನೆ ಎಂದರು.

ಇಷ್ಟೇ ಅಲ್ಲದೇ, ಕರ್ನಾಟಕ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಬ್ಯಾಂಕ್ ಖಾತೆಯಿಂದ ಬೇರೆ, ಬೇರೆ ಯವರ ಹೆಸರಲ್ಲಿ ಸುಮಾರು 5 ಕೋಟಿಗೂ ಅಧಿಕ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಲಾಗಿದೆ. ಇದೂ ಸಹ ಭಾರಿ ಅನುಮಾನಕ್ಕೆ ಕಾರಣವಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘ ಟನೆಯ ಹೊಸಹುಂಡಿ ನಾಗರಾಜು, ಎಂ.ಸಿ. ಅನಿತಾ, ಜವರೇಗೌಡ, ಪ್ರವೀಣ್, ಮಂಜುನಾಥ್ ಉಪಸ್ಥಿತರಿದ್ದರು.

ಸಂಪುಟ ಪುನರ್‌ರಚಿಸಿ; ನಮ್ಮನ್ನು ಮಂತ್ರಿ ಮಾಡಿ

ಮುಖ್ಯಮಂತ್ರಿ ಸಿದ್ದರಾಮಯ್ಯರಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆಂಬಲಿತರು, ಹಿರಿಯ ಶಾಸಕರ ಆಗ್ರಹ

ಬೆಂಗಳೂರು, ಮಾ.13(ಕೆಎಂಶಿ)– ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆಂಬಲಿತರೂ ಸೇರಿದಂತೆ ಪಕ್ಷದ ಹಿರಿಯ ಶಾಸಕರು, ಸಚಿವ ಸಂಪುಟ ಪುನರ್ ರಚಿಸಿ ತಮಗೂ ಅವಕಾಶ ನೀಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದ್ದಾರೆ.

ಗುರುವಾರ ರಾತ್ರಿ ನಗರದ ಖಾಸಗಿ ಕ್ಲಬ್ ಒಂದರಲ್ಲಿ ಶಿವಕುಮಾರ್ ಆಪ್ತ ಬಣಕ್ಕೆ ಸೇರಿದ ಎನ್.ಎ.ಹ್ಯಾರಿಸ್ ಹಾಗೂ ವರ್ತೂರು ಬಾಲಕೃಷ್ಣ ಆಯೋಜಿಸಿದ್ದ ಸಭೆಯಲ್ಲಿ 25ಕ್ಕೂ ಹೆಚ್ಚು ಹಿರಿಯ ಸದಸ್ಯರು ಭಾಗವಹಿಸಿದ್ದರು.

ಶಿವಕುಮಾರ್ ಬೆಂಬಲಿತರೇ ಸಂಪುಟ ಪುನರ್ ರಚನೆಗೆ ಒತ್ತಾಯಿಸುತ್ತಿರುವ ಉದ್ದೇಶ ಏನೆಂಬ ಬಗ್ಗೆ ಕಾಂಗ್ರೆಸ್ ವಲಯದಲ್ಲಿ ಭಾರೀ ಚರ್ಚೆಗೆ ಎಡೆ ಮಾಡಿದೆ.

ಬಜೆಟ್ ಅಧಿವೇಶನ ಮುಗಿದ ಬಳಿಕ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ಸಂಪುಟ ಪುನರ್ ರಚನೆಗೆ ಒತ್ತಾಯಿಸಲು ಹಿರಿಯ ಶಾಸಕರು ಸಭೆಯಲ್ಲಿ ನಿರ್ಧರಿಸಿದ್ದಾರೆ. ಸರ್ಕಾರ ರಚನೆ ವೇಳೆಯೇ ಎರಡೂವರೆ ವರ್ಷಗಳ ಬಳಿಕ ಸಂಪುಟ ಪುನರ್‌ರಚನೆ ಮಾಡುವುದಾಗಿ ವರಿಷ್ಠರು ಹೇಳಿದ್ದರು. ಆದರೆ, ಇದುವರೆಗೂ ಯಾವುದೇ ಕ್ರಮ ಜರುಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಆದಷ್ಟು ಬೇಗ ಸಚಿವ ಸಂಪುಟ ಪುನರ್‌ರಚನೆ ಮಾಡಬೇಕು. ವರಿಷ್ಠರನ್ನು ಭೇಟಿ ಮಾಡುವುದಕ್ಕೂ ಮೊದಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಶಿವಕುಮಾರ್ ಅವರನ್ನು ಈ ನಿಯೋಗ ಭೇಟಿ ಮಾಡಿ ಮನವಿ ಸಲ್ಲಿಸಲಿದೆಯಂತೆ.

ಹ್ಯಾರಿಸ್ ಏರ್ಪಡಿಸಿದ್ದ ಔತಣಕೂಟದಲ್ಲಿ ಬಾಲಕೃಷ್ಣ ಅಲ್ಲದೆ, ಬಸವರಾಜ ನೀಲಪ್ಪನವರ್, ಎ.ಆರ್.ಕೃಷ್ಣಮೂರ್ತಿ, ಶಿವಲಿಂಗೇಗೌಡ, ಯು.ಬಿ.ಬಣಕಾರ್, ಹಂಪನಗೌಡ ಬಾದರ್ಲಿ, ಟಿ.ಬಿ.ಜಯಚಂದ್ರ, ಅಶೋಕ್ ಪಟ್ಟಣ್, ಬೇಳೂರು ಗೋಪಾಲಕೃಷ್ಣ ಎಸ್.ಎನ್.ಸುಬ್ಬಾರೆಡ್ಡಿ, ಮಹಂತೇಶ ಕೌಜಲಗಿ, ಮಾಲೀಕಯ್ಯ ಗುತ್ತೇದಾರ, ಯಶವಂತರಾಯಗೌಡ ವಿಠಲಗೌಡ ಪಾಟೀಲ್, ಲಕ್ಷ್ಮಣ ಸವದಿ, ವೈ.ನಾರಾಯಣಸ್ವಾಮಿ, ಎಂ.ವೈ. ಪಾಟೀಲ್ ಸೇರಿದಂತೆ 25ಕ್ಕೂ ಹೆಚ್ಚು ಹಿರಿಯ ಸದಸ್ಯರು ಭಾಗವಹಿಸಿದ್ದರು.

ಇವರೆಲ್ಲರೂ ನಾಲ್ಕರಿಂದ ಏಳು ಬಾರಿ ವಿಧಾನಸಭೆ ಪ್ರವೇಶಿಸಿದ್ದಾರೆ. ಇದರಲ್ಲಿ ಕೆಲವರು ಪ್ರಮುಖ ನಿಗಮ ಮತ್ತು ಮಂಡಳಿಗಳ ಅಧ್ಯಕ್ಷ ಸ್ಥಾನದಲ್ಲಿದ್ದಾರೆ.

ತಿರುಪತಿ ಲಡ್ಡುವಿನಲ್ಲಿ ಕಲಬೆರಕೆ ವದಂತಿ; ಅರ್ಜಿ ವಿಚಾರಣೆಗೆ ಸುಪ್ರೀಂಕೋರ್ಟ್ ನಕಾರ

ನವದೆಹಲಿ, ಮಾ.13– ತಿರುಪತಿ ಲಡ್ಡು ಪ್ರಸಾದದಲ್ಲಿ ಕಲಬೆರಕೆ ತುಪ್ಪ ಬಳಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಸ್ಟರ್ ಹಾಗೂ ಸಾರ್ವಜನಿಕವಾಗಿ ಹೇಳಿಕೆ ನೀಡುವ ಮೂಲಕ ತಪ್ಪು ಮಾಹಿತಿ ನೀಡುತ್ತಿರುವ ವ್ಯಕ್ತಿ ಮತ್ತು ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ಸಲ್ಲಿಸಲಾದ ಅರ್ಜಿ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

ಲಡ್ಡು ಪ್ರಸಾದದಲ್ಲಿ ಪ್ರಾಣಿಗಳ ಕೊಬ್ಬು ಬಳಸುವ ಮೂಲಕ ಕೋಟ್ಯಂತರ ಜನರ ಭಾವನೆಗಳಿಗೆ ಧಕ್ಕೆ ತರಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ಸುಪ್ರೀಂಕೋರ್ಟ್, 2024ರ ಅಕ್ಟೋಬರ್ 4ರಂದು ಐದು ಮಂದಿ ಸ್ವತಂತ್ರ ಸಮಿತಿಯನ್ನು ರಚಿಸಿತ್ತು. ನ್ಯಾಯಾಲಯವನ್ನು ರಾಜಕೀಯ ಯುದ್ಧ ಭೂಮಿಯಾಗಿ ಪರಿವರ್ತಿಸಲು ಅವಕಾಶ ನೀಡುವುದಿಲ್ಲ ಎಂದು ಈ ಹಿಂದೆ ಸ್ಪಷ್ಟಪಡಿಸಿತ್ತು.

ಈ ವಿಚಾರಕ್ಕೆ ಸಂಬಂಧಿಸಿದಂತೆ ಶುಕ್ರವಾರ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರನ್ನು ಒಳಗೊಂಡ ನ್ಯಾಯಪೀಠ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ ಎಂದು ಅರ್ಜಿದಾರರಿಗೆ ತಿಳಿಸಿತು. ನೀವು ತಜ್ಞರಾಗಲು ಕಾರಣವೇನು? ಹೋಗಿ ಅಧಿಕಾರಿಗೆ ತಿಳಿಸಿ ಎಂದು ಅರ್ಜಿದಾರರ ಪರ ವಕೀಲರಿಗೆ ನ್ಯಾಯಪೀಠ ತಿಳಿಸಿತು.

ತನಿಖಾ ಸಂಸ್ಥೆಯಲ್ಲಿ ಏನೇ ಕಂಡು ಹಿಡಿದರು ಕೂಡ ಅದನ್ನು ನ್ಯಾಯಾಲಯದ ಮುಂದೆ ಮಂಡಿಸಲಾಗುತ್ತದೆ ಎಂದು ಸಿಜೆಐ ತಿಳಿಸಿದರು. ಶಂಕಿತ ವಿರುದ್ಧ ಈಗಾಗಲೇ ಪ್ರಕರಣ ದಾಖಲಾಗಿದೆ. ತನಿಖಾ ಸಂಸ್ಥೆಯ ಮೇಲೆ ನಂಬಿಕೆಯಿಡಿ. ತನಿಖೆ ನಡೆಯುತ್ತಿರುವ ಸಂದರ್ಭದಲ್ಲಿ ನಿಮ್ಮ ಅರ್ಜಿಯನ್ನು ಮಾನ್ಯ ಮಾಡಲು ಸಾಧ್ಯವಿಲ್ಲ ಎಂದು ತಿಳಿಸಿತು.

ಸರ್ಕಾರಕ್ಕೆ ಜಾತಿ ಗಣತಿ ವರದಿ ಸಲ್ಲಿಕೆ

ಬೆಂಗಳೂರು, ಮಾ.13(ಕೆಎಂಶಿ)– ಹಿಂದುಳಿದ ಆಯೋಗದಿಂದ ನಡೆಸಲಾಗಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ವರದಿ ಶೀಘ್ರವೇ ಸರ್ಕಾರಕ್ಕೆ ಸಲ್ಲಿಕೆಯಾಗಲಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ವಿಧಾನಪರಿಷತ್ತಿನಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆ ರವಿಕುಮಾರ್ ಪ್ರಸ್ತಾಪಕ್ಕೆ ಉತ್ತರಿಸಿದ ಸಚಿವರು, ಆಯೋಗದ ಅಧ್ಯಕ್ಷ ಮಧುಸೂದನ್ ನಾಯಕ್ ನೇತೃತ್ವದಲ್ಲಿ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸಲಾಗಿದೆ. ವರದಿ ದೊರೆತ ನಂತರ ಯಾವ ಸಮುದಾಯದ ಜನರು ಎಷ್ಟು ಜನಸಂಖ್ಯೆ ಹೊಂದಿದ್ದಾರೆಂಬುದು ಗೊತ್ತಾಗಲಿದೆ.

ನಂತರ ಆಯಾ ಸಮುದಾಯದ ಜನಸಂಖ್ಯೆ ಆಧಾರದ ಮೇಲೆ ವಿಶೇಷ ಸವಲತ್ತುಗಳನ್ನು ಕೊಡಲಾಗುವುದು ಎಂದರು.

ಮೈಸೂರಿನ ಶಿವರಾಂಪೇಟೆಯ ಡೋಪ್ಲಿನ್ ಕಾಂಪ್ಲೆಕ್ಸ್ ಅನಧಿಕೃತ ಅಂಗಡಿ ತೆರವು ವಿಚಾರ

ಮಾರ್ಚ್ 18ರಂದು ಸಾರ್ವಜನಿಕ ವಿಚಾರಣೆ

ಎಂಡಿಎ ಆಯುಕ್ತ ಕೆ.ಆರ್.ರಕ್ಷಿತ್ ಮಾಹಿತಿ

- ಕರ್ನಾಟಕ ಪ್ರಿಮಿಸಸ್ ಕಾಯ್ದೆ ಅನ್ವಯ ಪ್ರಕ್ರಿಯೆ ● ವಿಚಾರಣೆ ಬಳಿಕ 21 ಅನಧಿಕೃತ ಅಂಗಡಿ ತೆರವು ● ಸೇಲ್ ಡೀಡ್ ಆಗಿರುವ ಅಂಗಡಿ ವಿರುದ್ಧ ಸದ್ಯಕ್ಕೆ ಕ್ರಮ ಇಲ್ಲ ● ಮುಡಾ ಇಂಜಿನಿಯರ್ ಸೇಲ್ ಡೀಡ್ ಮಾಡಿಕೊಟ್ಟಿರುವ ಕಾರಣ ಕೋರ್ಟ್‌ನಲ್ಲಿ ಪ್ರಶ್ನಿಸಲು ಚಿಂತನೆ

ಮೈಸೂರು, ಮಾ.13(ಬಿಎಲ್‌ಎಂ)– ಮೈಸೂರಿನ ಶಿವರಾಂಪೇಟೆಯ ವಿನೋಬ ರಸ್ತೆಯಲ್ಲಿರುವ ಡೋಪ್ಲಿನ್ ಕಾಂಪ್ಲೆಕ್ಸ್‌ನಲ್ಲಿರುವ ಅನಧಿಕೃತ ಅಂಗಡಿಗಳನ್ನು ತೆರವು ಮಾಡುವ ಸಂಬಂಧ ಮಾರ್ಚ್ 18ರಂದು ಸಾರ್ವಜನಿಕ ವಿಚಾರಣೆ ನಡೆಸಲಾಗುವುದು ಎಂದು ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ದ ಆಯುಕ್ತ ಕೆ.ಆರ್.ರಕ್ಷಿತ್ ತಿಳಿಸಿದ್ದಾರೆ.

ಕರ್ನಾಟಕ ಪ್ರಿಮಿಸಸ್ ಕಾಯ್ದೆ ಅನ್ವಯ ಸಾರ್ವಜನಿಕ ವಿಚಾರಣೆ ನಡೆಸಿ, ಅಂಗಡಿ ತೆರವು ಮಾಡಲು ಮಾರ್ಚ್ ಮೊದಲ ವಾರ ನಿಗದಿ ಮಾಡಲಾಗಿತ್ತು ಆದರೆ, ಈಗ ವಿಚಾರಣೆಯನ್ನು ಮಾರ್ಚ್ 18ಕ್ಕೆ ಮುಂದೂಡಲಾಗಿದೆ ಎಂದರು.

ಹೈಕೋರ್ಟ್ ನಿರ್ದೇಶನದಂತೆ ಕರ್ನಾಟಕ ಪ್ರಿಮಿಸಸ್ ಕಾಯ್ದೆ ಅನ್ವಯ ಸಾರ್ವಜನಿಕ ವಿಚಾರಣೆ ಮಾಡಿ ಮೊದಲ ಹಂತದಲ್ಲಿ 21 ಅನಧಿಕೃತ ಅಂಗಡಿಗಳನ್ನು ತೆರವು ಮಾಡಲಾಗುವುದು ಎಂದು ರಕ್ಷಿತ್ ಮಾಹಿತಿ ನೀಡಿದರು.

ಡೋಪ್ಲಿನ್ ಕಾಂಪ್ಲೆಕ್ಸ್‌ನಲ್ಲಿ ಕೆಲವು ಅಂಗಡಿಯವರಿಗೆ ಸೇಲ್ ಡೀಡ್ ಮಾಡಿಕೊಡಲಾಗಿದೆ. ಆದರೆ ಸೇಲ್ ಡೀಡ್‌ನ್ನು ಅಂದಿನ ಮುಡಾ ಇಂಜಿನಿಯರ್ ಮಾಡಿಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಸದ್ಯಕ್ಕೆ ಇವರ ವಿರುದ್ಧ ಕ್ರಮ ಕೈಗೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದರು.



ಕೆ.ಆರ್.ರಕ್ಷಿತ್

ಆದರೆ ಇಂಜಿನಿಯರ್ ಮಾಡಿಕೊಟ್ಟಿರುವ ಸೇಲ್ ಡೀಡ್ ಕಾನೂನಾತ್ಮಕವಾಗಿ ಎಷ್ಟು ಸರಿ ಎಂಬ ಪ್ರಶ್ನೆ ಎದುರಾಗಿದೆ. ಇದನ್ನು ಚಾಲೆಂಜ್ ಮಾಡುವ ಸಂಬಂಧ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಮಾಡಲಾಗುವುದು ಎಂದು ತಿಳಿಸಿದರು.

ಅಂತಿಮವಾಗಿ ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತರಲಾಗುವುದು. ಮುಡಾ ಇಂಜಿನಿಯರ್ ಮೂಲಕ ಸೇಲ್ ಡೀಡ್ ಮಾಡಿಸಿಕೊಂಡಿರುವ ಅಂಗಡಿಯವರಿಗೆ ಪರಿಹಾರ ನೀಡಿ ಅವರನ್ನು ತೆರವುಗೊಳಿಸಬೇಕೇ ಎಂಬ ಬಗ್ಗೆ ಸರ್ಕಾರ ಏನು ನಿರ್ಧಾರ ಮಾಡುತ್ತದೆ ಎಂದು ನೋಡಬೇಕಿದೆ ಎಂದು ರಕ್ಷಿತ್ ತಿಳಿಸಿದರು.

ಡೋಪ್ಲಿನ್ ಕಾಂಪ್ಲೆಕ್ಸ್‌ನಲ್ಲಿ 50ಕ್ಕೂ ಹೆಚ್ಚು ಅಂಗಡಿಗಳಿದ್ದು, ಇದರಲ್ಲಿ 21 ಅಂಗಡಿಗಳು ಅನಧಿಕೃತವಾಗಿವೆ. ಈ ಸಂಬಂಧ ಕೆಲವು ಅಂಗಡಿಗಳಿಗೆ ಎಂಡಿಎ ಅಧಿಕಾರಿಗಳು ಕೂಡ ನೋಟಿಸ್ ನೀಡಿದ್ದಾರೆ. ಜೊತೆಗೆ ಅಂಗಡಿಗಳ ಮುಂದೆ ನೋಟಿಸ್ ಅಂಟಿಸಿದ್ದಾರೆ. ಆದರೆ ಆ ಅಂಗಡಿಯವರು ತಮ್ಮ ಅಂಗಡಿ ಮುಂದೆ ಅಂಟಿಸಿರುವ ನೋಟಿಸ್ ಅನ್ನು ಹರಿದು ಹಾಕಿದ್ದಾರೆ.

ಹೈಕೋರ್ಟ್ ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ ಅನಧಿಕೃತ ಅಂಗಡಿ ತೆರವಿಗೆ ಎಂಡಿಎ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ.

ನಕ್ಕರೆ ಅದೇ ಸ್ವರ್ಗ

ಗುಂಡ : ಪುರುಷನ ಕೊನೆಯ ಗುರು ಅವನ ಹೆಂಡತಿಯೇ
ತಿಮ್ಮ : ಯಾಕೆ?
ಗುಂಡ : ಮದುವೆಯಾದ ಮೇಲೆ ಅವನಿಗೆ ಯಾವುದೇ ಜ್ಞಾನದ ಅವಶ್ಯಕತೆ ಇರುವುದಿಲ್ಲ ಮತ್ತು ಅವನಲ್ಲಿದ್ದ ಜ್ಞಾನ ಯಾವುದೇ ಕೆಲಸಕ್ಕೂ ಬರುವುದಿಲ್ಲ.

ಮೈಸೂರು ಮಿತ್ರ

ಶನಿವಾರ, ಮಾರ್ಚ್ 14, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಯಾವುದನ್ನು ಬಯಸಬೇಡಿ. ನಮ್ಮನ್ನು ದುಃಖಕ್ಕೊಳಪಡಿಸುವ ಎಲ್ಲಾ ಕಷ್ಟಗಳಿಗೂ ಆಸೆಯೇ ಕಾರಣ. – ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಾತು ಆಡಿದರೆ ಮುತ್ತಿನ ಹಾರದಂತಿರಬೇಕು.

ನಿಮ್ಮ ಪತ್ರಗಳು

ಅನುಭವಿ ಮೌಲ್ಯಮಾಪಕರಿಗೆ ಆದ್ಯತೆ ನೀಡಿ

ಮಾನ್ಯರೆ,

ಎಲ್ಲಾ ವಿದ್ಯಾರ್ಥಿಗಳು ಪರೀಕ್ಷೆಗಾಗಿ ಶ್ರದ್ಧೆಯಿಂದ ಓದಿ ಮೊದಲಿಗರಾಗಲು ಹಗಲು ರಾತ್ರಿ ಎನ್ನದೆ ಶ್ರಮಪಟ್ಟಿರುತ್ತಾರೆ. ಅದಕ್ಕಾಗಿ ಪೋಷಕರು ಒಳ್ಳೆಯ ವಿದ್ಯಾಸಂಸ್ಥೆ ಹಾಗೂ ಒಳ್ಳೆಯ ಪಾಠಕ್ಕೆ ಸೇರಿಸಿರುತ್ತಾರೆ. ವಿದ್ಯಾರ್ಥಿಗಳು ಪರೀಕ್ಷೆಯನ್ನು ಚೆನ್ನಾಗಿ ಬರೆದು ಫಲಿತಾಂಶಕ್ಕಾಗಿ ಎದುರು ನೋಡುತ್ತಿರುತ್ತಾರೆ. ಆದರೆ ಪ್ರತಿ ವರ್ಷವೂ ಒಂದಲ್ಲ ಒಂದು ಮೌಲ್ಯಮಾಪಕರ ಎಡವಟ್ಟಿನಿಂದ ವಿದ್ಯಾರ್ಥಿಗಳಿಗೆ ಅಂಕಗಳಲ್ಲಿ ವ್ಯತ್ಯಾಸ ಬರುತ್ತಿದೆ. ನಿರೀಕ್ಷಿತ ಅಂಕಗಳು ಬರದಿದ್ದಾಗ ಮರು ಮೌಲ್ಯಮಾಪನಕ್ಕೆ ಅರ್ಜಿ ಹಾಕಿದಾಗ ಅದರಲ್ಲಿ ಅನೇಕ ಎಡವಟ್ಟುಗಳು ಗೋಚರವಾಗುತ್ತದೆ. ಹೆಚ್ಚಿನ ಅಂಕಗಳಿಂದ ಮೊದಲ ಸ್ಥಾನಗಳನ್ನು ಪಡೆದ ಉದಾಹರಣೆಗಳು ಇವೆ. ಗುರುಗಳ ಸ್ಥಾನದಲ್ಲಿದ್ದು ಮೌಲ್ಯಮಾಪಕರ ಬೇಜವಾಬ್ದಾರಿ ಬೇಡ. ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ನಿಮ್ಮ ಚೆಲ್ಲಾಟ ಬೇಡ. ನಿಮ್ಮ ಧರ್ಮವನ್ನು ನಿಷ್ಠೆಯಿಂದ ಮಾಡಿ ವಿದ್ಯಾರ್ಥಿಗಳಿಗೆ ಅನ್ಯಾಯವಾಗದ ಹಾಗೆ ಮೌಲ್ಯಮಾಪನವಿರಲಿ. ನಿಮ್ಮಗಳ ಎಡವಟ್ಟಿನಿಂದ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಭಾರೀ ಆಘಾತ ಉಂಟಾಗುತ್ತದೆ. ಮೌಲ್ಯಮಾಪಕರು ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಲಿ. ಅನುಭವಿ ಮೌಲ್ಯಮಾಪಕರಿಗೆ ಹೆಚ್ಚಿನ ಆದ್ಯತೆ ನೀಡಿ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ಅದ್ವಾನವಾಗಿದ್ದ ಕನ್ಸರ್‌ವೆನ್ಸಿಯನ್ನು ಉದ್ಯಾನವನವನ್ನಾಗಿಸಿದ ಪಾಲಿಕೆ !!



ಮಾನ್ಯರೆ,

ಮೈಸೂರು ಮಹಾನಗರಪಾಲಿಕೆ ವಾರ್ಡ್ ನಂ.19ರ ವ್ಯಾಪ್ತಿಗೆ ಒಳಪಡುವ ವಿ.ವಿ.ಮೊಹಲ್ಲಾ ಕ್ಲಬ್ ಹಿಂಭಾಗದ ಕನ್ಸರ್‌ವೆನ್ಸಿಯಲ್ಲಿ ಗಿಡ–ಗಂಟಿಗಳು ಬೃಹದಾಕಾರವಾಗಿ ಬೆಳೆದು ವಿಷಜಂತುಗಳಿಗೆ ಆಶ್ರಯ ತಾಣವಾಗಿತ್ತು ಇದರಿಂದ ಸಾರ್ವಜನಿಕರಿಗೆ ತುಂಬಾ ತಲೆನೋವಾಗಿತ್ತು. ಸ್ಥಳೀಯ ನಿವಾಸಿಗಳ ದೂರಿಗೆ ತಕ್ಷಣ ಸ್ಪಂದಿಸಿದ ಪಾಲಿಕೆ ಗಿಡ, ಗಂಟೆಗಳನ್ನು ಡೋಜರ್‌ನಿಂದ ತೆಗೆದು ಅದ್ವಾನವಾಗಿದ್ದ ಕನ್ಸರ್‌ವೆನ್ಸಿಯನ್ನು ಇದೀಗ ನೋಡಲು ಉದ್ಯಾನವನವನ್ನಾಗಿ ಮಾಡಿದ್ದಾರೆ. ಒಂದೆಡೆ ಪೌರ ಕಾರ್ಮಿಕರ ಮುಷ್ಕರ ಬೆಂಗಳೂರಿನಲ್ಲಿ ಅಹೋರಾತ್ರಿ ನಡೆಯುತ್ತಿದ್ದರೆ, ಇತ್ತ ಕರ್ತವ್ಯ ನಿಷ್ಠೆ ಮೆರೆದಿದ್ದಾರೆ. ಮೈಸೂರು ನಗರದಲ್ಲಿ ಇಂತಹ ಅನೇಕ ಕನ್ಸರ್‌ವೆನ್ಸಿಗಳು ಸ್ವಚ್ಛಗೊಳ್ಳದೇ ಹಾಗೇ ಪಾಳು ಬಿದ್ದಿದೆ. ಇದನ್ನು ಉದಾಹರಣೆ ಯಾಗಿಟ್ಟುಕೊಂಡು ಅಂತಹ ಕನ್ಸರ್‌ವೆನ್ಸಿಗಳನ್ನು ಆದಷ್ಟು ಬೇಗ ಪಾಲಿಕೆ ಸ್ವಚ್ಛಗೊಳಿಸಿದರೆ ಯಾವುದೇ ರೋಗ, ರುಜಿನಗಳಿಗೆ ಆಸ್ಪದ ಇರುವುದಿಲ್ಲ. ಸಮಸ್ಯೆಗೆ ಸ್ಪಂದಿಸಿದ ಮಾಜಿ ಕಾರ್ಪೊರೇಟರ್ ಭಾಗ್ಯ ಮಹದೇಶ್, ಸ್ಯಾನಿಟರಿ ಸೂಪರ್ ವೈಸರ್ ಲಕ್ಷ್ಮಣ್, ಪುಟ್ಟು ಹಾಗೂ ವರ್ಕ್ ಇನ್ಸ್‌ಪೆಕ್ಟರ್ ಕುಬೇರ್ ಅವರಿಗೆ ಧನ್ಯವಾದಗಳು.

– ಜೆ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು

ಸರ್ಕಾರದ ನಿರ್ಧಾರ ಶ್ಲಾಘನೀಯ

ಮಾನ್ಯರೆ,

ತಿ.ನರಸೀಪುರದ ಕೆಎಸ್ಐಸಿ ರೇಷ್ಮೆ ನೂಲು ನೇಯ್ಗೆ ಕಾರ್ಖಾನೆಯನ್ನು ಯಥಾಸ್ಥಿತಿ ಉಳಿಸಿಕೊಳ್ಳುವುದಾಗಿ ಹಾಗೂ ಕ್ರೀಡಾಂಗಣ ನಿರ್ಮಾಣ ಮಾಡುವುದಿಲ್ಲ ಎಂದು ವಿಧಾನಸಭೆಯಲ್ಲಿ ರೇಷ್ಮೆ ಸಚಿವ ಕೆ.ವೆಂಕಟೇಶ್ ಸ್ಪಷ್ಟ ಪಡಿಸಿರುವುದು ಶ್ಲಾಘನೀಯ. ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸ್ಥಾಪಿಸಿದ್ದ ಈ ಕಾರ್ಖಾನೆಯಲ್ಲಿ ತಯಾರಾಗುವ ಮೈಸೂರು ರೇಷ್ಮೆ ತನ್ನ ಸಾಂಪ್ರದಾಯಿಕತೆಗೆ ಹೆಸರಾಗಿ ಮೈಸೂರು ಸೀರೆ, ಪಂಚೆ, ಪ್ರಖ್ಯಾತಿಗಳಿಸಿವೆ ಹಾಗೂ ವೈಶಿಷ್ಟತೆಗೆ ಹೆಸರುವಾಸಿಯಾಗಿರುವ ಇಲ್ಲಿ, ಕ್ರೀಡಾಂಗಣ ನಿರ್ಮಾಣಕ್ಕೆ 5 ಎಕರೆ ಜಾಗವನ್ನು ನೀಡಿ ಅನಗತ್ಯವಾಗಿ ರಾಜ್ಯದ ಜನತೆಯಲ್ಲಿ ಗೊಂದಲಕ್ಕೆ ಕಾರಣವಾಗಿದ್ದ ಈ ಘಟನೆ ಕೊನೆಗೂ ತಾರ್ಕಿಕ ಅಂತ್ಯ ಕಂಡಿದ್ದು ಸಂತಸದ ಸಂಗತಿ. ಆದಷ್ಟು ಬೇಗ ಕ್ರೀಡಾಂಗಣಕ್ಕೆ ನೀಡಿರುವ 5 ಎಕರೆ ಜಾಗವನ್ನು ಪುನಃ ಕಾರ್ಖಾನೆಗೆ ನೀಡಿ ರೇಷ್ಮೆ ನೂಲು ನೇಯ್ಗೆಯಲ್ಲಿ ನುರಿತ ಕಾರ್ಮಿಕರನ್ನು ನೇಮಕ ಮಾಡಿ ಹೆಚ್ಚು ರೇಷ್ಮೆ ಸೀರೆಗಳನ್ನು ಉತ್ಪಾದನೆ ಮಾಡಿ ಮಹಿಳೆಯರ ಮನಸ್ಸನ್ನು ತಣಿಸಿ ಕಾರ್ಖಾನೆಯ ಅಭಿವೃದ್ಧಿಗೆ ಒತ್ತು ನೀಡುವುದು ಒಳ್ಳೆಯದು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಭಾರತದ ಪ್ರಧಾನಿ, ಅಧ್ಯಕ್ಷರು ಯಾರು?

ಮಾನ್ಯರೆ,


ಭಾರತ –ಪಾಕ್ ಸಂಘರ್ಷದ ಸಮಯದಲ್ಲಿ ನಾನೇ ಯುದ್ಧ ನಿಲ್ಲಿಸಿದೆ ಎಂದು ಟ್ರಂಪ್ ಈಗಲೂ ಹೇಳುತ್ತಿದ್ದಾರೆ. ಭಾರತ ರಷ್ಯಾದಿಂದ ತೈಲ ಖರೀದಿ ಮಾಡುತ್ತಿದ್ದುದನ್ನು ಸಹಿಸದ ಅಮೆರಿಕಾ ಹೆಚ್ಚುವರಿಯಾಗಿ ಶೇ. 50 ಸುಂಕ ವಿಧಿಸಿತು. ಎಪ್ಸ್ಟಿನ್ ಫೈಲ್ಸ್ ಗಳು ಬಹಿರಂಗವಾದ ನಂತರ ಅದರಲ್ಲಿ ಭಾರತದ ರಾಜಕಾರಣಿಗಳಿಗೂ ಸಂಬಂಧವಿದೆ ಎಂದು ಮಾತುಗಳು ಕೇಳಿ ಬಂದ ನಂತರದಲ್ಲಿ ಇದ್ದಕ್ಕಿದ್ದಂತೆ ಭಾರತ –ಅಮೆರಿಕಾ ನಡುವೆ ಮಾತುಕತೆ ಚುರುಕುಗೊಂಡು, ಭಾರತದ ಸರಕುಗಳ ಮೇಲಿನ ಸುಂಕವನ್ನು ಶೇ. 18ಕ್ಕೆ ಇಳಿಸಿತು. ಇದಕ್ಕೆ ಪ್ರತಿಯಾಗಿ ಭಾರತ ರಷ್ಯಾದಿಂದ ತೈಲ ಖರೀದಿ ನಿಲ್ಲಿಸಲಿದೆ ಎಂದು ಅಮೆರಿಕಾ ಹೇಳಿತು. ಇದೀಗ ಇರಾನ್ ಯುದ್ಧದ ಕಾರಣ ಪೆಟ್ರೋಲಿಯಂ ಉತ್ಪನ್ನಗಳ ಅಭಾವ ಕಾಣಿಸಿಕೊಂಡಾಗ ರಷ್ಯಾದಿಂದ ತೈಲ ಖರೀದಿಸಬೇಡಿ ಎಂಬ ಸೂಚನೆಯನ್ನು ಭಾರತ ಪಾಲಿಸಿದೆ. ಇದೀಗ ತಾನು ಭಾರತಕ್ಕೆ ರಷ್ಯಾದಿಂದ ಕಚ್ಚಾ ತೈಲ ಖರೀದಿಸಲು 30 ದಿನಗಳ ಅನುಮತಿ ನೀಡಿರುವುದಾಗಿ ಅಮೆರಿಕಾದ ಪತ್ರಿಕಾ ಕಾರ್ಯದರ್ಶಿ ಕೇರೋಲಿನ್ ಲೀವಿಟ್ ಹೇಳಿದ್ದಾರೆ. ಇಂತಹ ಯಾವ ಹೇಳಿಕೆಯನ್ನೂ ಭಾರತದ ಪ್ರಧಾನಿಯವರು ಸ್ಪಷ್ಟ ಹೇಳಿಕೆ ಮೂಲಕ ತಿರಸ್ಕರಿಸಿಲ್ಲ. ಇದು ಭಾರತದಂತಹ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶಕ್ಕೆ ಶೋಭೆ ತರುವ ಸಂಗತಿಯಲ್ಲ. ಇನ್ನಾದರೂ ಭಾರತ ದೃಢ ನಿಲುವಿನ ಮೂಲಕ ಇಂತಹ ನಡೆಯನ್ನು ಖಂಡಿಸುವ ಮೂಲಕ ಸ್ಪಷ್ಟ ನಿರ್ಧಾರ ಕೈಗೊಳ್ಳಬೇಕು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಯುದ್ಧವೇ ನೀನೆಷ್ಟು ಭಯಂಕರ...?!



ಇರಾನ್‌ನ ಬಾಲಕಿಯರ ಪ್ರಾಥಮಿಕ ಶಾಲೆ



ಬೆಂಕಿಯ ಕೆನ್ನಾಲಿಗೆಯಲ್ಲಿ ರಣರಂಗ



ಮಿರ್ಲೆ ಚಂದ್ರಶೇಖರ
ಲೇಖಕರು,
ಮೊ: 9916129654.

ಅದೊಂದು ಬಾಲಕಿಯರ ಪ್ರಾಥಮಿಕ ಶಾಲೆ, ಓದುತ್ತಿರುವ ಹೆಣ್ಣು ಮಕ್ಕಳ ವಯಸ್ಸು ಹನ್ನೆರಡನ್ನೂ ದಾಟಿರುವುದಿಲ್ಲ. ಭವಿಷ್ಯದ ಬದುಕು ಹೇಗಿರಬೇಕೆಂದು ಕನಸು ಕಾಣುವುದಕ್ಕೂ ಆಗದ ವಯಸ್ಸು, ಮುಗ್ಧ ಮಕ್ಕಳಿಗೆ ಆಟ, ಪಾಠ, ಊಟದ ಹೊರತು ಬೇರೇನೂ ತಿಳಿಯದು.

ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುವ ಪೋಷಕರು ಮಕ್ಕಳ ಮೇಲೆ ಸಹಜವಾಗಿಯೇ ಕನಸು ಕಟ್ಟಿಕೊಂಡಿರುತ್ತಾರೆ. ಎಂದಿನಂತೆ ಫೆಬ್ರವರಿ 28, 2026ರಂದು ಶನಿವಾರ ಮಕ್ಕಳು ಶಾಲೆಗೆ ಖುಷಿ ಖುಷಿಯಿಂದ ಬಂದು ಟೀಚರ್ ಹೇಳಿಕೊಡುತ್ತಿದ್ದ ಪಾಠದಲ್ಲಿ ಮಗ್ನವಾಗಿವೆ.

ಯಮರಾಯ ಆ ಸಮಯಕ್ಕಾಗಿ ಹೊಂಚು ಹಾಕುತ್ತಿದ್ದ. ಅವನ ಡ್ಯೂಟಿಯೇ ಅದು, ಕಾಯ್ದು ದೇಹಗಳನ್ನು ಮಣ್ಣಾಗಲು ಇಲ್ಲೇ ಬಿಟ್ಟು ಪ್ರಾಣವನ್ನು ಎಳೆದೊಯ್ಯುವುದು. ಅಮೆರಿಕ ಮತ್ತು ಇಸ್ರೇಲ್ ಸೇನೆಗಳು ಉಡಾಯಿಸಿದ ಕ್ಷಿಪಣಿಯು ಬಾಲಕಿಯರ ಪ್ರಾಥಮಿಕ ಶಾಲೆ ಕಟ್ಟಡಕ್ಕೆ ಅಪ್ಪಳಿಸಿತು. ಯುದ್ಧದ ಭೀಕರತೆಯನ್ನು ಅರಿಯದ 185ಕ್ಕೂ ಹೆಚ್ಚು ಬಾಲಕಿಯರು ಕಣ್ಣು ರೆಪ್ಪೆ ಮುಚ್ಚಿ ತೆರೆಯುವಷ್ಟರಲ್ಲಿ ಸಾವನ್ನಪ್ಪಿದರು. ಹಲವು ಮಕ್ಕಳೂ ಅವಶೇಷಗಳಡಿ ಸಿಲುಕಿ ನೋವು ಹಾಗೂ ಭಯದಿಂದ ವಿಲವಿಲ ಒದ್ದಾಡುತ್ತಿದ್ದರು.

ಬಾಳಿ ಬದುಕ ಬೇಕಾಗಿದ್ದ ಮಕ್ಕಳು ಯುದ್ಧ ಎಂಬ ಕರ್ಮ ಕಾಂಡದಲ್ಲಿ ಧಗಧಗನೆ ಉರಿದು ಬೂದಿಯಾದವು. ಒಂದು ಸಮುದಾಯವೇ ನಾಶವಾಯಿತು. ಯಮನು ಮಕ್ಕಳ ಜೀವಗಳೊಂದಿಗೆ ಮಾಯ, ಹೆಚ್ಚು ಕಾಲ ಒಂದೇ ಕಡೆ ಅವನು ಇರಲಾಗದು ಸದ್ಯ ಅವನಿಗೆ ಇರಾನ್ ಇಸ್ರೇಲ್ ದೇಶಗಳಲ್ಲಿ ಬಿಡುವಿಲ್ಲದ ಕೆಲಸ, ತುಪತುಪನೆ ಹಾರಿಹೋಗುತ್ತಿವೆ ಪ್ರಾಣಗಳು.

ದಕ್ಷಿಣ ಇರಾನ್‌ನ ಹಾರ್ಮೋಜ್ಗನ್ ಪ್ರಾಂತ್ಯದ ಮಿನಾಬ್‌ನಲ್ಲಿರುವ ಬಾಲಕಿಯರ ಪ್ರಾಥಮಿಕ ಶಾಲೆಯ ಮೇಲೆ ನಡೆದ ಅಮಾನುಷ ದಾಳಿ ಇದು. ಇಂತಹ ದುರ್ಘಟನೆಗಳಿಗೆ ಕಾರಣ ರಾಗಿರುವುದು ಕೇಡುಗಾಲಕ್ಕೆ ಮೊಟ್ಟೆ ಇಟ್ಟಂತೆ ಆಡುತ್ತಿರುವ ಇರಾನ್, ಇಸ್ರೇಲ್ ದೇಶಗಳು, ಜೊತೆಗೆ ದೊಡ್ಡಣ್ಣನೆಂದು ಸೌಂಡ್ ಮಾಡುತ್ತಿರುವ ಖಾಲಿ ಟ್ರಂಕ್. ಮಕ್ಕಳು, ಇನ್ನೂ ಪ್ರಪಂಚವನ್ನು ನೋಡದಿರುವ ಗರ್ಭದೊಳಗಿನ ಭ್ರೂಣಗಳು ಹಾಗೂ ಶಿಶುಗಳಾದಿಯಾಗಿ ಕರುಣೆ ಇಲ್ಲದೆ ಎಲ್ಲರ ಜೀವಗಳ ಮೇಲೆ ಚೆಲ್ಲಾಟವಾಡಿ ಗೆದ್ದ ಯುದ್ಧದಲ್ಲಿ ಉಳಿಯುವುದೇನು?.

ಈ ಮಹಾನ್ ನಾಯಕರಿಗೆ ಯುದ್ಧಗಳಿಂದಾಗುವ ಪರಿಣಾಮಗಳು ನೂರಾರು ವರ್ಷಗಳು ಕಳೆದರೂ ಬದುಕಿದ್ದವರ ಜೀವ ಹಿಂಡುವುದನ್ನು ತಿಳಿಯಲಾರದ ದಡ್ಡರಾ. ರಾಜಾಡಳಿತದ ಯುದ್ಧದಲ್ಲಿ ಕತ್ತಿ–ಗುರಾಣಿಗಳನ್ನು ಹಿಡಿದು ರಾಜರೇ ರಣರಂಗಕ್ಕೆ ಇಳಿಯುತ್ತಿದ್ದರು. ಕಚೇರಿಯಲ್ಲಿ ಕುಳಿತು ಮನಸ್ಸೋಇಚ್ಛೆ ನಿರ್ದೇಶನ ನೀಡುತ್ತಿರುವ ನಾಯಕರು ಕೂಡ ಯುದ್ಧಭೂಮಿಯಲ್ಲಿ ಹೋರಾಡುವಂತಿದ್ದರೆ ಬಹುಶಃ ಯುದ್ಧಗಳಿಗೆ ನಿಯಂತ್ರಣ ಇರುತ್ತಿತ್ತು.

ಮಾರ್ಚ್ 10ರಂದು ಸಹ ಮತ್ತದೇ ಬಾಲಕಿಯರ ಶಾಲೆಗೆ ಎರಡನೇ ಬಾರಿ ಕ್ಷಿಪಣಿ ದಾಳಿ ಆಗಿದೆ ಎಂದು ವಾಹಿನಿಗಳಲ್ಲಿ ಸುದ್ದಿ ಪ್ರಸಾರವಾಗುತ್ತಿತ್ತು. ಕ್ಷಿಪಣಿಗೂ ಆ ಶಾಲೆಗೂ ಇರುವ ಸಂಬಂಧವಾದರೂ ಏನಿತ್ತೋ?. ಶಾಲೆಯ ಕಾಂಪೌಂಡ್‌ಗೆ ಹೊಂದಿಕೊಂಡಂತೆ ಇರುವ ಸ್ಥಳದಲ್ಲಿ ಇಸ್ಲಾಮಿಕ್ (ಇರಾನಿ)ನ ಕ್ರಾಂತಿಯ ತರುವಾಯ ಮೇ, 1979 ರಲ್ಲಿ ಧರ್ಮಗುರು ರುಹೊಲ್ಲಾ ಖೊಮೇನಿಯು ಅಧಿಕೃತವಾಗಿ ಮಿಲಿಟರಿ ಶಾಖೆಯಾಗಿ IRGC (Islamic Revolutionary Guard Corps) ಅನ್ನು ಸ್ಥಾಪಿಸಿದನು. ಇದರ ಸಾಂವಿಧಾನಿಕ ಆದೇಶವು ಇಸ್ಲಾಮಿಕ್ ಗಣರಾಜ್ಯದ ಸಮಗ್ರತೆಯನ್ನು ಎತ್ತಿ ಹಿಡಿಯುತ್ತದೆ. ಇರಾನಿನ ಸಶಸ್ತ್ರ ಪಡೆಗಳ ಬಹು ಸೇವಾ ಪ್ರಾಥಮಿಕ ಪಡೆಯಾಗಿದೆ. ಇದು ಐದು ಸೇವಾ ಬ್ರಾಂಚ್‌ಗಳನ್ನು ಒಳಗೊಂಡಿದೆ. ನೆಲ, ವಾಯು, ನೌಕಾಪಡೆಗಳ ಜೊತೆಗೆ ಕುಡ್ಸ್ ಮತ್ತು ಬಸಿಜ್ ಪಡೆಗಳನ್ನು ಒಳಗೊಂಡಿದೆ. ಕಮಾಂಡರ್–ಇನ್–ಚೀಫ್ ಇದರ ಮುಖ್ಯಸ್ಥನಾಗಿರುತ್ತಾನೆ. 2024ರಲ್ಲಿನ ವರದಿಯಂತೆ 1,25,000 ಸಿಬ್ಬಂದಿಯನ್ನು ಈ ಸಂಸ್ಥೆಯು ಹೊಂದಿದೆ. ದಾಳಿಗೆ ಒಳಗಾದ ಬಾಲಕಿಯರ ಶಾಲೆಯು ಮಿಲಿಟರಿ ಶಾಖೆಯ ಆವರಣದ ಒಂದು ಭಾಗವಾಗಿರುವುದರಿಂದ ಹಾಗೂ ಪ್ರವೇಶ ದ್ವಾರಗಳಲ್ಲಿ IRGC ಲೋಗೋಗಳಿರುವುದರಿಂದ ಇಸ್ರೇಲ್ ಕ್ಷಿಪಣಿಗಳ ಆಕ್ರಮಣಕ್ಕೆ ಒಳಗಾಗಿ ಬಾಲಕಿಯರು ಬಲಿಯಾಗಬೇಕಾಯಿತು.

ಮಳೆ ನಿಂತರೂ ಹನಿ ನಿಲ್ಲದು ಎಂಬಂತೆ, ಯುದ್ಧ ಮುಗಿದ ಮೇಲೂ ನೂರಾರು ವರ್ಷಗಳ ಕಾಲ ಯುದ್ಧದ ದುಷ್ಪರಿಣಾಮಗಳು ಪ್ರಕೃತಿ ಹಾಗೂ ಜೀವಗಳ ಮೇಲೆ ಇರುತ್ತದೆ. 1945ರಲ್ಲಿ ಹಾಕಿದ ಎರಡು ನ್ಯೂಕ್ಲಿಯರ್ ಬಾಂಬುಗಳು ಅಂದಾಜು 1,40,000 ನಾಗರಿಕರು ಹಿರೋಷಿಮಾದಲ್ಲಿ ಮತ್ತು 74,000 ನಾಗರಿಕರು ನಾಗಸಾಕಿಯಲ್ಲಿ ಪ್ರಾಣ ಕಳೆದುಕೊಂಡರು, ಬದುಕುಳಿದವರು ಹಾಗೂ ಅವರ ಸಂತತಿಯು ಲ್ಯುಕೇಮಿಯಾ, ಕ್ಯಾನ್ಸರ್‌ನಂತಹ ಮಾರಕ ರೋಗಗಳು ಹಾಗೂ ವಿಕಿರಣದಿಂದ ಇತರೆ ಅಡ್ಡ ಪರಿಣಾಮಗಳನ್ನು ಎದುರಿಸಬೇಕಾಯಿತು, ಆ ಭಯ ಇಂದಿಗೂ ಆ ಜನರಲ್ಲಿ ಮನೆಮಾಡಿದೆ. ಇದು ನಾಯಕರಿಗೆ ತಿಳಿಯದೆ?. ದುರ್ಬಲವಾಗಿರುವ ವಿಶ್ವಸಂಸ್ಥೆಯು ಶಾಂತಿ ಕಾಪಾಡುವಲ್ಲಿ ತೆಗೆದುಕೊಳ್ಳಬೇಕಾಗಿರುವ ಕ್ರಮಗಳು ಇಲ್ಲಿಯವರೆಗೆ ನಡೆದಂತಿಲ್ಲ. ನಾಮಕಾವಸ್ಥೆ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ.

ದೇಶಗಳ ನಡುವೆ ನಡೆಯುವ ಯುದ್ಧಗಳು ಜೀವಿಗಳ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಮಾನವ ಹಕ್ಕುಗಳ ಸಂಪೂರ್ಣ ಉಲ್ಲಂಘನೆಯಾಗುತ್ತದೆ ಮತ್ತು ಪರಿಸರವು ಕಲುಷಿತವಾಗುವುದರಿಂದ ಪ್ರಕೃತಿ ಮೇಲೆ ಭಾರಿ ಹೊಡೆತ ಬೀಳುತ್ತದೆ. ಮರು ಸ್ಥಾಪನೆಗೆ ನೂರು ವರ್ಷಗಳಾದರೂ ಸಾಲದು.

ಆಧುನಿಕ ಯುದ್ಧಗಳಲ್ಲಿ ಸ್ಫೋಟಕ ಆಯುಧಗಳನ್ನು ಬಳಸುವುದರಿಂದ ಅದರಲ್ಲಿರುವ ರಾಸಾಯನಿಕಗಳು ನೆಲ, ಜಲ, ಗಾಳಿ ಹಾಗೂ ಪರಿಸರವನ್ನು ಕಲುಷಿತಗೊಳಿಸುತ್ತದೆ. ಸ್ಫೋಟಕಗಳು ನಾಗರಿಕರ ಮೂಲಭೂತ ಸೌಕರ್ಯಗಳಿಗೆ ಹಾನಿ ಉಂಟು ಮಾಡುತ್ತವೆ. ಯುದ್ಧದ ಪರೋಕ್ಷ ಪರಿಣಾಮಗಳಲ್ಲಿ ಅಪೌಷ್ಟಿಕತೆ, ಸಾಂಕ್ರಾಮಿಕ ಕಾಯಿಲೆಗಳು, ಮಾನಸಿಕ ಅಸ್ವಸ್ಥತೆ, ತಾಯಿ ಮತ್ತು ಶಿಶುಗಳ ಅಸ್ವಸ್ಥತೆ ಇತ್ಯಾದಿಗಳನ್ನು ಎದುರಿಸಬೇಕಾಗುತ್ತದೆ. ಜಪಾನಿನ ನಗರಗಳಿಗೆ ಹಾಕಿದ ಅಣುಬಾಂಬ್ 4000 ಡಿಗ್ರಿವರೆಗೂ ಉಷ್ಣಾಂಶ ಏರಿಕೆಯಾಗಿತ್ತೆಂದರೆ ಆ ಶಾಖಕ್ಕೆ ಕಬ್ಬಿಣವೂ ಕೂಡ ಕರಗಿ ನೀರಾಗುವುದು, ವಸ್ತುಗಳು ಸುಟ್ಟು ಭಸ್ಮವಾಗುವುದು. ಒಂದು ಮೆಗಾಟನ್ ಪರಮಾಣು ಆಯುಧವು ಅದರ ಕೇಂದ್ರದಲ್ಲಿ ಸುಮಾರು 100 ಮಿಲಿಯನ್ ಡಿಗ್ರಿ ಸೆಲ್ಸಿಯಸ್ ತಾಪಮಾನವನ್ನು ಉತ್ಪಾದಿಸುವುದು, ಇದು ಸೂರ್ಯನ ಕೇಂದ್ರದಲ್ಲಿ ಸಂಭವಿಸುವ ತಾಪಮಾನಕ್ಕಿಂತ ನಾಲ್ಕರಿಂದ ಐದು ಪಟ್ಟು ಹೆಚ್ಚು.

ಅತೀವ ಶಾಖಕ್ಕೆ ಸಿಲುಕುವ ಗಾಳಿ, ನೀರು ಮತ್ತು ನೆಲದ ಕಥೆ ಏನಾಗಬೇಡ, ಭೂಮಿ ಫಲವತ್ತತೆಯನ್ನು ಕಳೆದುಕೊಂಡು ಹುಲ್ಲು ಕೂಡ ಬೆಳೆಯದಂತಾಗುತ್ತದೆ, ಭೂಮಿ ಆಕಾಶಗಳೆರಡು ಕಪ್ಪು ಕವಿದ ಕಾರ್ಮೋಡಗಳಾಗುವುದು.

ಯುದ್ಧಭೂಮಿ ಪ್ರದೇಶಗಳ ಪರಿಸ್ಥಿತಿ ಒಂದು ಕಡೆಯಾದರೆ ಯುದ್ಧೇತರ ಪ್ರದೇಶಗಳು ಅನುಭವಿಸುವ ಪರೋಕ್ಷ ತೊಂದರೆಗಳು ನೂರು. ಮಧ್ಯಪ್ರಾಚ್ಯದಲ್ಲಿ ಯುದ್ಧ ನಡೆಯುತ್ತಿದ್ದರೂ ದೂರದ ಭಾರತೀಯರಿಗೆ ಅದರ ಶಾಖ ತಟ್ಟುವುದಕ್ಕೆ ಪ್ರಾರಂಭವಾಗಿದೆ. ನಿತ್ಯ ಬಳಕೆಯ ವಸ್ತುಗಳ ಆಮದು ಮತ್ತು ರಫ್ತು ನಿಂತುಹೋಗಿದೆ. ಪೆಟ್ರೋಲ್, ಡಿಸೇಲ್, ಗ್ಯಾಸ್ ಮತ್ತು ಡಾಂಬರ್‌ಗಳ ಆಮದು ಪ್ರಮಾಣದಲ್ಲಿ ಯುದ್ಧ ನಡೆಯುತ್ತಿರುವುದರಿಂದ ಏರುಪೇರಾಗಿದೆ. ಮಹಾನಗರಗಳಲ್ಲಿ ಅಡುಗೆ ಅನಿಲದ ಸರಬರಾಜು ಇಲ್ಲದೆ ಹೊಟೇಲ್‌ಗಳು ಮುಚ್ಚುತ್ತಿವೆ. ಹಳ್ಳಿಯಿಂದ ದಿಲ್ಲಿವರೆಗೂ ಅಡುಗೆ ಅನಿಲ ಇಲ್ಲದೆ ಜೀವನವನ್ನು ಕಲ್ಪಿಸಿಕೊಳ್ಳುವುದಕ್ಕೂ ಆಗದ ಪರಿಸ್ಥಿತಿಯನ್ನು ಮುಟ್ಟಿಯಾಗಿದೆ.

ಅಗತ್ಯ ಆಮದು ವಸ್ತುಗಳನ್ನು ಒಂದು ದೇಶ ಎಷ್ಟು ದಿನ ಸಂಗ್ರಹಿಸಿಟ್ಟುಕೊಳ್ಳಲು ಸಾಧ್ಯ, ಎಲ್ಲದಕ್ಕೂ ಮಿತಿ ಇರುತ್ತದೆ. ಮಿತಿಮೀರಿದಾಗ ಮುಲಾಜಿಲ್ಲದೆ ಯುದ್ಧದ ಪರಿಣಾಮವನ್ನು ಪರಾವಲಂಬಿತ ರಾಷ್ಟ್ರಗಳು ಎದುರಿಸಬೇಕಾಗುತ್ತದೆ. ಮುಂದಿನ ಯುದ್ಧಗಳಲ್ಲಿ Artificial Intelligence ತಂತ್ರಜ್ಞಾನವು ಬಳಕೆ ಆಗುವುದನ್ನು ಅಲ್ಲಗಳೆಯುವಂತಿಲ್ಲ. ಆಗ ಯುದ್ಧಗಳ ತೀವ್ರತೆಯು ಇನ್ನೂ ಭಯಂಕರವಾಗಿರುತ್ತದೆ.

ಯುದ್ಧ ಮಾಡುತ್ತಿರುವ ಕೊಲ್ಲಿ ರಾಷ್ಟ್ರಗಳ ಭೌಗೋಳಿಕ ಹಿನ್ನಲೆ ನೋಡಿದರೆ ಇವರಿಗೆ ಈ ಮಟ್ಟದ ಯುದ್ಧ ಮಾಡಲು ಸಾಮರ್ಥ್ಯವು ಹೇಗೆ ಬಂದಿರಬಹುದು ಎಂಬ ಸಂಶಯ ಬರದೇ ಇರುವುದಿಲ್ಲ.

ಇರಾನ್ ದೇಶದ ಜನಸಂಖ್ಯೆ ಕರ್ನಾಟಕ ರಾಜ್ಯದ ಜನಸಂಖ್ಯೆಯ ಒಂದೂವರೆ ಪಟ್ಟು ಅಂದರೆ 9.31 ಕೋಟಿ, ಆದರೆ ವಿಸ್ತೀರ್ಣದಲ್ಲಿ 8.50 ಪಟ್ಟು ಹೆಚ್ಚು, 16,28,550 ಚ.ಕಿಮೀ. ಭೂ ಪ್ರದೇಶವನ್ನು ಹೊಂದಿದೆ. ಪ್ರತೀ ಚದರ ಕಿಮೀ.ಗೆ ಕೇವಲ 57 ಜನಸಾಂದ್ರತೆ ಹೊಂದಿದೆ. ಈ ದೇಶವನ್ನು ಇಂಧನ ಸೂಪರ್ ಪವರ್ ಎಂದು ಪರಿಗಣಿಸ ಲಾಗಿದೆ. ತೈಲ ಮತ್ತು ಅನಿಲಗಳ ರಫ್ತು ಆರ್ಥಿಕ ವಾಗಿ ಬೆಳೆಯಲು ಕಾರಣವಾಗಿದೆ.

ಇಸ್ರೇಲ್ ಜನಸಂಖ್ಯೆಯು ಕರ್ನಾಟಕದ ಒಟ್ಟು ಸಂಖ್ಯೆಯ 15.50% ರಷ್ಟು ಮಾತ್ರ. ವಿಸ್ತೀರ್ಣದಲ್ಲಿ ನಮ್ಮ ಮೈಸೂರು ಜಿಲ್ಲೆಗಿಂತ ಮೂರು ಪಟ್ಟು ಹೆಚ್ಚಿದೆ, 21,640 ಚ.ಕಿಮೀ. ವಿಸ್ತೀರ್ಣದ ಪುಟ್ಟ ದೇಶ, ಪ್ರತೀ ಚದರ ಕಿಮೀ.ಗೆ 446 ಜನಸಾಂದ್ರತೆಯನ್ನು ಹೊಂದಿದೆ. ಕೈಗಾರಿಕೆ ಮತ್ತು ತಂತ್ರಜ್ಞಾನ, ವಜ್ರ ಕತ್ತರಿಸುವುದು ಮತ್ತು ಹೊಳಪು ನೀಡುವ ಉದ್ಯಮದಲ್ಲಿ ವಿಶ್ವದ ಕೇಂದ್ರಗಳಲ್ಲಿ ಒಂದಾಗಿದೆ. ನೀರಿನ ಸದ್ಬಳಕೆಯಲ್ಲಿ ಮುಂಚೂಣಿಯಲ್ಲಿರುವ ದೇಶವಿದು. ಇಸ್ರೇಲ್ ವಿಶ್ವದ ಒಣಭೂಮಿಗಳಲ್ಲಿ ಒಂದಾಗಿದೆ. ಮಳೆಯ ಇಳುವರಿ ಅತ್ಯಂತ ಕಡಿಮೆ, ಲಭ್ಯ ಇರುವ ನೀರಿನಲ್ಲಿ ಹನಿಯೂ ವ್ಯರ್ಥವಾಗದ ರೀತಿ ಬಳಕೆ ಮಾಡುವುದರಲ್ಲಿ ಮಾದರಿಯಾಗಿದ್ದಾರೆ.

ನಮ್ಮ ರಾಜ್ಯಕ್ಕೆ ಹೋಲಿಕೆ ಮಾಡಬಹುದಾದ ಪ್ರಮಾಣದ ಪುಟ್ಟ ದೇಶಗಳಾದರೂ ಅವುಗಳಲ್ಲಿ ಇರುವ ಸಂಪನ್ಮೂಲಗಳಿಂದಾಗಿ ಅಭಿವೃದ್ಧಿಯಾಗಿರುವ ದೇಶಗಳಾಗಿವೆ. ಆರ್ಥಿಕವಾಗಿ ಕೊಬ್ಬಿರುವ ಕಾರಣವೂ ಇರಬಹುದು ಒಂದಕ್ಕೊಂದು ಬಡಿದಾಡಿಕೊಂಡು ಯುದ್ಧಗಳಿಗೆ ಅನಾವಶ್ಯಕ ಹಣದ ಖರ್ಚು ಹಾಗೂ ಜನಸಂಖ್ಯೆಯ ಕುಂಠಿತಕ್ಕೆ ಕಾರಣವಾಗುತ್ತಿವೆ. ಇದು ಬೇಕಿತ್ತೇ?. ಯುದ್ಧದಲ್ಲಿ ಗೆದ್ದು ಗಳಿಸುವುದಾದರು ಏನು ಎಂಬುದನ್ನು ಇರಾನ್ ಮತ್ತು ಇಸ್ರೇಲ್ ದೇಶಗಳು ಪ್ರಪಂಚಕ್ಕೆ ತಿಳಿಸಲಿ.


There was never a good war or a bad peace- Benjamin Franklin

ಬೆಂಜಮಿನ್ ಫ್ರಾಂಕ್ಲಿನ್ ಹೇಳುವಂತೆ ಒಳ್ಳೆಯ ಯುದ್ಧ ಅಥವಾ ಕೆಟ್ಟ ಶಾಂತಿ ಎಂಬುದು ಇರುವುದಿಲ್ಲ. ಎಲ್ಲವೂ ನಾವು ತೆಗೆದುಕೊಳ್ಳುವ ನಿರ್ಧಾರದಲ್ಲಿ ಅಡಗಿದೆ. ಇರಾನ್, ಇಸ್ರೇಲ್–ಅಮೆರಿಕಾ ದೇಶಗಳು ತೆಗೆದುಕೊಳ್ಳುವ ನಿರ್ಧಾರಗಳಲ್ಲಿ ವಿಶ್ವದ ಶಾಂತಿಯು ಅಡಗಿದೆ, ಯುದ್ಧವನ್ನು ನಿಲ್ಲಿಸುವ ಒಪ್ಪಂದಕ್ಕೆ ಬರಲು ಮನಸ್ಸು ಮಾಡುತ್ತಿದ್ದಾರೆ ಎಂಬುದು ಇತ್ತೀಚೆಗೆ ಸುದ್ದಿ ಆಗಿರುವಂತಹದ್ದು, ನಿಮ್ಮೊಳಗಿನ ಕೊಬ್ಬನ್ನು ಕರಗಿಸಿ ಶಾಂತಿಯ ಒಪ್ಪಂದಕ್ಕೆ ಬನ್ನಿ, ಇಲ್ಲವಾದಲ್ಲಿ ವಿಶ್ವದ ಎದುರು ಈಗಾಗಲೇ ಅರೆಬೆತ್ತಲೆ ಆಗಿರುವ ನೀವುಗಳು ಸಂಪೂರ್ಣ ಬೆತ್ತಲೆ ಆಗುತ್ತೀರಿ. ಒಳ್ಳೆಯ ಹೆಜ್ಜೆಗಳನ್ನು ಇಡುವ ಮೂಲಕ ವಿಶ್ವದಲ್ಲಿ ಶಾಂತಿ ನೆಲೆಸಲಿ, ಜನಜೀವನ ಸಹಜ ಸ್ಥಿತಿಗೆ ಬರುವಂತಾಗಲಿ.

> “ ದೇಶಗಳ ನಡುವೆ ನಡೆಯುವ ಯುದ್ಧಗಳು ಜೀವಿಗಳ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಮಾನವ ಹಕ್ಕುಗಳ ಸಂಪೂರ್ಣಉಲ್ಲಂಘನೆಯಾಗುತ್ತದೆ. ಪರಿಸರವು ಕಲುಷಿತವಾಗುವುದರಿಂದ ಪ್ರಕೃತಿ ಮೇಲೆ ಹೊಡೆತ ಬೀಳುತ್ತದೆ. ಮರು ಸ್ಥಾಪನೆಗೆ ನೂರು ವರ್ಷಗಳಾದರೂ ಸಾಲದು.

ಮಾ.16, 17 ರಂದು ರಾಷ್ಟ್ರೀಯ ವಿಚಾರ ಸಂಕಿರಣ

ಮೈಸೂರು, ಮಾ.13– ಮೈಸೂರು ವಿಶ್ವವಿದ್ಯಾನಿಲಯದ ಕನ್ಸಾರ್ಟಿಯಮ್ ಫಾರ್ ಎಜ್ಯುಕೇಷನಲ್ ಕಮ್ಯುನಿಕೇಷನ್ ನವದೆಹಲಿ ಮತ್ತು ಶೈಕ್ಷಣಿಕ ಬಹುಮಾಧ್ಯಮ ಸಂಶೋಧನ ಕೇಂದ್ರ (ಇ.ಎಂ.ಆರ್.ಸಿ) ಇವರ ಸಹಯೋಗದೊಂದಿಗೆ ಆಯೋಜಿಸುತ್ತಿರುವ ‘Transforming Education for the Future Intelligent, Inclusive and Immersive Learning’ ವಿಷಯ ಕುರಿತು 2 ದಿನದ ರಾಷ್ಟ್ರೀಯ ವಿಚಾರ ಸಂಕಿರಣವು ಮಾ.16 ಹಾಗೂ 17 ರಂದು ಬೆಳಗ್ಗೆ 10.30 ಗಂಟೆಗೆ ಮಾನಸಗಂಗೋತ್ರಿಯ ಬಹದ್ದೂರ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸ್ಟಡಿಸ್ ಇಲ್ಲಿ ನಡೆಯಲಿದೆ ಎಂದು ಶೈಕ್ಷಣಿಕ ಬಹುಮಾಧ್ಯಮ ಸಂಶೋಧನ ಕೇಂದ್ರ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



‘ಅಗ್ನಿಯ ರೆಕ್ಕೆಗಳು’ 19ನೇ ಮರು ಮುದ್ರಣ ಸುತ್ತೂರು ಶ್ರೀಗಳಿಗೆ ಅರ್ಪಣೆ

ಮೈಸೂರು: ಬಹು ಜನಪ್ರಿಯತೆ ಪಡೆದ ಡಾ. ಕಲಾಂ ಅವರ ‘ವಿಂಗ್ಸ್ ಆಫ್ ಫೈರ್’ ಕನ್ನಡ ಭಾಷೆಯಲ್ಲಿ ಅನುವಾದಗೊಂಡು ಇದೀಗ 19ನೇ ಮರು ಮುದ್ರಣಗೊಂಡ ‘ಅಗ್ನಿಯ ರೆಕ್ಕೆಗಳು’ ವಿಸ್ತರಿತ ಆವೃತ್ತಿಯನ್ನು ಕನ್ನಡದ ಲೇಖಕ ಜಯಪ್ರಕಾಶ್ ರಾವ್, ಗೌರವ ಪೂರ್ವಕವಾಗಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳಿಗೆ ಅರ್ಪಿಸಿದರು. ಡಿಆರ್‌ಡಿಓ ಸಂಸ್ಥೆ ಪ್ರಧಾನ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಸೇವೆ ಸಲ್ಲಿಸಿದ ರಾವ್, ಡಾ. ಕಲಾಂ ಅವರ ಶಿಷ್ಟಾಚಾರ ಹಾಗೂ ಸಮನ್ವಯಾಧಿಕಾರಿಯಾಗಿ 7 ವರ್ಷ ಕಾಲ ಕಾರ್ಯನಿರ್ವಹಿಸಿದ್ದು ಕನ್ನಡ ಭಾಷೆಯಲ್ಲಿ 8 ಪುಸ್ತಕಗಳನ್ನು ಬರೆದಿದ್ದಾರೆ.

ನ್ಯಾ.ನಾಗಮೋಹನ್‌ದಾಸ್ ಒಳ ಮೀಸಲಾತಿ ವರದಿ ತಿರಸ್ಕರಿಸಲು ಒತ್ತಾಯಿಸಿ ಸಿಎಂಗೆ ಮನವಿ

ಜ್ಞಾನಪ್ರಕಾಶ್ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಸಭೆಯಲ್ಲಿ ಚರ್ಚೆ



ಒಳ ಮೀಸಲಾತಿ ವರದಿಯನ್ನು ತಿರಸ್ಕರಿಸುವಂತೆ ಜ್ಞಾನಪ್ರಕಾಶ ಸ್ವಾಮೀಜಿ ಸಮ್ಮುಖದಲ್ಲಿ ಬೆಂಗಳೂರಿನಲ್ಲಿ ಬಲಗೈ ಸಮುದಾಯಗಳ ಮುಖಂಡರ ಸಭೆ ನಡೆಸಲಾಯಿತು.

ಮೈಸೂರು, ಮಾ.13(ಜಿಎ)–ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್ ದಾಸ್ ಸಲ್ಲಿಸಿದ ಒಳ ಮೀಸಲಾತಿ ವರದಿಯನ್ನು ತಿರಸ್ಕರಿಸುವಂತೆ ಒತ್ತಾಯಿಸಿ ಉರಿಲಿಂಗಿಪೆದ್ದಿ ಮಠದ ಪೀಠಾಧಿಪತಿ ಜ್ಞಾನಪ್ರಕಾಶ ಸ್ವಾಮೀಜಿ ನೇತೃತ್ವದಲ್ಲಿ ಸಭೆ ನಡೆಸಿ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ವತಿಯಿಂದ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಹೆಚ್.ಎನ್. ನಾಗಮೋಹನ್ ದಾಸ್ ಸಲ್ಲಿಸಿದ ಒಳ ಮೀಸಲಾತಿ ವರದಿಯನ್ನು ತಿರಸ್ಕರಿಸುವಂತೆ ಮಾ.25 ಅಥವಾ 26ರಂದು ಬೆಂಗಳೂರಲ್ಲಿ ಬೃಹತ್ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಗಿದೆ. ಉರಿಲಿಂಗಿಪೆದ್ದಿ ಮಠದ ಪೀಠಾಧಿಪತಿ ಜ್ಞಾನಪ್ರಕಾಶ ಸ್ವಾಮೀಜಿ ಅವರ ಸಮ್ಮುಖದಲ್ಲಿ ಬೆಂಗಳೂರಿನಲ್ಲಿ ಗುರುವಾರ ನಡೆದ ಬಲಗೈ ಸಮುದಾಯಗಳ ಮುಖಂಡರ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿರುವುದನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ ತಿಳಿಸಲಾಗಿದೆ.

ಸಭೆಯ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿ, ಒಳ ಮೀಸಲಾತಿ ಜಾರಿಯಾದರೆ ಬಲಗೈ ಸಮುದಾಯಕ್ಕೆ ಆಗುವ ಅನ್ಯಾಯದ ಬಗ್ಗೆ ವಿವರಿಸಿದರು.

ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಮಾತನಾಡಿ, ಒಳ ಮೀಸಲಾತಿ ಬಗ್ಗೆ ಚರ್ಚಿಸಲು ಮಾ.27ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಶೇಷ ಸಚಿವ ಸಂಪುಟ ಸಭೆ ಕರೆದಿದ್ದಾರೆ. ಅದಕ್ಕೂ ಮುನ್ನ ಬಲಗೈ ಸಮುದಾಯದಿಂದ ಪ್ರತಿಭಟನೆ ಮಾಡಲಾಗುವುದು. ಪೊಲೀಸರ ಅನುಮತಿ ದೊರೆತ ಬಳಿಕ ದಿನಾಂಕ ಅಂತಿಮಗೊಳಿಸಲಾಗುತ್ತದೆ ಎಂದು ಹೇಳಿದ್ದಾರೆ. ಒಳ ಮೀಸಲಾತಿ ಜಾರಿಯಾದರೆ ಬಲಗೈ ಜನರಿಗೆ ಆಗುವ ಅನಾನುಕೂಲತೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು. ಬೃಹತ್ ಪ್ರತಿಭಟನೆಗೆ 3 ಲಕ್ಷಕ್ಕೂ ಅಧಿಕ ಜನರನ್ನು ಸೇರಿಸಬೇಕು. ಶಕ್ತಿ ಪ್ರದರ್ಶನ ಮಾಡಬೇಕು. ಸಮುದಾಯದ ಹಿತವನ್ನು ಬಲಿಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಮುಖಂಡರು ಅಭಿಪ್ರಾಯಪಟ್ಟರು ಎಂದರು.

ಈ ಸಂದರ್ಭದಲ್ಲಿ ವಕೀಲ ತಿಮ್ಮಯ್ಯ, ತುಂಬಲ ರಾಮಣ್ಣ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಮಾ.13– ವಿ.ವಿ. ಮೊಹಲ್ಲಾ ವಿಭಾಗ ವ್ಯಾಪ್ತಿಯಲ್ಲಿ ನಿರ್ವಹಣಾ ಕೆಲಸದ ನಿಮಿತ್ತ ಮಾ.15 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆವರೆಗೆ ಡಿ.ಎಂ.ಜಿ ಹಳ್ಳಿ ಹೂಟಗಳ್ಳಿ ಕೆ.ಹೆಚ್.ಬಿ. ಕಾಲೋನಿ, ವಿಜಯನಗರ 4ನೇ ಹಂತ, ಸಿ.ಬ್ಲಾಕ್, ಹುಣಸೂರು ಮುಖ್ಯರಸ್ತೆ, ಹಿನಕಲ್, ಮಹಾಲಕ್ಷ್ಮೀ ಬಡಾವಣೆ, ನನ್ನೇಶ್ವರನಗರ, ಆದಿತ್ಯ ಬಡಾವಣೆ, ಕಾವೇರಿ ಬಡಾವಣೆ, ಗೋಕುಲ್‌ದಾಸ್ ಕೈಗಾರಿಕೆ, ಬೆಳವಾಡಿ ಪೆಟ್ರೋಲ್ ಬಂಕ್ ಸುತ್ತಮುತ್ತ, ಲಿಂಗದೇವರಕೊಪ್ಪಲು, ಕಿರ್ಲೋಸ್ಕರ್ ಕೈಗಾರಿಕೆ, ಹೋಂಡಾ ಶೋರೂಂ, ಟೈಟಾನ್‌ವಾಲ್ ಕೈಗಾರಿಕೆ, ಗೋಹಳ್ಳಿ, ಜಟ್ಟಿಹುಂಡಿ, ಕೆ. ಹೆಮ್ಮನಹಳ್ಳಿ, ಗಾಣಗರಹುಂಡಿ, ಸಾಹುಕಾರಹುಂಡಿ, ಮಾದಗಳ್ಳಿ, ಬಸವನಪುರ, ಮರಟಿಕ್ಯಾತನಹಳ್ಳಿ ಗೇಟ್ ಸುತ್ತಮುತ್ತ, ಬೆಳವಾಡಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಡಿ.ಎಂ.ಜಿ ಹಳ್ಳಿ ಮರಿಯ್ಯನಹುಂಡಿ, ಕಟ್ಟೆಹುಂಡಿ, ಮಾಣಿಕ್ಯಪುರ, ಕರಕನಹಳ್ಳಿ, ಮಾದಳ್ಳಿ, ಶೆಟ್ಟಿನಾಯಕನಹಳ್ಳಿ, ನುಗ್ಗೆಹಳ್ಳಿ, ಕುಮಾರಬೀಡು, ಬೀರಿಹುಂಡಿ, ಕಮರಹಳ್ಳಿ ಗ್ರಾಮ, ದೊಡ್ಡಹಟ್ಟಿಹುಂಡಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಪ್ರದೇಶಗಳು.

ಹೆಬ್ಬಾಳ್ ಡಾಲರ್ ಬರ್ಡ್, ವಾಟರ್‌ಟೆಕ್, ಸಿ–5 ಕೋಲ್ಡ್, ಓಯಾಸಿಸ್ ಹೋಟಲ್, ಪಟ್ಟಾಭಿ, ಫ್ರೇಂ ಇಂಡಸ್ಟ್ರಿಸ್, ಇನ್‌ಫೋಸಿಸ್ ಮುಖ್ಯರಸ್ತೆ, ಗೋಲ್ಡನ್‌ಗ್ಯಾಸ್, ಸ್ಪೈಲ್, ಸದರನ್‌ಗ್ಯಾಸ್ ರಸ್ತೆ, ಅರೋಮ ಬೇಕರಿ, ವಿಜಯ ಕರ್ನಾಟಕ ಪ್ರೆಸ್, ಅಂಬಾರಿ, ದಿವ್ಯ ಇಂಜಿನಿಯರಿಂಗ್, ರವೆ ಫ್ಯಾಕ್ಟರಿ, ಕೂರ್ಗಳ್ಳಿ ಗ್ರಾಮ, ಶಿವನಗರ, ಮೇಘಲಕೊಪ್ಪಲು, ಚಾಮುಂಡೇಶ್ವರಿನಗರ, ಕೂರ್ಗಳ್ಳಿ ಕೈಗಾರಿಕಾ ಪ್ರದೇಶ, ವರ್ಧಿಎಲೆಕ್ಟ್ರಾನಿಕ್ಸ್, ಎಕ್ಸೆಲ್ ಪಬ್ಲಿಕ್ ಸ್ಕೂಲ್, ವರ್ಷ ಕೇಬಲ್, ರಿಮ್ಕೋ ಕೈಗಾರಿಕೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಶನಿವಾರ 14 ಮಾರ್ಚ್ 2026

ಇಂದು ಜೆಎಸ್‌ಎಸ್ ಕಾನೂನು ಕಾಲೇಜಲ್ಲಿ ನ್ಯಾಯಮೂರ್ತಿ ವಿ.ರಾಮಸುಬ್ರಮಣಿಯನ್ ಅವರಿಂದ ವಿಶೇಷ ಉಪನ್ಯಾಸ



ಮೈಸೂರು, ಮಾ.13– ನಗರದ ಜೆಎಸ್‌ಎಸ್ ಕಾನೂನು ಕಾಲೇಜು, ಜೆಎಸ್‌ಎಸ್ ಎಲ್‌ಸಿ ಹಳೆಯ ವಿದ್ಯಾರ್ಥಿಗಳ ಸಂಘ ಮತ್ತು ನೀತಿ ವೇದಿಕೆ ಸಹಯೋಗದಲ್ಲಿ ಕಾಲೇಜಿನ ಸಿಲ್ವರ್ ಜುಬಿಲಿ ಹಾಲ್‌ನಲ್ಲಿ ಶನಿವಾರ(ಮಾ.14) ಬೆಳಗ್ಗೆ 10ಕ್ಕೆ ನೀತಿ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ವಿ.ರಾಮಸುಬ್ರಮಣಿಯನ್ ಅವರು 'ಗೌಪ್ಯತೆ, ತಂತ್ರಜ್ಞಾನ ಮತ್ತು ಕಣ್ಗಾವಲು: ಡಿಜಿಟಲ್ ಯುಗದಲ್ಲಿ ಮಾನವ ಹಕ್ಕುಗಳ ಭವಿಷ್ಯ' ಕುರಿತು ಮಾತನಾಡಲಿದ್ದಾರೆ. ಜೆಎಸ್‌ಎಸ್‌ಎಲ್‌ಸಿ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ.ಕೆ.ಎಸ್. ಸುರೇಶ್, ಪ್ರಾಂಶುಪಾಲರಾದ ಡಾ.ಎನ್.ವಾಣಿಶ್ರೀ ಉಪಸ್ಥಿತರಿರಲಿದ್ದಾರೆ.

ಶಿರಾಡಿಘಾಟ್‌ನಲ್ಲಿ ಭೀಕರ ಅಪಘಾತ: ಕಾರಿನಲ್ಲಿದ್ದ ನಾಲ್ವರ ಪೈಕಿ ಮೂವರು ಸಾವು

ಓರ್ವನ ಸ್ಥಿತಿ ಗಂಭೀರ

ಮಂಗಳೂರು, ಮಾ.13– ಕೆಎಸ್‌ಆರ್‌ಟಿಸಿ ರಾಜಹಂಸ ಬಸ್ ಹಾಗೂ ಕಾರಿನ ನಡುವೆ ಭೀಕರ ಅಪಘಾತ ಸಂಭವಿಸಿದ್ದು, ಕಾರಿನಲ್ಲಿದ್ದ ಮೂವರು ಸ್ಥಳದಲ್ಲಿ ಸಾವನ್ನಪ್ಪಿರುವ ಘಟನೆ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಶಿರಾಡಿಘಾಟ್‌ನ ಗುಂಡ್ಯ ಸಮೀಪ ನಡೆದಿದೆ. ಉಜಿರೆ ನಿವಾಸಿಗಳಾದ ಶ್ರೀಧರ ಮರಕಡ, ಜನಾರ್ದನ ಕೆರಿಮಾರ್ ಹಾಗೂ ಕೊಕ್ಕಡ ನಿವಾಸಿ ಚಂದ್ರಶೇಖರಗೌಡ ಮೃತ ದುರ್ದೈವಿಗಳು ಎಂದು ಗುರುತಿಸಲಾಗಿದೆ. ಇನ್ನು ಈ ಘಟನೆಯಲ್ಲಿ ಕಾರಿನಲ್ಲಿದ್ದ ಮತ್ತೋರ್ವ ಸುರೇಶ್ ಎಂಬುವರ ಸ್ಥಿತಿ ಗಂಭೀರವಾಗಿದ್ದು, ಆಸ್ಪತ್ರೆಗೆ ರವಾನಿಸಲಾಗಿದೆ.

ನಾಲ್ವರು ಒಂದೇ ಕಾರಿನಲ್ಲಿ ಸಕಲೇಶಪುರದಲ್ಲಿ ಮದುವೆ ಮುಗಿಸಿಕೊಂಡು ವಾಪಸ್ ಉಜಿರೆ ಕಡೆ ಹೋಗುತ್ತಿದ್ದರು. ಇನ್ನು ಕೆಎಸ್‌ಆರ್‌ಟಿಸಿ ರಾಜಹಂಸ ಬಸ್ ಮಂಗಳೂರು ಕಡೆಯಿಂದ ಬಂದಿದ್ದು, ಶಿರಾಡಿಘಾಟ್‌ನ ಗುಂಡ್ಯ ಸಮೀಪ ಮುಖಾಮುಖಿ ಡಿಕ್ಕಿಯಾಗಿವೆ. ಪರಿಣಾಮ ಕಾರಿನಲ್ಲಿದ್ದ ನಾಲ್ವರ ಪೈಕಿ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದರೆ, ಮತ್ತೋರ್ವನ ಸ್ಥಿತಿ ಗಂಭೀರವಾಗಿದೆ. ಸ್ಥಳಕ್ಕೆ ಉಪ್ಪಿನಂಗಡಿ ಠಾಣೆ ಪೊಲೀಸರ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಸಕಲೇಶಪುರದಿಂದ ಕೊಕ್ಕಡ ಕಡೆಗೆ ಬರುತ್ತಿದ್ದ ಶಿಶಿಲ ಗ್ರಾಮದ ಧರ್ಮದಕಳ ನಿವಾಸಿ ಚಂದ್ರಶೇಖರ ಗೌಡರವರು ಪ್ರಯಾಣಿಸುತ್ತದ್ದ ಸ್ವಿಫ್ಟ್ ಕಾರು ಮತ್ತು ಧರ್ಮಸ್ಥಳದಿಂದ ತಿರುಪತಿಗೆ ಹೊರಟಿರುವ ಕೆಎಸ್‌ಆರ್‌ಟಿಸಿ ರಾಜಹಂಸ ಬಸ್ ನಡುವೆ ಮಂಗಳೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಗುಂಡ್ಯ ಸಮೀಪ ಈ ದುರ್ಘಟನೆ ಸಂಭವಿಸಿದೆ. ಇನ್ನು ಕಾರಿನಲ್ಲಿದ್ದ ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷ ಸುರೇಶ್ ಉಜಿರೆ ಅವರಿಗೆ ಗಂಭೀರ ಗಾಯಗಳಾಗಿದ್ದು, ಅವರನ್ನು ಮಂಗಳೂರು ಆಸ್ಪತ್ರೆಗೆ ಸಾಗಿಸಲಾಗಿದೆ ಎಂದು ತಿಳಿದು ಬಂದಿದೆ.

ಜಾಕಿ ಸಂಸ್ಥೆಯಿಂದ ಆಂಬುಲೆನ್ಸ್ ಕೊಡುಗೆ



ಪೇಜ್ ಇಂಡಸ್ಟ್ರೀಸ್ ಲಿಮಿಟೆಡ್ 'ಜಾಕಿ' ಸಂಸ್ಥೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಾ ಘಟಕಕ್ಕೆ ಆಂಬುಲೆನ್ಸ್ ಹಸ್ತಾಂತರಿಸಿದರು.

ಮೈಸೂರು, ಮಾ.13– ಮೈಸೂರಿನ ಪೇಜ್ ಇಂಡಸ್ಟ್ರೀಸ್ ಲಿಮಿಟೆಡ್ 'ಜಾಕಿ' ಸಂಸ್ಥೆ ತನ್ನ ಸಿ.ಎಸ್.ಆರ್ ಅನುದಾನದಡಿಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕಕ್ಕೆ ಆಂಬುಲೆನ್ಸ್ ಹಸ್ತಾಂತರಿಸಿದರು.

ಜಾಕಿ ಸಂಸ್ಥೆ, ಯೂನಿಟ್ ಪ್ರೊಡಕ್ಟ್ ಹೆಡ್ ಶ್ಯಾಬುರಾವ್ ಅವರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿಗೆ ಆಂಬುಲೆನ್ಸ್ ಹಸ್ತಾಂತರ ಮಾಡಿದರು.

ಬಳಿಕ ಮಾತನಾಡಿದ ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ, ಆಂಬುಲೆನ್ಸ್ ವಾಹನವು ಹೆಚ್.ಐ.ವಿ/ಏಡ್ಸ್ ಸಂಶಯಾತ್ಮಕ ಪ್ರಕರಣಗಳ ತುರ್ತು ಚಿಕಿತ್ಸೆಗೆ ಹಾಗೂ ಆಪ್ತ ಸಮಾಲೋಚನೆಗೆ ಸಹಕಾರಿಯಾಗಲಿದೆ. ಇದರಿಂದಾಗಿ ಸೂಕ್ತ ಸಮಯದಲ್ಲಿ ಆರೋಗ್ಯ ಸೇವೆ ನೀಡುವುದರಿಂದ ದೂರದ ಊರುಗಳಿಗೂ ಹತ್ತಿರದ ಆರೈಕೆ ಸಾಧ್ಯವಾಗಲಿದೆ ಎಂದರು.

ಸಿ.ಎಸ್.ಆರ್ ಕಾರ್ಯಚಟುವಟಿಕೆ ಮುಖ್ಯಸ್ಥ ಸುಬ್ರಹ್ಮಣ್ಯ, ಅರವಿಂದ್ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಮಹಮ್ಮದ್ ಸಿರಾಜ್ ಅಹಮ್ಮದ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಿಧಾನಸಭೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಮೂಲಸೌಕರ್ಯದ ಗಂಭೀರ ಸ್ಥಿತಿಗಳ ಬಗ್ಗೆ ಸರ್ಕಾರದ ಗಮನ ಸೆಳೆದ ಜಿಟಿಡಿ

ಒಳಚರಂಡಿ ವ್ಯವಸ್ಥೆಗೆ 27 ಕೋಟಿ; 800 ಕೋಟಿ ವಿಶೇಷ ಅನುದಾನದಲ್ಲೂ ಆದ್ಯತೆ: ಸಚಿವ ಭೈರತಿ ಸುರೇಶ್ ಭರವಸೆ

ಮೈಸೂರು, ಮಾ.13– ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಒಳಚರಂಡಿ ವ್ಯವಸ್ಥೆಗೆ ಅಗತ್ಯ ಅನುದಾನ ಬಿಡುಗಡೆ ಮಾಡುವುದಾಗಿ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರಿಗೆ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಮಾತನಾಡಿದ ಶಾಸಕ ಜಿ.ಟಿ.ದೇವೇಗೌಡರು, ತಮ್ಮ ಕ್ಷೇತ್ರದಲ್ಲಿ ಮಿಸ್ಸಿಂಗ್ ಲಿಂಕ್‌ಗಳು ಸೇರಿದಂತೆ ಒಳಚರಂಡಿ ಕಾಮಗಾರಿಗೆ 27 ಕೋಟಿ ರೂ. ಪ್ರಸ್ತಾವನೆ ಸಲ್ಲಿಸಿದ್ದು, ಶೀಘ್ರ ಅನುದಾನ ನೀಡುವಂತೆ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಭೈರತಿ ಸುರೇಶ್, ಅಗತ್ಯ ಅನುದಾನ ಬಿಡುಗಡೆ ಮಾಡುವುದಾಗಿ ಹೇಳಿದರು.

ಗಂಭೀರ ಸಮಸ್ಯೆ ಮನವರಿಕೆ: ಇದೇ ವೇಳೆ ಜಿ.ಟಿ.ದೇವೇಗೌಡರು, ತಮ್ಮ ಕ್ಷೇತ್ರದಲ್ಲಿನ ಒಳಚರಂಡಿ ಹಾಗೂ ಕಸವಿಲೇವಾರಿ ಗಂಭೀರ ಸಮಸ್ಯೆಯನ್ನು ಸದನದಲ್ಲಿ ವಿವರಿಸುವ ಮೂಲಕ ಸರ್ಕಾರದ ಗಮನ ಸೆಳೆದರಲ್ಲದೆ, ಕ್ಷೇತ್ರದ ಮೂಲ ಸೌಕರ್ಯಕ್ಕೆ ಹೆಚ್ಚಿನ ಅನುದಾನದ ಅಗತ್ಯವಿದೆ ಎಂದು ತಿಳಿಸಿದರು.

ಬಡಾವಣೆಗಳಲ್ಲಿ ನಿರ್ವಹಣೆ ಇಲ್ಲದ ಎಸ್‌ಟಿಪಿಗಳಿಗೆ ಒಳಚರಂಡಿ ನೀರು ಸೇರಿ, ಬಳಿಕ ಕಾಲುವೆ, ಹಳ್ಳಗಳಲ್ಲಿ ಹರಿಯುತ್ತಿರುವುದರಿಂದ ಜನ–ಜಾನುವಾರುಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಬಡಾವಣೆಗಳಲ್ಲಿ ಒಳಚರಂಡಿ ಹಾಗೂ



ಭೈರತಿ ಸುರೇಶ್ ಜಿ.ಟಿ.ದೇವೇಗೌಡ

ಎಸ್‌ಟಿಪಿಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡದ ಕಾರಣ ಈ ಸಮಸ್ಯೆ ಉಂಟಾಗಿದೆ. ಈ ಬಗ್ಗೆ ಹಲವು ಬಾರಿ ಮುಖ್ಯಮಂತ್ರಿಗಳು ಹಾಗೂ ನಗರಾಭಿವೃದ್ಧಿ ಸಚಿವರ ಗಮನಕ್ಕೆ ತಂದಿದ್ದೇನೆ. ಕೆಡಿಪಿ ಸಭೆಯಲ್ಲೂ ಪ್ರಸ್ತಾಪಿಸಿದ್ದೇನೆ. ಜಿಲ್ಲಾಧಿಕಾರಿಗಳು, ನಗರಪಾಲಿಕೆ ಆಯುಕ್ತರೊಂದಿಗೆ ಸ್ಥಳ ಪರಿಶೀಲನೆಯನ್ನೂ ಮಾಡಿದ್ದೇನೆ. ಆದರೂ ಸಮಸ್ಯೆ ಬಗೆಹರಿದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಎಡಿಬಿ ಲೈನ್ ಸರಿಪಡಿಸಿ: ವಿಜಯನಗರ 2ನೇ ಹಂತದಿಂದ ಪ್ರಾರಂಭವಾಗುವ ಎಡಿಬಿ ಲೈನ್ ಹಿನ್‌ಕಲ್, ವಿಜಯನಗರ 3ನೇ ಹಂತ, ಬೋಗಾದಿ 2ನೇ ಹಂತ, ಶಾರದಾದೇವಿನಗರ, ಆನಂದನಗರ, ಕಾರ್ತಿಕ ಬಡಾವಣೆ, ದಟ್ಟಗಳ್ಳಿ ಮೂಲಕ ಲಿಂಗಾಂಬುದಿ ಕೆರೆ, ಪ್ರೀತಿ ಲೇಔಟ್, ಅರಸು ಲೇಔಟ್ ಮೂಲಕ ರಾಯನಕೆರೆ ಎಸ್‌ಟಿಪಿ ಸಂಪರ್ಕಿಸುತ್ತದೆ. ಆದರೆ, ಕೆಲ ಖಾಸಗಿ ಬಡಾವಣೆಗಳ ಒಳಚರಂಡಿಯನ್ನು ನೇರವಾಗಿ ಎಡಿಬಿ ಲೈನ್‌ಗೆ ಸಂಪರ್ಕಿಸಿರುವ ಪರಿಣಾಮ ಕೊಳಚೆ ನೀರು ರಾಯನಕೆರೆ ಎಸ್‌ಟಿಪಿ ಬದಲು ಹಳ್ಳದ ಮೂಲಕ ಎಣ್ಣೆಹೊಳೆ ಸೇರುತ್ತಿದೆ. ಹಾಗೆಯೇ ಮರಟಿಕ್ಯಾತನಹಳ್ಳಿ, ದಾಸನಕೊಪ್ಪಲು ಎಸ್‌ಬಿಎಂ ಬಡಾವಣೆಯ ಒಳಚರಂಡಿ ಕಾಮಗಾರಿ ಪೂರ್ಣಗೊಳ್ಳದ ಕಾರಣ ಕೇರ್ಗಳ್ಳಿ ಬಳಿಯ ಅಯ್ಯಜಯನ ಕೆರೆ ಕಲುಷಿತಗೊಳ್ಳುತ್ತಿದೆ ಎಂದು ಬೇಸರ ಹೊರಹಾಕಿದರು.

ಕೆರೆಗಳು ಕಲುಷಿತ: ಲಿಂಗಾಂಬುದಿ ಕೆರೆ ಆವರಣದಲ್ಲಿ ಪ್ರತಿದಿನ ಸಾವಿರಾರು ಜನ ವಾಯುವಿಹಾರ ಮಾಡುತ್ತಾರೆ. ಆದರೆ ದುರ್ವಾಸನೆ ಸಹಿಸಲಾಗದೆ ನಿತ್ಯ ದೂರುತ್ತಿದ್ದಾರೆ. ನಗರಪಾಲಿಕೆ ಆಯುಕ್ತರೊಂದಿಗೆ ಮೂರು ಬಾರಿ ಸ್ಥಳ ಪರಿಶೀಲನೆ ನಡೆಸಿದ್ದಾಯ್ತು. ಆದರೆ ಈವರೆಗೂ ಅಭಿವೃದ್ಧಿಗೆ ಮುಂದಾಗಿಲ್ಲ. ಶ್ರೀಮತಿ ಸುಧಾಮೂರ್ತಿ ಅವರು ಇನ್ಫೋಸಿಸ್ ಫೌಂಡೇಷನ್ ಮೂಲಕ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಹೆಬ್ಬಾಳು ಕೆರೆಯನ್ನು ಅಭಿವೃದ್ಧಿಪಡಿಸಿದರು. ಆದರೆ ನಂತರ ಸ್ಥಳೀಯ ಸಂಸ್ಥೆಗಳ ವೈಫಲ್ಯದಿಂದ ಆ ಕೆರೆಯೂ ಕಲುಷಿತಗೊಂಡಿದೆ ಎಂದು ತಿಳಿಸಿದರು.

ಎಂಡಿಎ ಮೂಲಕ ತುರ್ತು ಕ್ರಮವಾಗಲಿ: ಮುಡಾ(ಈಗಿನ ಎಂಡಿಎ) ಅನುಮೋದಿತ ಬಡಾವಣೆಗಳ ನಿವಾಸಿಗಳು ಕಂದಾಯ, ನೀರು ಹಾಗೂ ವಿದ್ಯುತ್ ಬಿಲ್ ಪಾವತಿಸಿಕೊಂಡು ಬಂದಿದ್ದರೂ ಅವರಿಗೆ ಸಮರ್ಪಕ ಮೂಲ ಸೌಕರ್ಯ ಕಲ್ಪಿಸಲು ಸಾಧ್ಯವಾಗಿಲ್ಲ. ಇಂತಹ ಸಾವಿರ ಬಡಾವಣೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡಲಾಗಿದೆ. ಆದರೆ ಅಲ್ಲಿಯೂ ಅನುದಾನ ಇಲ್ಲದಿರುವುದರಿಂದ ಜಿಲ್ಲಾಡಳಿತ ಸರ್ಕಾರಕ್ಕೆ 1500 ಕೋಟಿ ಅನುದಾನಕ್ಕಾಗಿ ಮನವಿ ಸಲ್ಲಿಸಿದೆ. ಅನುದಾನ ನೀಡಲಾಗದಿದ್ದರೆ ಎಂಡಿಎ ಮೂಲಕವಾದರೂ ತುರ್ತಾಗಿ ಯುಜಿಡಿ, ಕಸ ವಿಲೇವಾರಿ ಘಟಕ ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ವರ್ಷಗಳಿಂದ 300 ಸಿಎ ನಿವೇಶನಗಳು ವಿಲೇಯಾಗಿಲ್ಲ. ಅವುಗಳನ್ನು ಮಂಜೂರು ಮಾಡಿದರೆ ಸಾವಿರಾರು ಕೋಟಿ ಹಣ ಬರುತ್ತದೆ. ಆ ಹಣವನ್ನೇ ಮೂಲ ಸೌಕರ್ಯಕ್ಕೆ ಬಳಸಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಭೈರತಿ ಸುರೇಶ್ ಎರಡನೇ ಸಿಎಂ ಇದ್ದಂತೆ

ಬೆಂಗಳೂರು, ಮಾ.13– ನೀವು ರಾಜ್ಯದ ಎರಡನೇ ಮುಖ್ಯಮಂತ್ರಿ ಇದ್ದ ಹಾಗೆ. ಹಾಗೆ ನೋಡಿದರೆ ಮುಖ್ಯಮಂತ್ರಿಗಿಂತ ನೀವೇ ಪವರ್‌ಫುಲ್ ಎಂದು ಜೆಡಿಎಸ್‌ನ ಜಿ.ಟಿ.ದೇವೇಗೌಡ ಅವರು ಸಚಿವ ಬೈರತಿ ಸುರೇಶ್ ಅವರ ಕಾಲೆಳೆದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಬೈರತಿ ಸುರೇಶ್ ಉತ್ತರ ನೀಡುವ ಸಂದರ್ಭದಲ್ಲಿ ದೇವೇಗೌಡ ಈ ಮಾತುಗಳನ್ನು ಹೇಳಿದರು. ಮೈಸೂರಿನ ಕುಡಿಯುವ ನೀರು ಮತ್ತು ಒಳಚರಂಡಿ ಸಮಸ್ಯೆಯ ಅರಿವು ಮುಖ್ಯಮಂತ್ರಿ ಅವರಿಗಿದೆ. ನಗರಾಭಿವೃದ್ಧಿ ಸಚಿವರು ಹೇಳಿದರೆ ಮುಖ್ಯಮಂತ್ರಿ ಕೇಳಿಯೇ ಕೇಳುತ್ತಾರೆ ಎಂದು ಕಿಚಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸುರೇಶ್, 'ಹೀಗೆ ಹೇಳಿ ಹೇಳಿ ಇರೋ ಮಂತ್ರಿ ಸ್ಥಾನವನ್ನು ಕಳೆದು ಬಿಡ್ತೀರಿ ಎಂದರು.

ಚಾಮುಂಡೇಶ್ವರಿ ಕ್ಷೇತ್ರಕ್ಕೆ ಆದ್ಯತೆ

ಚಾಮುಂಡೇಶ್ವರಿ ಕ್ಷೇತ್ರದ ನಾಗರಿಕರ ಸಮಸ್ಯೆಗಳನ್ನು ಆಲಿಸಿದ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಕುಡಿಯುವ ನೀರು, ಯುಜಿಡಿ ಇನ್ನಿತರ ಮೂಲ ಸೌಕರ್ಯಕ್ಕಾಗಿ 1500 ಕೋಟಿ ಅನುದಾನಕ್ಕಾಗಿ ಮನವಿ ಮಾಡಲಾಗಿತ್ತು, ಮುಖ್ಯಮಂತ್ರಿಗಳು ಈ ಬಾರಿ ಬಜೆಟ್‌ನಲ್ಲಿ 800 ಕೋಟಿ ವಿಶೇಷ ಅನುದಾನ ನೀಡಿದ್ದಾರೆ. ಆದ್ಯತೆಯಾಗಿ ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದ ಯುಜಿಡಿ ಸಮಸ್ಯೆ ಬಗೆಹರಿಸಲು ಕ್ರಮವಹಿಸಲಾಗುವುದು ಎಂದು ಭರವಸೆ ನೀಡಿದರು.

ವಿದ್ಯಾರ್ಥಿಗಳು ಪಠ್ಯ ಮಾತ್ರವಲ್ಲ ಪಠ್ಯೇತರ ಚಟುವಟಿಕೆಯಲ್ಲೂ ಪಾಲ್ಗೊಳ್ಳಬೇಕು

ಅರಸು ವಂಶಸ್ಥ ಹರೀಶ್ ಕಾಂತರಾಜ್ ಅರಸ್ ಸಲಹೆ



ಗಾಯಕಿ ಅರ್ಪಿತ ವೇಣು ರಾಜ್ಯಮಟ್ಟದ ಅಂತರ ಕಾಲೇಜು ಸಂಗೀತ ಸ್ಪರ್ಧೆ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಮೈಸೂರು, ಮಾ.13– ವಿದ್ಯಾರ್ಥಿಗಳು ಕೇವಲ ಪಠ್ಯಕ್ಕಷ್ಟೇ ಸೀಮಿತವಾಗದೆ ಪಠ್ಯೇತರ ಚಟುವಟಿಕೆಗಳಲ್ಲೂ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು ಎಂದು ಅರಸು ವಂಶಸ್ಥರಾದ ಹರೀಶ್ ಕಾಂತರಾಜ್ ಅರಸ್ ತಿಳಿಸಿದರು.

ನಗರದ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಎಂ. ಜಯಲಕ್ಷಮ್ಮಣ್ಣಿ ಸ್ಮರಣಾರ್ಥ ರಾಜ್ಯಮಟ್ಟದ ಅಂತರ ಕಾಲೇಜು ಸಂಗೀತ ಸ್ಪರ್ಧೆ ಮತ್ತು ಸಣ್ಣೇಗೌಡ ಸ್ಮರಣಾರ್ಥ ಜಿಲ್ಲಾ ಮಟ್ಟದ ಕನ್ನಡ ಚರ್ಚಾ ಸ್ಪರ್ಧೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಹೊರ ಹಾಕಲು ಕಾಲೇಜು ಮಟ್ಟದಲ್ಲಿ ಇಂತಹದೊಂದು ಕಾರ್ಯಕ್ರಮ ನಡೆಯಬೇಕು. ಉತ್ತಮ ವೇದಿಕೆಗಳು ಮಕ್ಕಳಲ್ಲಿನ ಅಸಾಧಾರಣ ಪ್ರತಿಭೆಯನ್ನು ಹೊರ ಹಾಕುವ ಕೆಲಸ ಮಾಡುತ್ತದೆ ಎಂದರು.

ಅಂತರರಾಷ್ಟ್ರೀಯ ಗಾಯಕಿ ಅರ್ಪಿತ ವೇಣು ಮಾತನಾಡಿ, ಕಾಲೇಜು ಹಂತದಲ್ಲಿ ಸ್ಪರ್ಧಿಸುವ ಒಂದೊಂದು ಸ್ಪರ್ಧೆಗಳೇ ನಮ್ಮ ಸಾಧನೆಯ ಮೆಟ್ಟಿಲುಗಳು ಎಂದು ವಿದ್ಯಾರ್ಥಿಗಳಿಗೆ ಪ್ರೇರಣಾ ನುಡಿಗಳನ್ನಾಡಿದರು.

ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ರಾಜ್ಯದ 23 ಕಾಲೇಜುಗಳಿಂದ ಸುಮಾರು 70ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾಲೇಜಿನ ಪ್ರಾಂಶುಪಾಲೆ ಪ್ರೊ.ಅನಿತಾ ಮಾತನಾಡಿದರು. ಶಿವರಾಂಪೇಟೆ ಎಸ್‌ಬಿಐ ಶಾಖೆಯ ವ್ಯವಸ್ಥಾಪಕ ಸಿ.ಆರ್.ಹೇಮಂತ್ ಕುಮಾರ್, ವಿದುಷಿ ಕೆ.ಎನ್.ಶಾರದಾಂಬ, ಚಲನಚಿತ್ರ ನಟ ಹಾಗೂ ನಿರ್ದೇಶಕ ಆನಿಶ್, ಕಾಲೇಜಿನ ಸಾಂಸ್ಕೃತಿಕ ವೇದಿಕೆಯ ಕಾರ್ಯದರ್ಶಿ ಪ್ರೊ.ಭಾಸ್ಕರ್.ಕೆ.ಎಸ್., ಖಜಾಂಚಿ ಡಾ.ಟಿ.ನಾಗವೇಣಿ, ಪ್ರೊ.ರಾಘವೇಂದ್ರ ಕರ್ಜೆ, ಡಾ.ನಂಜುಂಡಯ್ಯ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಪ್ರತಿಯೊಬ್ಬರ ಬದುಕಲ್ಲಿ ಮೌಲ್ಯ, ಸಿದ್ಧಾಂತ ಅನಿವಾರ್ಯ

ತತ್ವಶಾಸ್ತ್ರ ಪ್ರಾಧ್ಯಾಪಕ ಡಾ.ಡೇನಿಯಲ್ ಅಭಿಮತ



'ಉನ್ನತ ಶಿಕ್ಷಣದಲ್ಲಿ ನೀತಿಶಾಸ್ತ್ರ' ವಿಷಯ ಕುರಿತು ಮೈಸೂರು ವಿವಿ ತತ್ವಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಎಂ.ಡೇನಿಯಲ್ ಮಾತನಾಡುತ್ತಿರುವುದು.

ಮೈಸೂರು, ಮಾ.13(ಎಸ್‌ಪಿಎನ್)– ಪ್ರತಿಯೊಬ್ಬರ ಜೀವನದಲ್ಲಿ ಮೌಲ್ಯ, ಸಿದ್ಧಾಂತಗಳನ್ನು ಅಳವಡಿಸಿಕೊಂಡು ಬದುಕಬೇಕು. ಮೌಲ್ಯ ಮತ್ತು ಸಿದ್ಧಾಂತ ಎಂಬುದು ಓರ್ವ ವ್ಯಕ್ತಿಯ ಬದುಕಿನ ಕ್ರಮ ಮತ್ತು ನಡವಳಿಕೆಯ ಪ್ರತಿರೂಪ ಎಂದು ಮೈಸೂರು ವಿಶ್ವವಿದ್ಯಾನಿಲಯ ತತ್ವಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಎಂ. ಡೇನಿಯಲ್ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಮಾನಸಗಂಗೋತ್ರಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದಲ್ಲಿ ಮುಲೀಸಾ (ಎಂಯುಎಲ್ ಐಎಸ್‌ಎಸ್‌ಎ) ವತಿಯಿಂದ ಏರ್ಪಡಿಸಿದ್ದ ಸರಣಿ ಉಪನ್ಯಾಸ ಕಾರ್ಯಕ್ರಮದಲ್ಲಿ 'ಉನ್ನತ ಶಿಕ್ಷಣದಲ್ಲಿ ನೀತಿಶಾಸ್ತ್ರ' ವಿಷಯ ಕುರಿತು ಮಾತನಾಡಿದರು.

ಯಾವ ವಿದ್ಯಾರ್ಥಿ ಮೌಲ್ಯಗಳಿಲ್ಲದೆ, ಸಿದ್ಧಾಂತವಿಲ್ಲದೆ ಜೀವನ ರೂಪಿಸಿಕೊಳ್ಳುತ್ತಾನೋ ಅಂತಹವರಲ್ಲಿ ತನ್ನಲ್ಲಿನ ಸರಿ–ತಪ್ಪು ವಿಷಯಗಳ ವಿಮರ್ಶಿಸುವ ಗುಣ ಬೆಳೆಯುವುದಿಲ್ಲ. ಹಾಗಾಗಿ ಉನ್ನತ ಶಿಕ್ಷಣದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಮೌಲ್ಯ ಮತ್ತು ಸಿದ್ಧಾಂತಗಳನ್ನು ಅಳವಡಿಸಿಕೊಂಡು ಮುನ್ನಡೆಯುವಂತೆ ಕಿವಿಮಾತು ಹೇಳಿದರು.

ನಾವು ಹೇಗೆ ಬದುಕು ಕಟ್ಟಿಕೊಳ್ಳುತ್ತೇವೆಯೋ ಅದರ ಮೇಲೆ ಮೌಲ್ಯಗಳನ್ನು ಕಂಡುಕೊಳ್ಳಲು ಸಾಧ್ಯ. ಈ ನಿಟ್ಟಿನಲ್ಲಿ ಶಿಕ್ಷಣವು ವಿದ್ಯಾರ್ಥಿಗಳನ್ನು ಪ್ರೇರೆಪಿಸಬೇಕು ಹಾಗೂ ಅದಕ್ಕೆ ಕಟ್ಟಿಬದ್ಧವಾಗಿ ನಡೆದುಕೊಳ್ಳಬೇಕು. ಇಂತಹ ನಡವಳಿಕೆಯಿಂದ ಮಾತ್ರ ಉತ್ತಮ ಸಮಾಜ, ಸದೃಢ ದೇಶ ನಿರ್ಮಾಣ ಸಾಧ್ಯ ಎಂದರು.

ಸಭೆಯಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ.ಎಚ್.ಎಸ್ ಹರಿನಾರಾಯಣ, ಸಲಹೆಗಾರ ಡಾ.ಎಂ. ಸುನೀಲ್ ಕುಮಾರ್, ಮುಲಿಸಾ ಕಾರ್ಯದರ್ಶಿ ಆರ್.ರಾಕೇಶ್ ಮತ್ತಿತರರಿದ್ದರು.

ವಿಶೇಷ ಚೇತನ ಮಕ್ಕಳು ಸ್ವಾವಲಂಬಿ ಜೀವನ ಕಟ್ಟಿಕೊಳ್ಳಿ

ಸೈರನ್ ಇಂಡಿಯಾ ಸಂಸ್ಥೆ ಎಂಡಿ ಜುನಿಚಿ ಮುನೆಜಾವಾ ಕಿವಿಮಾತು

ಮೈಸೂರು, ಮಾ.13(ವಿವಿಹೆಚ್)– ವಿಶೇಷ ಚೇತನ ಮಕ್ಕಳು ಯಾವುದೇ ಅಡೆತಡೆ ಬಂದರು ಎದೆ ಗುಂದದೆ ಶಿಕ್ಷಣ ಪಡೆದು ಸ್ವಾವಲಂಬಿ ಜೀವನ ಕಟ್ಟಿಕೊಳ್ಳಬೇಕು ಎಂದು ಸೈರನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಜುನಿಚಿ ಮುನೆಜಾವಾ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸ ಗಂಗೋತ್ರಿಯ ಇಎಂಆರ್‌ಸಿ ಸಭಾಂಗಣಲ್ಲಿ ಸಮರ್ಥನಂ ಅಂಗವಿಕಲರ ಸಂಸ್ಥೆ ಮತ್ತು ಸೈರನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಹಯೋಗದೊಂದಿಗೆ ಶುಕ್ರವಾರ ಆಯೋಜಿಸಿದ್ದ ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಸಾಧನ ಸಲಕರಣೆ ಮತ್ತು ಶೈಕ್ಷಣಿಕ ಕಿಟ್ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣವೂ ಪ್ರತಿಯೊಬ್ಬರ ಜೀವನವನ್ನು ಬದಲಾಯಿಸುತ್ತದೆ ಎಂದು ಆಳವಾಗಿ ನಂಬಿರುವವರು ನಾವು. ಸಮರ್ಥನಂ ವಿಶೇಷ ಮಕ್ಕಳ ಶಿಕ್ಷಣ ಮತ್ತು ಉತ್ತಮ ಜೀವನಕ್ಕಾಗಿ ಸಹಾಯ ಮಾಡುತ್ತಿದ್ದು ಸಾವಿರಾರು ಜನರ ಜೀವನಕ್ಕೆ ದಾರಿ ಮಾಡಿಕೊಟ್ಟಿದೆ ಎಂದರು.

ವಿಶೇಷ ಚೇತನ ಮಕ್ಕಳ ಕನಸುಗಳನ್ನು ನನಸು ಮಾಡುವ ನಿಟ್ಟಿನಲ್ಲಿ ನಮ್ಮ ಸಂಸ್ಥೆಯಿಂದ ಕೊಡಲಾಗುವ ಸಿಎಸ್ ಆರ್ ಫಂಡ್ ಅನ್ನು ಕೇವಲ ಒಂದು ವರ್ಷಕ್ಕೆ ಸೀಮಿತಗೊಳಿಸದೇ ಪ್ರತಿ ವರ್ಷವೂ ಮುಂದುವರೆಸಲಾಗುವುದು.



ಸೈರನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಜುನಿಚಿ ಮುನೆಜಾವಾ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಆ ಮೂಲಕ ಶೈಕ್ಷಣಿಕವಾಗಿ ಸಮರ್ಥನಂ ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಲಾಗುವುದು ಎಂದು ಭರವಸೆ ನೀಡಿದರು.

ಸಮರ್ಥನಂ ಅಂಗವಿಕಲರ ಸಂಸ್ಥೆ ಕಾರ್ಯನಿರ್ವಾಹಕ ಅಧಿಕಾರಿ ಶಿವರಾಮು ದೇಶಪಾಂಡೆ ಮಾತನಾಡಿ, ಮೈಸೂರು ಜಿಲ್ಲೆಯಲ್ಲಿ 2011ರ ಗಣತಿ ಪ್ರಕಾರ 16000 ಮಂದಿ ವಿಶೇಷ ಚೇತನರಿದ್ದಾರೆ. ಹಾಗೆಯೇ 2016ರಿಂದ ಈಚೆಗೆ ಅಂಗವಿಕಲತೆಗೆ ಸಂಬಂಧಿಸಿದಂತೆ 21 ಬಗೆಗಳನ್ನು ಗುರುತಿಸಲಾಗಿದ್ದು, ಅದರಂತೆ ಜಿಲ್ಲೆಯಾದ್ಯಂತ ಶೇ.6 ರಿಂದ ಶೇ.8 ರಷ್ಟು ಮಂದಿ ವಿಶೇಷ ಚೇತನರನ್ನು ಗುರುತಿಸಬಹುದಾಗಿದೆ ಎಂದರು.

ಈ ವೇಳೆ ಐಡಿ ಶಾಲಾ ಶೈಕ್ಷಣಿಕ ಕಿಟ್ 43, ಉನ್ನತ ಶೈಕ್ಷಣಿಕ ಕಿಟ್ 29, ವಿದ್ಯುತ್ ವೀಲ್‌ಚೇರ್‌ಗಳು 2, 100 ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವಿದ್ಯಾರ್ಥಿವೇತನ ಮತ್ತು 7 ವೈಸ್ ರೆಕಾರ್ಡಿಂಗ್ ಯಂತ್ರಗಳನ್ನು ಅರ್ಹ ಫಲಾನುಭವಿಗಳಿಗೆ ನೀಡಲಾಯಿತು.

ಮಾನವ ಸಂಪನ್ಮೂಲ ವಿಭಾಗದ ಹಿರಿಯ ವ್ಯವಸ್ಥಾಪಕ ಪದ್ಮನಾಭ, ಸೈರನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಕಾರ್ಯದರ್ಶಿ ಸುರಭಿ ಶರ್ಮಾ, ಸಮರ್ಥನಂ ಅಂಗವಿಕಲರ ಸಂಸ್ಥೆ ಮೈಸೂರು ವಿಭಾಗದ ಮುಖ್ಯಸ್ಥ ಶಿವರಾಜು, ಸಹಾಯಕ ಜನರಲ್ ಮ್ಯಾನೇಜರ್ ಸಂತೋಷ್, ಜನರಲ್ ಮ್ಯಾನೇಜರ್ ಸುನಾಗಾ ಉಪಸ್ಥಿತರಿದ್ದರು.

ಒಳ ಮೀಸಲಾತಿ ಅನ್ವಯವೇ ನೇಮಕಾತಿ ಮಾಡುವಂತೆ ಮಾದಿಗ ಸಮಾಜಗಳ ಒಕ್ಕೂಟ ಪಟ್ಟು

ನ್ಯಾಯ ಸಿಗದಿದ್ದರೆ ತೀವ್ರ ಹೋರಾಟ; ಹಿರಿಯ ವಕೀಲ ಅರುಣ್ ಕುಮಾರ್ ಎಚ್ಚರಿಕೆ

- ಮೀಸಲಾತಿ ಹೆಚ್ಚಳ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಪಿಐಎಲ್
- ಮಧ್ಯಂತರ ಆದೇಶ ನೀಡಿರುವ ನ್ಯಾಯಾಲಯ
- ಕೋರ್ಟ್, ಸರ್ಕಾರದ ನಿರ್ಧಾರ ತಿರುಚುತ್ತಿದ್ದಾರೆಂದು ಆರೋಪ
- ಮಾರ್ಚ್ 27ರ ಸಚಿವ ಸಂಪುಟ ಸಭೆಯಲ್ಲಿ ಅಂತಿಮ ತೀರ್ಮಾನ

ಬೆಂಗಳೂರು, ಮಾ.13(ಬಿಎಲ್‌ಯು)– ಸುಪ್ರೀಂಕೋರ್ಟ್ ಆದೇಶ ಹಾಗೂ ರಾಜ್ಯ ಸರ್ಕಾರ ಕೈಗೊಂಡಿರುವ ತೀರ್ಮಾನದಂತೆ ನೇಮಕಾತಿಯಲ್ಲಿ ಒಳ ಮೀಸಲಾತಿ ಅಳವಡಿಸಬೇಕು ಎಂದು ಮಾದಿಗ ಸಮಾಜಗಳ ಒಕ್ಕೂಟ ಆಗ್ರಹಿಸಿದೆ.

ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆದ ಒಕ್ಕೂಟದ ಪ್ರತಿಭಟನೆ ವೇಳೆ ಮಾತನಾಡಿದ ಹಿರಿಯ ವಕೀಲ ಅರುಣ್ ಕುಮಾರ್, ಒಂದು ವೇಳೆ ಒಳ ಮೀಸಲಾತಿ ಅಳವಡಿಸದೆ ನೇಮಕಾತಿ ಪ್ರಕ್ರಿಯೆ ಕೈಗೊಂಡರೆ ಹೋರಾಟ ಮತ್ತಷ್ಟು ತೀವ್ರವಾಗಿರುತ್ತದೆ ಎಂದು ಎಚ್ಚರಿಸಿದರು.

ಬಿಜೆಪಿ ಸರ್ಕಾರ ಜಾರಿಗೊಳಿಸಿದ್ದ ಮೀಸಲಾತಿ ಹೆಚ್ಚಳ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಮೂರು ಪಿಐಎಲ್‌ಗಳು ಸಲ್ಲಿಕೆಯಾಗಿವೆ. ಪರಿಶಿಷ್ಟ ಜಾತಿಗೆ ಶೇಕಡ 15ರಿಂದ 17ಕ್ಕೆ ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇಕಡ 3ರಿಂದ 7ಕ್ಕೆ ಏರಿಕೆ ಮಾಡಿರುವುದು ಸರಿಯಲ್ಲ. ಈ ಮೂಲಕ ಮೀಸಲಾತಿ ಪ್ರಮಾಣ ಶೇಕಡ 56 ರಷ್ಟಾಗಿದ್ದು, ಇದು ಸುಪ್ರೀಂಕೋರ್ಟ್ ಆದೇಶಕ್ಕೆ ವಿರುದ್ಧವಾಗಿದೆ ಎಂದು ಪಿಐಎಲ್‌ನಲ್ಲಿ ಪ್ರಸ್ತಾಪಿಸಲಾಗಿದೆ ಎಂದರು.

ಈ ಸಂಬಂಧ ವಿಚಾರಣೆ ನಡೆಸಿದ ಹೈಕೋರ್ಟ್, ಮೀಸಲಾತಿ ಹೆಚ್ಚಳಕ್ಕೆ ಮಧ್ಯಂತರ ತಡೆಯಾಜ್ಞೆ ನೀಡಿದೆ. ನ್ಯಾಯಾಲಯ ಈ ಬಗ್ಗೆ ಅಂತಿಮ ತೀರ್ಪು ನೀಡುವವರೆಗೆ ಈ ಮೊದಲಿನಂತೆ ಪರಿಶಿಷ್ಟ ಜಾತಿಗೆ ಶೇಕಡ 15 ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇಕಡ 3 ರಷ್ಟು ಮೀಸಲಾತಿ ಮುಂದುವರೆಸಿ. ಈ ವ್ಯಾಪ್ತಿಯಲ್ಲೆ ನೇಮಕಾತಿ ಮಾಡಬೇಕೆಂದು ಹೈಕೋರ್ಟ್ ನಿರ್ದೇಶನ ನೀಡಿದೆ ಎಂದು ಅರುಣ್ ಕುಮಾರ್ ತಿಳಿಸಿದರು.

ಆದರೆ ರಾಜ್ಯ ಸರ್ಕಾರದ ಡಿಪಿಎಆರ್ ಕಾರ್ಯದರ್ಶಿ ರಂದೀಪ್ ಅವರು ಹೈಕೋರ್ಟ್ ತೀರ್ಪನ್ನು ತಿರುಚುತ್ತಿ ದ್ದಾರೆ. ತಪ್ಪು ಮಾಹಿತಿ ನೀಡಿ ಒಳ ಮೀಸಲಾತಿ ಇಲ್ಲದೆ ನೇಮಕಾತಿ ಮಾಡಿಕೊಳ್ಳಲು ಮುಂದಾಗಿದ್ದಾರೆ ಎಂದು ಆಪಾದಿಸಿದರು.



ಒಳಮೀಸಲಾತಿ ಅಳವಡಿಸಿ ನೇಮಕಾತಿ ಮಾಡಿಕೊಳ್ಳುವಂತೆ ಮಾದಿಗ ಸಮಾಜಗಳ ಒಕ್ಕೂಟ ಬೆಂಗಳೂರಿನ ಫ್ರೀಡಂಪಾರ್ಕ್ ನಲ್ಲಿ ಗುರುವಾರ ನಡೆಸಿದ ಪ್ರತಿಭಟನೆಯಲ್ಲಿ ಹಿರಿಯ ವಕೀಲ ಅರುಣ್ ಕುಮಾರ್ ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಬಗ್ಗೆ ಪರಾಮರ್ಶೆ ಮಾಡಿ ಸುಪ್ರೀಂಕೋರ್ಟ್ ಆದೇಶದಂತೆ ಸರ್ಕಾರ ಈ ಮೊದಲು ಕೈಗೊಂಡ ತೀರ್ಮಾನದಂತೆ, ಅದರಲ್ಲೇ ಒಳ ಮೀಸಲಾತಿಯಡಿ ನೇಮಕಾತಿ ಮಾಡಬೇಕೆಂದು ಆಗ್ರಹಿಸಿದರು.

ಆ ಮೂಲಕ 56,432 ಹುದ್ದೆ ಸೇರಿದಂತೆ 64,185 ಹುದ್ದೆಗಳ ನೇಮಕಾತಿಯಲ್ಲಿ ಒಳ ಮೀಸಲಾತಿ ಅಳವಡಿಸಿಕೊಳ್ಳಬೇಕೆಂದು ಅರುಣ್ ಕುಮಾರ್ ಆಗ್ರಹಿಸಿದರು.

ಮಾದಿಗ ಸಮಾಜಗಳ ಒಕ್ಕೂಟ ನಡೆಸುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಸಚಿವರಾದ ಈಶ್ವರ ಖಂಡ್ರೆ, ಕೆ.ಹೆಚ್.ಮುನಿಯಪ್ಪ, ದಿನೇಶ್ ಗಂಡೂರಾವ್ ಹಾಗೂ ಸತೀಶ್ ಜಾರಕಿಹೊಳಿ ಭೇಟಿ ನೀಡಿ, ಮಾರ್ಚ್ 27 ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಸಮಗ್ರವಾಗಿ ಚರ್ಚಿಸಿ ಅಂತಿಮ ತೀರ್ಮಾನ ಮಾಡಲಾಗುವುದು ಎಂದು ಭರವಸೆ ನೀಡಿದರು ಎಂದು ವಕೀಲ ಅರುಣ್ ಕುಮಾರ್ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಒಳ ಮೀಸಲಾತಿ ಅಳವಡಿಸಿ ನೇಮಕಾತಿ ಮಾಡಲಾಗುವುದು. ನಿಮಗೆ ಅನ್ಯಾಯ ಆಗಲು ಬಿಡುವುದಿಲ್ಲ. ನ್ಯಾಯಾಲಯ ನೀಡಿರುವ ತೀರ್ಪಿನ ಅನ್ವಯ ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದು ಸಚಿವರು ಭರವಸೆ ನೀಡಿದರು ಎಂದರು.

ಈ ಹಿನ್ನೆಲೆಯಲ್ಲಿ ಒಕ್ಕೂಟ ನಡೆಸುತ್ತಿದ್ದ ಪ್ರತಿಭಟನೆಯನ್ನು ವಾಪಾಸ್ಸು ಪಡೆದಿದೆ. ಒಂದು ವೇಳೆ ನಮಗೆ ನ್ಯಾಯ ಸಿಗದಿದ್ದರೆ ಮತ್ತೆ ತೀವ್ರ ರೀತಿಯ ಹೋರಾಟ ರೂಪಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದೇವೆ ಎಂದು ಅರುಣ್ ಕುಮಾರ್ ತಿಳಿಸಿದರು.

ಇಂದು ವಿ.ಸಿ. ಫಾರಂನಲ್ಲಿ ಬಹುಪಯೋಗಿ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ



ಶನಿವಾರ ನಡೆಯುವ ಕ್ರೀಡಾಂಗಣ ಅಭಿವೃದ್ಧಿ ಕಾರ್ಯಕ್ರಮಕ್ಕೆ ಸಿದ್ಧಗೊಂಡಿರುವ ಬೃಹತ್ ವೇದಿಕೆ.

'ಖೇಲೋ ಇಂಡಿಯಾ ವೈಬ್ರೆಂಟ್ ಮಂಡ್ಯ' ಹೆಸರಿನಡಿ 14 ಕೋಟಿ ವೆಚ್ಚದಲ್ಲಿ ಕ್ರೀಡಾಂಗಣ ನಿರ್ಮಾಣ , ಹೆಚ್ಡಿಕೆ, ಮನ್ಸುಖ್ ಮಾಂಡವೀಯ ಉಪಸ್ಥಿತಿ, ಒಂದು ಲಕ್ಷ ಜನ ಭಾಗಿ ನಿರೀಕ್ಷೆ



ಗ್ರಾಮೀಣ ಮಕ್ಕಳಿಗೆ ಕ್ರೀಡೆಯಲ್ಲಿ ಪ್ರೋತ್ಸಾಹ ನೀಡಲು ಮುಂದಾಗಿದ್ದೇವೆ. ಅಲ್ಲದೆ, ಈ ಜಾಗದಲ್ಲಿ ಇನ್ನೂ ಹೆಚ್ಚಿನ ಕ್ರೀಡಾ ಸೌಲಭ್ಯ ಕಲ್ಪಿಸಲು ಮತ್ತಷ್ಟು ಜಾಗ ಬೇಕಿದೆ. ರಾಜ್ಯ ಸರ್ಕಾರ ಜಾಗ ಕೊಡುತ್ತದೆ ಎನ್ನುವ ನಿರೀಕ್ಷೆ ಇದೆ. ಕ್ರೀಡಾಂಗಣಕ್ಕೆ ಮಂಡ್ಯ ನಗರದಲ್ಲಿಯೇ ಸ್ಥಳ ಕೊಡಿ ಎಂದು ಮೊದಲು ನಾನು ಸರಕಾರವನ್ನು ಕೋರಿದ್ದೆ. ಆದರೆ, ನಗರದಲ್ಲಿ ಜಾಗ ಇಲ್ಲದ ಕಾರಣಕ್ಕೆ ವಿ.ಸಿ.ಫಾರಂನಲ್ಲಿ ಸ್ಥಳಾವಕಾಶ ನೀಡಿದ್ದಾರೆ. ಐದು ಎಕರೆ ಪ್ರದೇಶ ಬೇಕಾಗಿದೆ. ಮುಂದಿನ ದಿನಗಳಲ್ಲಿ ಕ್ರೀಡಾ ಸೌಲಭ್ಯಗಳನ್ನು ಐದು ಎಕರೆಗೂ ವಿಸ್ತರಣೆ ಮಾಡುತ್ತೇವೆ. ಇದರಲ್ಲಿ ಯಾವುದೇ ರಾಜಕೀಯ ಇಲ್ಲ. ಯೋಜನೆ ಎಲ್ಲೇ ಬಂದರೂ ಅದು ಮಂಡ್ಯ ಜಿಲ್ಲೆಯಲ್ಲೇ ಇರುತ್ತದೆ – ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ



ವಿರೋಧಿಗಳು ಮಂಡ್ಯ ಜಿಲ್ಲೆಗೆ ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿ ಏನು ಕೊಡುಗೆ ಕೊಟ್ಟಿದ್ದಾರೆಂದು ಪ್ರಶ್ನಿಸುತ್ತಿದ್ದರು. ಗ್ರಾಮೀಣ ಮಕ್ಕಳ ಭವಿಷ್ಯ ಕಟ್ಟಲು ಈ ಸುಸಜ್ಜಿತ ಕ್ರೀಡಾಂಗಣವನ್ನು ಕುಮಾರಸ್ವಾಮಿ ಅವರು ನಿರ್ಮಿಸುತ್ತಿದ್ದು, ಇದಕ್ಕಿಂತ ಕೊಡುಗೆ ಬೇಕೇ? ಇನ್ನು ಹಲವು ಯೋಜನೆಗಳನ್ನು ಅವರು ತರಬೇಕೆಂಬ ಉದ್ದೇಶವನ್ನು ಹೊಂದಿದ್ದಾರೆ. ರಾಜ್ಯ ಸರ್ಕಾರ ಅದಕ್ಕೆ ಪೂರಕವಾಗಿ ಸ್ಪಂದಿಸಿದರೆ, ಕೈಗಾರಿಕಾ ಕಾರ್ಖಾನೆ ಸೇರಿದಂತೆ ಮತ್ತಷ್ಟು ಯೋಜನೆಗಳು ಮಂಡ್ಯ ಜಿಲ್ಲೆಗೆ ಸಿಗುವುದು ಕಟ್ಟಿಟ್ಟ ಬುತ್ತಿ.
– ಸಿ.ಎಸ್.ಪುಟ್ಟರಾಜು, ಮಾಜಿ ಸಚಿವ

ಮಂಡ್ಯ, ಮಾ.13(ಮೋಹನ್ ರಾಜ್)– ಖೇಲೋ ಇಂಡಿಯಾ ವೈಬ್ರೆಂಟ್ ಮಂಡ್ಯ ಎಂಬ ಹೆಸರಿನಲ್ಲಿ ಮಂಡ್ಯ ತಾಲೂಕಿನ ವಿ.ಸಿ.ಫಾರಂನಲ್ಲಿ 14 ಕೋಟಿ ರೂ. ವೆಚ್ಚದಲ್ಲಿ ಸುಸಜ್ಜಿತ ಬಹುಪಯೋಗಿ ನೂತನ ಕ್ರೀಡಾಂಗಣಕ್ಕೆ ಕೇಂದ್ರದ ಯುವ ಜನ ವ್ಯವಹಾರ ಮತ್ತು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಶನಿವಾರ ಮಧ್ಯಾಹ್ನ 11 ಗಂಟೆಗೆ ಚಾಲನೆ ನೀಡಲಿದ್ದಾರೆ.

ಮಂಡ್ಯ ಸಂಸದರೂ ಆದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಂಡ್ಯ ಜಿಲ್ಲೆಗೆ ತರಬೇಕೆಂದು ಹಮ್ಮಿಕೊಂಡಿರುವ ಹಲವು ಯೋಜನೆಗಳ ಪೈಕಿ ಮಹತ್ವದ ಯೋಜನೆ ಇದಾಗಿದ್ದು, ಮಂಡ್ಯ ನಗರದಿಂದ 7 ಕಿಮೀ ದೂರದಲ್ಲಿರುವ ವಿ.ಸಿ.ಫಾರಂನಲ್ಲಿ ಕೇಂದ್ರದ ಕ್ರೀಡಾ ಇಲಾಖೆಯಿಂದ ಬಿಡುಗಡೆಯಾಗುವ 14 ಕೋಟಿ ರೂ. ವೆಚ್ಚದಲ್ಲಿ ಈ ಕ್ರೀಡಾಂಗಣ ನಿರ್ಮಾಣವಾಗಲಿದ್ದು, ಕ್ರೀಡಾಪಟುಗಳಿಗೆ ಅದರಲ್ಲೂ ಗ್ರಾಮೀಣ ಕ್ರೀಡಾಪಟುಗಳಿಗೆ ಈ ಕ್ರೀಡಾಂಗಣ ಉಪಯೋಗವಾಗಲಿದೆ.

ಮಂಡ್ಯ ನಗರದಲ್ಲೇ ಈ ಕ್ರೀಡಾಂಗಣವನ್ನು ನಿರ್ಮಿಸಬೇಕೆಂದು ಕುಮಾರಸ್ವಾಮಿ ಅವರು ಕನಸು ಹೊಂದಿದ್ದರೂ ಸೂಕ್ತ ಜಾಗ ಸಿಗದ ಪರಿಣಾಮ ಕ್ರೀಡಾಂಗಣವು ಮೇಲುಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಂಡ್ಯ ತಾಲೂಕಿನ ವಿ.ಸಿ.ಫಾರಂನ ಕೃಷಿ ವಿಶ್ವವಿದ್ಯಾನಿಲಯ ಆವರಣದಲ್ಲಿ ನಿರ್ಮಾಣವಾಗುತ್ತಿದೆ.

ವಿ.ಸಿ.ಫಾರಂನಲ್ಲಿ ಇದೀಗ 15 ಎಕರೆ ಜಾಗದಲ್ಲಿ ಕ್ರೀಡಾಂಗಣ ನಿರ್ಮಾಣವಾಗಲಿದ್ದು, ಭವಿಷ್ಯದಲ್ಲಿ ಹಂತ ಹಂತವಾಗಿ ಜಾಗ ಸಿಕ್ಕರೆ ಕ್ರೀಡಾಂಗಣವನ್ನು ಮತ್ತಷ್ಟು ಅಭಿವೃದ್ಧಿ ಹಾಗೂ ಆಧುನೀಕರಣ ಮಾಡಬೇಕೆಂಬುದು ಕೇಂದ್ರ ಸಚಿವರ ಇರಾದೆಯಾಗಿದೆ. ನಾಳೆ ಕೇವಲ ಕ್ರೀಡಾಂಗಣ ಮಾತ್ರವಲ್ಲದೇ 388 ವಿಕಲಚೇತನ ಬಂಧುಗಳಿಗೆ ಎಲೆಕ್ಟ್ರಿಕ್ ವಾಹನಗಳ ನೀಡಿಕೆ, ಸರಕಾರಿ ಶಾಲೆ, ಕಾಲೇಜುಗಳಲ್ಲಿ ಕಂಪ್ಯೂಟರ್ ಮತ್ತು ಲ್ಯಾಪ್‌ಟಾಪ್ ವಿತರಣೆ, ಸರಕಾರಿ ಆಸ್ಪತ್ರೆಗೆ ಆಂಬುಲೆನ್ಸ್‌ಗಳನ್ನು ಕೊಡಲಾಗುವ ಕಾರ್ಯಕ್ರಮ ಸಹ ಇದೆ.


ಈಗಾಗಲೇ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಹಲವು ಕಡೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ಸಭೆ ನಡೆದರೆ, ಮಂಡ್ಯ ತಾಲ್ಲೂಕಿನಿಂದಲೂ ಸಾವಿರಾರು ಜನರನ್ನು ಸೇರಿಸಬೇಕೆಂಬ ನಿಟ್ಟಿನಲ್ಲಿ ಕ್ಷೇತ್ರದ ಮುಖಂಡ ಬಿ.ಆರ್.ರಾಮಚಂದ್ರ ನೇತೃತ್ವದಲ್ಲಿ ಸಭೆ ನಡೆಸಲಾಗಿದೆ. ಕಾರ್ಯಕ್ರಮದ ಯಶಸ್ಸಿನ ಸಂಪೂರ್ಣ ಹೊಣೆಯನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ವಹಿಸಿಕೊಂಡಿದ್ದು, ಈಗಾಗಲೇ ಹಲವು ಬಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕಳೆದ ಶನಿವಾರ ಸ್ವತಃ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವಿ.ಸಿ. ಫಾರಂಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು.

ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ, ಮನ್ಸುಖ್ ಮಾಂಡವೀಯ ಸೇರಿದಂತೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಶಾಸಕ ದರ್ಶನ್ ಪುಟ್ಟಣ್ಣಯ್ಯ ಪಾಲ್ಗೊಳ್ಳಲಿದ್ದು, ಜಿಲ್ಲೆಯ ಎಲ್ಲಾ ಹಾಲಿ, ಮಾಜಿ ಜನಪ್ರತಿನಿಧಿಗಳು, ಅಧಿಕಾರಿ ವರ್ಗ ಉಪಸ್ಥಿತರಿರಲಿದ್ದು, ಕನಿಷ್ಠ ಒಂದು ಲಕ್ಷ ಜನ ಸೇರುವ ನಿರೀಕ್ಷೆ ಇದೆ.

ಹೆಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿ ಎರಡು ವರ್ಷ ಕಳೆಯುತ್ತಿದ್ದರೂ ಜಿಲ್ಲೆಯಲ್ಲಿ ಏನು ತಂದಿದ್ದಾರೆ ಎಂಬ ವಿರೋಧಿಗಳ ಪ್ರಶ್ನೆಗೆ ಈ ಯೋಜನೆ ತಂದು ಬೃಹತ್ ಕಾರ್ಯಕ್ರಮ ಮಾಡಲಾಗುತ್ತಿದೆ ಎಂದು ಜೆಡಿಎಸ್‌ನ ಮೂಲಗಳು ಹೇಳುತ್ತಿವೆ.

ಮೈಶುಗರ್ ಕಾರ್ಖಾನೆಗೆ ಬಾಯ್ಲಿಂಗ್ ಹೌಸ್ ಅಳವಡಿಕೆಗೆ 60 ಕೋಟಿ ಅನುದಾನ

ಮಂಡ್ಯ: ಮೈಶುಗರ್ ಕಾರ್ಖಾನೆಯ ಕಾರ್ಯಕ್ಷಮತೆ ಹೆಚ್ಚಿಸಲು ಬಾಯ್ಲಿಂಗ್ ಹೌಸ್ ಅಳವಡಿಕೆಗೆ ರಾಜ್ಯ ಸರಕಾರದ ಸಚಿವ ಸಂಪುಟವು 60 ಕೋಟಿ ರೂ. ಅನುದಾನಕ್ಕೆ ಅನುಮೋದನೆ ನೀಡಿದೆ ಎಂದು ಮೈಶುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಕಾಂಗ್ರೆಸ್ ಸರಕಾರವು ಮೈಶುಗರ್ ಕಾರ್ಖಾನೆಯ ಉಳಿವಿಗೆ 3 ಬಾರಿ ಆರ್ಥಿಕ ನೆರವು ನೀಡಿದೆ. ಇದೀಗ ಬಾಯ್ಲಿಂಗ್ ಹೌಸ್ ಅಳವಡಿಕೆಗೆ 60 ಕೋಟಿ ರೂ ಸೇರಿ ಒಟ್ಟು 173 ಕೋಟಿ ರೂ. ನೀಡಿ ಕಾರ್ಖಾನೆಯ ಅಭಿವೃದ್ಧಿಗೆ ಅಪಾರ ಶಕ್ತಿ ತುಂಬಿದೆ ಎಂದರು.

ಕಾರ್ಖಾನೆ ನಡೆಸಲಾಗದೆ 2021–22ರಲ್ಲಿ ಖಾಸಗೀಕರಣ ಮಾಡುವ ಆಲೋಚನೆ ಇತ್ತು. ನಮ್ಮ ಸರ್ಕಾರ ಬಂದ 15 ದಿನದಲ್ಲೇ ಕಾರ್ಖಾನೆಯನ್ನು ಪುನರ್ ಆರಂಭಿಸುವ ಭರವಸೆ ನೀಡಿ, ಅದನ್ನು ಈಡೇರಿಸಿದೆ. ಮುಂಬರುವ 2026–27ನೇ ಹಂಗಾಮಿನಲ್ಲಿ ಸಕ್ಕರೆ ಉತ್ಪಾದನಾ ಪ್ರಕ್ರಿಯೆ ಮತ್ತಷ್ಟು ಚುರುಕುಗೊಳ್ಳಲಿದೆ ಎಂದು ಹೇಳಿದರು.

ಬಾಯ್ಲಿಂಗ್ ಹೌಸ್ ಅಳವಡಿಕೆಯನ್ನು ತ್ವರಿತವಾಗಿ ಪೂರ್ಣಗೊಳಿಸಿ, 2026–27ನೇ ಸಾಲಿನ ಹಂಗಾಮನ್ನು ಅತ್ಯಂತ ಯಶಸ್ವಿಯಾಗಿ ಮತ್ತು ರೈತರಿಗೆ ಯಾವುದೇ ತೊಂದರೆಯಾಗದಂತೆ ನಡೆಸಲಾಗುವುದು. ಈ ಸಾಲಿನ ಏಪ್ರಿಲ್ 2ನೇ ವಾರದಲ್ಲಿ ಅದನ್ನು ಅಳವಡಿಸಲಾಗುವುದು. ಆಗಸ್ಟ್ ಮಾಹೆಯ ಕೊನೆಯೊಳಗೆ ಅಧಿಕೃತವಾಗಿ ಕಾರ್ಯರೂಪಕ್ಕೆ ತರಲಾಗುವುದು ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆದ ಸಭೆಯಂತೆ ರೈತರ ಹಿತರಕ್ಷಣೆಗಾಗಿ ಪ್ರತಿ ಟನ್ ಕಬ್ಬಿಗೆ ಸರಕಾರದಿಂದ 50 ಹೆಚ್ಚುವರಿ ಪ್ರೋತ್ಸಾಹಧನ ನೀಡಲಾಗುವುದು. ಮೈಶುಗರ್ ಕಾರ್ಖಾನೆಯಲ್ಲಿ ಇಳುವರಿ ಕಡಿಮೆ ಇರುವ ಕಾರಣ ಸರಕಾರದಿಂದ ಮಾತ್ರ ಪ್ರೋತ್ಸಾಹಧನ ನೀಡಲಾಗುವುದು ಎಂದು ಹೇಳಿದರು.

ಗೋಷ್ಠಿಯಲ್ಲಿ ದೇಶಿಹಳ್ಳಿ ಮೋಹನ್ ಕುಮಾರ್, ನಗರಸಭೆ ಸದಸ್ಯರಾದ ನಯೀಂ, ಶ್ರೀಧರ್, ಚಂದ್ರಶೇಖರ್, ಇದ್ದರು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾಗಿ ಜೆಡಿಎಸ್ ಶಿವಣ್ಣ ಆಯ್ಕೆ

ಪಾಂಡವಪುರ, ಮಾ.13– ಪಾಂಡವಪುರ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್(ಪಿಎಲ್‌ಡಿ)ನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಶಿವಣ್ಣ ಆಯ್ಕೆಯಾದರು.

15 ಮಂದಿ ಸದಸ್ಯರ ಸಂಖ್ಯಾಬಲ ಹೊಂದಿರುವ ಪಿಎಲ್‌ಡಿ ಬ್ಯಾಂಕ್‌ನಲ್ಲಿ ಜೆಡಿಎಸ್ ಬೆಂಬಲಿತರು 8 ಹಾಗೂ ರೈತಸಂಘ–ಕಾಂಗ್ರೆಸ್–6, ಸರಕಾರಿ ನಾಮಿನಿ–1 ಮಂದಿ ಸದಸ್ಯರಿದ್ದಾರೆ. ಬ್ಯಾಂಕ್‌ನ ಅಧ್ಯಕ್ಷರಾಗಿದ್ದ ಚಲುವೇಗೌಡ (ಬಕೋಡಿ) ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಗುರುವಾರ ಚುನಾವಣೆ ನಡೆಯಿತು.

ನಾಮಪತ್ರ ಸಲ್ಲಿಕೆ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಬಯಸಿ ಜೆಡಿಎಸ್ ಬೆಂಬಲಿತ ನಿರ್ದೇಶಕರಾದ ಶಿವಣ್ಣ ಹಾಗೂ ರೈತ ಸಂಘ–ಕಾಂಗ್ರೆಸ್ ಬೆಂಬಲಿತ ನಿರ್ದೇಶಕ ಕೆ.ಆರ್.ಸುರೇಶ್ ನಾಮಪತ್ರ ಸಲ್ಲಿಸಿದರು. ಒಂದು ಸ್ಥಾನಕ್ಕೆ ಎರಡು ನಾಮಪತ್ರಗಳು ಸಲ್ಲಿಕೆಯಾದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಯೂ ಆದ ಬ್ಯಾಂಕ್ ಕಾರ್ಯದರ್ಶಿ ಸಂಪತ್‌ಕುಮಾರ್ ಚುನಾವಣೆ ನಡೆಸಿದರು. ಗುಪ್ತ ಮತದಾನ ಪ್ರಕ್ರಿಯೆ ನಡೆಯಿತು. ಚುನಾವಣೆಯಲ್ಲಿ ಅಂತಿಮವಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಶಿವಣ್ಣ ಅವರಿಗೆ 9 ಮತ ಹಾಗೂ ರೈತಸಂಘ–ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಕೆ.ಆರ್.ಸುರೇಶ್‌ಗೆ 6 ಮತಗಳು ಬಂದವು. ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಶಿವಣ್ಣ 3 ಮತಗಳ ಅಂತರದಿಂದ ಭರ್ಜರಿ ಗೆಲುವು ಸಾಧಿಸುವ ಮೂಲಕ ಬ್ಯಾಂಕ್‌ನ ನೂತನ ಅಧ್ಯಕ್ಷರಾಗಿ ಆಯ್ಕೆಯಾದರು. ಆ ಮೂಲಕ ಸ್ಥಳೀಯ ಶಾಸಕ ದರ್ಶನ್‌ಪುಟ್ಟಣ್ಣಯ್ಯ ಅವರಿಗೆ ಹಿನ್ನಡೆಯಾಯಿತು. ಶಿವಣ್ಣ ಚುನಾವಣೆಯಲ್ಲಿ ಗೆಲುವು ಸಾಧಿಸುತ್ತಿದ್ದಂತೆಯೇ ಹೊರಗಡೆ ಬೆಂಬಲಿತರು ಪಟಾಕಿ ಸಿಡಿಸಿ ಸಿಹಿಹಂಚಿ ಸಂಭ್ರಮಿಸಿದರು.



ಪಾಂಡವಪುರ ಪಿಎಲ್‌ಡಿ ಬ್ಯಾಂಕ್‌ನ ನೂತನ ಅಧ್ಯಕ್ಷರಾಗಿ ಚುನಾವಣೆ ಮೂಲಕ ಆಯ್ಕೆಯಾದ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಶಿವಣ್ಣ ಅವರನ್ನು ಎಲ್ಲಾ ನಿರ್ದೇಶಕರು ಅಭಿನಂಧಿಸಿದರು.

ಬಳಿಕ ಬ್ಯಾಂಕ್‌ನ ನೂತನ ಅಧ್ಯಕ್ಷ ಶಿವಣ್ಣ ಅವರನ್ನು ಎಲ್ಲಾ ನಿರ್ದೇಶಕರು, ಮುಖಂಡರು, ಬೆಂಬಲಿಗರು ಅಭಿನಂಧಿಸಿದರು. ಉಪಾಧ್ಯಕ್ಷೆ ಸುನಂದಮ್ಮ, ನಿರ್ದೇಶಕರಾದ ಎಂ.ಸಿ. ಯಶವಂತ್‌ಕುಮಾರ್, ಎನ್.ಮುರುಳಿ, ಕುಮಾರ್ ಕೆ., ಚಲುವೇಗೌಡ, ನಾಗಶೆಟ್ಟಿ, ನಂಜೇಗೌಡ(ಜಿ.ಡಿ.ವಾಸು), ಬಿ.ನರೇಂದ್ರ ಬಾಬು, ಎಚ್.ಎನ್.ದಯಾನಂದ, ಸಿ.ಎಂ. ಚಂದ್ರಶೇಖರ್, ಎಚ್.ಎಂ.ಆಶಾಲತಾ, ಎಸ್.ಯೋಗಲಕ್ಷ್ಮಿ, ನಾಮಿನಿ ನಿರ್ದೇಶಕ ನಾಗೇಗೌಡ, ಮುಖಂಡ ಕಣಿವೆಯೋಗೇಶ್ ಸೇರಿದಂತೆ ಹಲವರು ಇದ್ದರು.

ಮಾ.28, ಶ್ರೀ ಚಲುವನಾರಾಯಣಸ್ವಾಮಿ ವೈರಮುಡಿ ಕಿರೀಟಧಾರಣೆ ಉತ್ಸವ

ಮೇಲುಕೋಟೆ: ಶ್ರೀಚೆಲುವನಾರಾಯಣ ಸ್ವಾಮಿಯವರ ವಿಶ್ವವಿಖ್ಯಾತ ವೈರಮುಡಿ ಕಿರೀಟಧಾರಣೆ ಮಹೋತ್ಸವ ಮಾ.28ರಂದು ನಡೆಯಲಿದೆ.



ವೈರಮುಡಿ ಉತ್ಸವ ಮುಗಿಯುತ್ತಿದ್ದಂತೆ ಮೈಸೂರು ದೊರೆ ರಾಜ ಒಡೆಯರ್ ಸಮರ್ಪಿಸಿದ ವಜ್ರಖಚಿತ ರಾಜಮುಡಿ ಕಿರೀಟ ಧರಿಸಿ ರಾಜಮುಡಿ ಉತ್ಸವ ನೆರವೇರಿಸಲಾಗುತ್ತದೆ. ಇಡೀ ಭಾರತದ ದೇವಾಲಯಗಳ ಪೈಕಿ ಒಂದೇ ರಾತ್ರಿ ಅಪರೂಪದ ಎರಡು ವಜ್ರದ ಕಿರೀಟಗಳ ಐತಿಹಾಸಿಕ ಉತ್ಸವ ನಡೆಯುತ್ತಿರುವುದು ಚೆಲುವನಾರಾಯಣಸ್ವಾಮಿಯ ವೈರಮುಡಿ ಬ್ರಹ್ಮೋತ್ಸವದ ವಿಶೇಷವಾಗಿದೆ.

ಹತ್ತು ದಿನಗಳ ವೈರಮುಡಿ ಬ್ರಹ್ಮೋತ್ಸವದ ಧಾರ್ಮಿಕ ಕಾರ್ಯಕ್ರಮಗಳು ಮಾ.23ರಿಂದಲೇ ಆರಂಭವಾಗಿ ಏಪ್ರಿಲ್ 4ರವರೆಗೆ ವೈಭವದಿಂದ ನೆರವೇರಲಿದ್ದು ವೈರಮುಡಿ,ರಥೋತ್ಸವ, ಮಹಾಭಿಷೇಕಗಳಂದು ಸರ್ಕಾರಿ ರಜಾ ಇರುವ ಕಾರಣ ಈ ವರ್ಷ ಕಳೆದ ವರ್ಷಕ್ಕಿಂತ ಹೆಚ್ಚಿನ ಭಕ್ತರು ಆಗಮಿಸುವ ನಿರೀಕ್ಷೆಯಿದೆ.ಬ್ರಹ್ಮೋತ್ಸವದ ವೇಳೆ ಇಡೀ ಮೇಲುಕೋಟೆ ದೀಪಾಲಂಕಾರದಿಂದ ಕಂಗೊಳಿಸಲಿದ್ದು ಜಿಲ್ಲಾ ಕೇಂದ್ರ ಮಂಡ್ಯ, ಮೈಸೂರು ಸೇರಿದಂತೆ ವಿವಿಧ ನಗರಗಳಿಂದ ಉತ್ಸವಗಳಿಗೆ ಬಂದು ಹೋಗಲು ಭಕ್ತರಿಗೆ ರಾಜ್ಯ ರಸ್ತೆ ಸಾರಿಗೆ ನಿಗಮ ವಿಶೇಷ ಬಸ್ ಸೌಕರ್ಯ ಕಲ್ಪಿಸಿದೆ.

ವೈರಮುಡಿ ಉತ್ಸವವಲ್ಲದೆ ಜಾತ್ರೆಯಲ್ಲಿ ಪ್ರಮುಖ ಮಹೋತ್ಸವಗಳು ನೆರವೇರಲಿದ್ದು ಮಾ.24ರ ಸಂಜೆ 5ರಿಂದ 10ರವರೆಗೆ ಕಲ್ಯಾಣೋತ್ಸವ, 25ರ ಬೆಳಿಗ್ಗೆ 8ರಿಂದ 10ರವರೆಗೆ ಗರುಡ ಧ್ವಜಾರೋಹಣ, ಮಾ.26ರಂದು ಗುರುವಾರ ಬೆಳಿಗ್ಗೆ 10ಗಂಟೆಯಿಂದ 2ಗಂಟೆಯವರೆಗೆ ಆರಿದ್ರಾ ಮಾಸ ತಿರುನಕ್ಷತ್ರ ವಿಶೇಷವಾಗಿ ರಾಮಾನುಜಾಚಾರ್ಯರಿಗೆ ಅಭಿಷೇಕ ಮಾ.27ರಂದು ಶ್ರೀರಾಮನವಮಿ ಮಧ್ಯಾಹ್ನ 2 ರಿಂದ 9ರವರೆಗೆ ನಾಗವಲ್ಲೀ ಮಹೋತ್ಸವ ನಡೆಯಲಿದೆ.

ಒಂದನೇ ಪುಟದಿಂದ

ರಾಜಕೀಯ ಮಾಡ್ತೇನೆ!

ಹುಂಡಿಗಳು ಬಹುಪ್ರಿಯ: ಹುಂಡಿಗಳು ನನಗೆ ಬಹಳ ಪ್ರಿಯವಾದ ಗ್ರಾಮ. ನನಗೆ ರಾಜಕೀಯ ಜೀವನ ಕೊಟ್ಟಿದ್ದು ಇಲ್ಲಿಂದಲೇ ಎನ್ನುವುದು ನಿಜ. 2006ರ ಚಾಮುಂಡೇಶ್ವರಿ ಕ್ಷೇತ್ರದ ಉಪ ಚುನಾವಣೆಯಲ್ಲಿ ಕೆಂಪೇಗೌಡನಹುಂಡಿ ಗ್ರಾಮದಲ್ಲಿ ಶೇ.100ರಷ್ಟು ಮತ ಚಲಾವಣೆಯಾಗಿತ್ತು. ಗ್ರಾಮದಲ್ಲಿ ಎಷ್ಟು ಮತಗಳಿತ್ತೋ ಆ ಎಲ್ಲಾ ಮತಗಳನ್ನು ನನಗೆ ಕೊಟ್ಟಿದ್ದರು. 1978ರಲ್ಲಿ ತಾಲೂಕು ಬೋರ್ಡ್ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾಗ ಹಲವರು ಸಹಾಯ ಮಾಡಿದ್ದನ್ನು ನಾನು ಮರೆತಿಲ್ಲ ಎಂದರು.

ರಾಜಪ್ಪ ಮೇಷ್ಟ್ರು ನೆನೆಸಿಕೊಂಡ ಸಿಎಂ: ನಾನು ಈ ಹಿಂದೆ ವೀರಮಕ್ಕಳ ಕುಣಿತ ಮಾಡುತ್ತಿದ್ದೆ. ನನ್ನ ಅಪ್ಪ ವೀರಮಕ್ಕಳ ಕುಣಿತಕ್ಕೆ ನನ್ನನ್ನು ಸೇರಿಸಿದ್ದರು. ಇದರಿಂದ ನಾನು ಪ್ರಾಥಮಿಕ ಶಾಲೆಗೆ ಹೋಗಲು ಸಾಧ್ಯವಾಗಿರಲಿಲ್ಲ. ಅಂದು ರಾಜಪ್ಪ ಮೇಷ್ಟ್ರು ನನ್ನನ್ನು ಶಾಲೆಗೆ ಕರೆದೊಯ್ದು ನೇರವಾಗಿ ಐದನೇ ತರಗತಿಗೆ ಸೇರಿಸದಿದ್ದರೆ ನಾನು ಇಂದು ಮುಖ್ಯಮಂತ್ರಿಯಾಗಲು ಆಗುತ್ತಿರಲಿಲ್ಲ. ಶಾಲೆಗೆ ಸೇರಿಸಿದ್ದರಿಂದ ಓದಿ, ವಕೀಲನಾಗಿ ಕೆಲಸ ಮಾಡಿ,



ಇದೀಗ ರಾಜಕೀಯವಾಗಿ ಬೆಳೆದು ಮುಖ್ಯಮಂತ್ರಿಯಾಗಿದ್ದೇನೆ ಎಂದು ಹಳೆಯ ನೆನಪುಗಳನ್ನು ಮೆಲುಕು ಹಾಕಿದರು.

ಮೂಡಲಹುಂಡಿ, ಬಡಗಲಹುಂಡಿ, ಕೆಂಪೇ ಗೌಡನಹುಂಡಿ, ಹೊಸಹುಂಡಿ, ವರಕೋಡು ಗ್ರಾಮದ ಮುಖಂಡರು, ಯಜಮಾನರು, ಭಕ್ತಾದಿಗಳು ಸೇರಿಕೊಂಡು ನಿರ್ಮಾಣ ಮಾಡಿರುವ ದೇವಸ್ಥಾನಕ್ಕೆ ಅಗತ್ಯವಿರುವ ಎಲ್ಲಾ ರೀತಿಯ ಅನುಕೂಲ ಕಲ್ಪಿಸಲಾಗುವುದು ಎಂದು ಇದೇ ವೇಳೆ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ವರಕೋಡು ಹಾಗೂ ಸುತ್ತಮುತ್ತಲ ಜನರು ಸತತ ಆರು ವರ್ಷಗಳ ನಿರಂತರ ಪ್ರಯತ್ನದ ಫಲವಾಗಿ ಈ ದೇವಾಲಯ ಇಂದು ಉದ್ಘಾಟನೆಗೊಂಡಿದೆ. ದೇವಾಲಯದ ಮುಂದಿನ ಕಲ್ಯಾಣಿ ನಿರ್ಮಾಣ, ರಸ್ತೆ, ವಿದ್ಯುತ್, ಒಳಚರಂಡಿ ವ್ಯವಸ್ಥೆ ಸೇರಿದಂತೆ ಎಲ್ಲಾ ರೀತಿಯ ಮೂಲ ಸೌಕರ್ಯಗಳಿಗೆ ಸರ್ಕಾರ ಸಹಕಾರ ನೀಡಿದೆ. ಇದೇ ರೀತಿ ವರುಣ ಕ್ಷೇತ್ರವನ್ನೂ ಮಾದರಿ ರೀತಿ ಅಭಿವೃದ್ಧಿಪಡಿಸಲಾಗಿದೆ. ಮುಂದೆಯೂ ಇದೇ ರೀತಿಯ ಸಹಕಾರ ನೀಡುವುದಾಗಿ ತಿಳಿಸಿದರು. ಕಾರ್ಯಕ್ರಮದ ಸಾನಿಧ್ಯ ವನ್ನು ಕಾಗಿನೆಲೆ ಶಾಖಾಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ವಹಿಸಿದ್ದರು. ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಮುಖಂಡರು ಪಾಲ್ಗೊಂಡಿದ್ದರು.

ಸಿಲಿಂಡರ್ ಅಕ್ರಮ ದಾಸ್ತಾನಿದ್ದರೆ ಕ್ರಿಮಿನಲ್ ಕೇಸ್

ಅಲ್ಲದೆ ಕೆಲವೆಡೆ ಹೆಚ್ಚಿನ ಹಣ ಪಡೆಯುತ್ತಿದ್ದಾರೆ ಎಂಬ ದೂರುಗಳು ಕೇಳಿ ಬರುತ್ತಿದ್ದು, ನಿಗದಿತ ಹಣವನ್ನಷ್ಟೇ ಪಡೆಯಬೇಕು. ಹೆಚ್ಚುವರಿಯಾಗಿ ವಿತರಣೆ ಮಾಡಬಾರದು. ನಗರ ಪ್ರದೇಶದಲ್ಲಿ ಒಮ್ಮೆ ಗ್ಯಾಸ್ ಬುಕಿಂಗ್ ಮಾಡಿದ 25 ದಿನಗಳ ನಂತರ ಹಾಗೂ ಗ್ರಾಮೀಣ ಭಾಗದಲ್ಲಿ 45 ದಿನಗಳ ನಂತರ ಮರು ಬುಕಿಂಗ್ ಅವಕಾಶವಿದ್ದು, ಅದರಂತೆ ಕಾರ್ಯ ನಿರ್ವಹಿಸಬೇಕು ಎಂದು ಸೂಚಿಸಿದರು.

ಸರ್ವರ್ ಸಮಸ್ಯೆಯಾಗುತ್ತಿದೆ: ಗೃಹ ಬಳಕೆ ಗ್ಯಾಸ್ ಸಿಲಿಂಡರ್ ಲಭ್ಯವಿದ್ದರೂ ಜನರು ಆತಂಕದಲ್ಲಿ ತಮ್ಮ ಬಳಿ ಈಗಾಗಲೇ ಭರ್ತಿ ಸಿಲಿಂಡರ್ ಇದ್ದರೂ ಬುಕಿಂಗ್ ಮಾಡುತ್ತಿದ್ದಾರೆ. ಇದರಿಂದ ಒಂದು ಬುಕಿಂಗ್ ಆಗುವ ಸಮಯದಲ್ಲಿ ಒಮ್ಮೆಗೆ ನಾಲ್ಕು ಬುಕಿಂಗ್ ಆಗುತ್ತಿರುವುದರಿಂದ ಸರ್ವರ್ ಸಮಸ್ಯೆ ಎದುರಾಗಿದೆ. ಕೂಡಲೇ ಸರ್ವರ್ ಸಮಸ್ಯೆ ಬಗೆಹರಿಯಬೇಕು. ಇಲ್ಲವೇ ಜನರು ಆತಂಕಕ್ಕೆ ಒಳಗಾಗದೆ ಎಂದಿನಂತೆ ಸಿಲಿಂಡರ್ ಬುಕಿಂಗ್ ಮಾಡಿ ಪಡೆದುಕೊಳ್ಳಬೇಕು. ಸರ್ವರ್ ಸಮಸ್ಯೆ ಕುರಿತು ಹೆಚ್‌ಪಿ, ಇಂಡಿಯನ್ ಮತ್ತು ಭಾರತ್ ಗ್ಯಾಸ್‌ನ ಕೇಂದ್ರ ಕಚೇರಿಗೆ ಪತ್ರ ಬರೆದಿದ್ದೇವೆ ಎಂದು ಏಜೆನ್ಸಿ ಮಾಲೀಕರು ಸಭೆಯಲ್ಲಿ ತಿಳಿಸಿದರು.

> **ಟ್ರಕ್‌ಗಳಿಂದ ಸಪ್ಲೈ ತಡವಾಗುತ್ತಿದೆ...**
> **ಎಲ್‌ಪಿಜಿ ಸಿಲಿಂಡರ್‌ಗಳನ್ನು ಏಜೆನ್ಸಿಗಳಿಗೆ ಸಪ್ಲೈ ಮಾಡುವಲ್ಲಿ ಟ್ರಕ್‌ಗಳಿಂದ ತಡವಾಗುತ್ತಿದೆ. ಲೋಡ್ ಆದ ನಂತರ ನೇರವಾಗಿ ಏಜೆನ್ಸಿಗಳಲ್ಲಿ ಅನ್‌ಲೋಡ್ ಆಗಬೇಕು. ಆದರೆ, ತಡ ಮಾಡಲಾಗುತ್ತಿದೆ. ಇದರಿಂದ ಗ್ಯಾಸ್ ಸಿಲಿಂಡರ್ ದುರ್ಬಳಕೆಯಾಗುವ ಸಾಧ್ಯತೆ ಇದ್ದು ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕು. ಸೂಕ್ತ ಸಮಯದಲ್ಲಿ ಪೂರೈಕೆಯಾದರೆ ಗ್ರಾಹಕರಿಗೂ ನಿಗದಿತ ಸಮಯದಲ್ಲಿ ಸಿಲಿಂಡರ್ ತಲುಪಿಸಲಾಗುವುದು. – ಗ್ಯಾಸ್ ಸಿಲಿಂಡರ್ ಏಜೆನ್ಸಿ ಮಾಲೀಕರು.**

ವಾಣಿಜ್ಯ ಸಿಲಿಂಡರ್ ಪೂರೈಕೆ ಸ್ಥಗಿತ: ವಾಣಿಜ್ಯ ಸಿಲಿಂಡರ್ ಪೂರೈಕೆ ಸಂಪೂರ್ಣವಾಗಿ ನಿಲ್ಲಿಸಲಾಗಿದ್ದು, ಏಜೆನ್ಸಿಗಳಿಗೂ ಪೂರೈಕೆ ಆಗುತ್ತಿಲ್ಲ. ಹಾಗೆಯೇ ಓಟಿಪಿ ನಂಬರ್ ಪಡೆದು, ನಿಗದಿತ ಹಣವನ್ನಷ್ಟೇ ಪಡೆಯುತ್ತಿದ್ದೇವೆಯೋ ಹೊರತು ಗ್ರಾಹಕರಿಂದ ಹೆಚ್ಚಿನ ಪಡೆದುಕೊಳ್ಳುತ್ತಿಲ್ಲ. ನಮ್ಮಲ್ಲಿರುವ ಕಾರ್ಮಿಕರನ್ನು ಬಳಸಿ ಸಾಧ್ಯವಾದಷ್ಟು ಪೂರೈಕೆ ಮಾಡುವ ಪ್ರಯತ್ನ ಮಾಡುತ್ತಿದ್ದೇವೆ. ಆದರೆ, ಸಿಲಿಂಡರ್ ಡೆಲಿವರಿ ಕಾರ್ಮಿಕರು ಸಹ ಒತ್ತಡದಲ್ಲಿದ್ದು, ವಿತರಣೆಯ ಸಮಯದಲ್ಲಿ ಪೊಲೀಸರ ಬೆಂಬಲ ಅಗತ್ಯವಿದೆ ಎಂದು ಕೋರಿದರು.

ಕ್ಯೂನಲ್ಲಿ ನಿಲ್ಲುವ ಅಗತ್ಯವಿಲ್ಲ: ಎಲ್‌ಪಿಜಿ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ರಾಜ್ಯಾಧ್ಯಕ್ಷ ಮೆಹುಲ್ ಜೆ. ಪಟೇಲ್ ಮಾತನಾಡಿ, ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ನೇರವಾಗಿ ಗ್ರಾಹಕರ ಮನೆ ಬಾಗಿಲಿಗೆ ತಲುಪಿಸಲಾಗುತ್ತಿದ್ದು, ಗ್ರಾಹಕರು ಆತಂಕ ಪಡುವ ಅಗತ್ಯವಿಲ್ಲ. ಅಲ್ಲದೆ ಏಜೆನ್ಸಿಗಳ ಮುಂದೆ ಬಂದು ಕ್ಯೂ ನಿಲ್ಲುವ ಅವಶ್ಯಕತೆಯೂ ಇಲ್ಲ ಎಂದು ಹೇಳಿದರು.

ಸಿದ್ದರಾಮಯ್ಯ ಬಜೆಟ್ ಸಮಾಧಾನ ತಂದಿಲ್ಲ!

ಭಕ್ಷಿಕೆರೆ ಏರಿ ಒಡೆದು ಪ್ರವಾಹದಿಂದ ಉಂಟಾದ ಹಾನಿಯ ಬಗ್ಗೆ ಫೋಟೋ ಸಹಿತ ಮಾಹಿತಿ ನೀಡಿದ್ದೆ. ರಸ್ತೆ, ಚರಂಡಿ ಹಾಗೂ ನೀರಾವರಿ ಯೋಜನೆಗಳಿಗಾಗಿ ವಿಶೇಷ ಅನುದಾನ ನೀಡುವಂತೆ ನಾಲ್ಕೈದು ಬಾರಿ ಕೇಳಿಕೊಂಡಿದ್ದೆ. ಪಾರದರ್ಶಕವಾಗಿ ಅನುದಾನ ಸಿಗಲಿದೆ ಎಂಬ ನಂಬಿಕೆ ನನಗಿತ್ತು. ಆದರೆ ಈಗ ಆ ನಂಬಿಕೆ ಹುಸಿಯಾಗಿದೆ ಎಂದು ನೋವು ತೋಡಿಕೊಂಡಿದ್ದಾರೆ. ಜೊತೆಗೆ, ಈ ಹಿಂದೆ ಇದ್ದ ಜನಪ್ರತಿನಿಧಿಗಳು ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಮಾಡಿಲ್ಲ. ಹೀಗಾಗಿ ಹೊಸದಾಗಿ ಆಯ್ಕೆಯಾದ ನನಗೆ ಜನರ ನಿರೀಕ್ಷೆಗಳನ್ನು ಪೂರೈಸಲು ಹೆಚ್ಚಿನ ಅನುದಾನದ ಅಗತ್ಯವಿತ್ತು ಆದರೆ ಸಿಎಂ ಕಡೆಯಿಂದ ಸೂಕ್ತ ಸ್ಪಂದನೆ ಸಿಗದಿರುವುದು ನನಗೆ ವೈಯಕ್ತಿಕವಾಗಿ ನೋವುಂಟು ಮಾಡಿದೆ ಎಂದು ತಿಳಿಸಿದರು.

ಇದೇ ವೇಳೆ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆಗುವ ವಿಚಾರದ ಬಗ್ಗೆಯೂ ಇಕ್ಬಾಲ್ ಹುಸೇನ್ ಮಾತನಾಡಿದ್ದಾರೆ. ಯುಗಾದಿ ಬಳಿಕ ರಾಜ್ಯಕ್ಕೆ ಒಂದು ಒಳ್ಳೆಯ ಸುದ್ದಿ ಸಿಗಲಿದೆ. ಡಿಕೆಶಿ ಅವರ ಶ್ರಮಕ್ಕೆ ತಕ್ಕ ರಿಸಲ್ಟ್ ಸಿಕ್ಕೇ ಸಿಗುತ್ತದೆ ಎಂದು ಹೇಳುವ ಮೂಲಕ ರಾಜ್ಯ ರಾಜಕಾರಣದಲ್ಲಿ ನಾಯಕತ್ವ ಬದಲಾವಣೆಯ ಮುನ್ಸೂಚನೆ ನೀಡಿದ್ದಾರೆ. ಹುಸೇನ್ ಆರೋಪಕ್ಕೆ ಪ್ರತಿಕ್ರಿಯಿಸಿದ ಶಿವಕುಮಾರ್, ಬಜೆಟ್‌ನಲ್ಲಿ ಅವರ ಕ್ಷೇತ್ರದ ಬಗ್ಗೆ ಕಾಳಜಿ ವಹಿಸಲಾಗಿದೆ . ರಾಮನಗರ ಜಿಲ್ಲೆಯಲ್ಲಿ ನ್ಯಾಯಾಲಯದ ಕಟ್ಟಡ ನಿರ್ಮಾಣಕ್ಕೆ ಮಂಜೂರಾತಿ ನೀಡಿದ್ದು, ಇತರೆ ಸೌಲಭ್ಯಗಳನ್ನೂ ಕಲ್ಪಿಸಲಿದೆ ಎಂದು ತಿಳಿಸಿದರು.

ತಂಬಾಕು ಖರೀದಿ ಪುನಾರಂಭ

ಜಿ.ಡಿ.ಹರೀಶ್‌ಗೌಡ, ಸಿ.ಎನ್.ಮಂಜೇಗೌಡ, ಮಾಜಿ ಶಾಸಕರಾದ ಕೆ.ಮಹದೇವು, ಅಶ್ವಿನ್ ಕುಮಾರ್, ಜೆಡಿಎಸ್ ಹಿರಿಯ ಮುಖಂಡ ಕೃಷ್ಣನಾಯಕ, ಕೋಲಾರ ಸಂಸದ ಮಲ್ಲೇಶ್ ಬಾಬು ಹಾಗೂ ವಾಣಿಜ್ಯ ಸಚಿವಾಲಯದ ಉನ್ನತ ಅಧಿಕಾರಿಗಳು ಭಾಗಿಯಾಗಿದ್ದರು.

ಬೆಂಬಲ ಬೆಲೆಗೆ ಮನವಿ: ಸಭೆ ಬಳಿಕ ದೆಹಲಿಯ ಕರ್ನಾಟಕ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಾಜಿ ಸಚಿವ ಸಾ.ರಾ. ಮಹೇಶ್, ಮುಂದಿನ ಸೋಮವಾರದಿಂದಲೇ ತಂಬಾಕು ಖರೀದಿಗೆ ಸಚಿವ ಪಿಯೂಷ್ ಗೋಯಲ್ ಅವರು ಸೂಚನೆ ನೀಡಿದ್ದಾರೆ. ಅಲ್ಲದೆ, 190 ದೇಶಗಳ ರಾಯಭಾರಿಗಳಿಗೆ ಪತ್ರ ಬರೆದು ಮುಕ್ತ ಮಾರುಕಟ್ಟೆಯಲ್ಲಿ ತಂಬಾಕು ಖರೀದಿಗೆ ಕೋರಿಕೆ ಸಲ್ಲಿಸುವುದರ ಜೊತೆಗೆ ಈವರೆಗೆ ರಫ್ತು ಮಾಡದಿರುವ ದೇಶಗಳಿಗೂ ತಂಬಾಕು ರಫ್ತು ಮಾಡುವ ಬಗ್ಗೆ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದ್ದಾರೆ. ಹಾಗೆಯೇ ತಂಬಾಕಿಗೆ ಬೆಂಬಲ ಬೆಲೆ ನೀಡುವಂತೆಯೂ ರಾಜ್ಯ ಸರಕಾರಕ್ಕೆ ಮನವಿ ಮಾಡುತ್ತೇವೆ ಎಂದರು.

ಖರೀದಿ ನಿಲ್ಲಿಸಿರುವ ಪರಿಣಾಮದಿಂದ ತಂಬಾಕು ಬೆಲೆ ಕೆಜಿಗೆ 320 ರಿಂದ 250ಕ್ಕೆ ಕುಸಿತ ಕಂಡಿದೆ. ಈ ಹಿನ್ನೆಲೆಯಲ್ಲಿ ಗೋಯಲ್ ಅವರನ್ನು ಭೇಟಿಯಾಗಿ ಬೆಲೆ ಹೆಚ್ಚಳ ಮತ್ತು ಪರಿಹಾರ ಕ್ರಮಕ್ಕೆ ಮನವಿ ಮಾಡಲಾಗಿದೆ. ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಕೋರಿದ್ದೇವೆ. ತಂಬಾಕು ಮಂಡಳಿಗೆ ಉತ್ತಮ ಮೂಲಸೌಕರ್ಯ ಕಲ್ಪಿಸುವ ಬಗ್ಗೆಯೂ ಕೇಂದ್ರ ಸಚಿವರ ಗಮನ ಸೆಳೆಯಲಾಗಿದೆ ಎಂದು ತಿಳಿಸಿದರು.

ನಿಗಧಿತ ಬೆಲೆಯಲ್ಲಿ ಖರೀದಿಸಲಿ: ಶಾಸಕ ಎ.ಮಂಜು ಮಾತನಾಡಿ, ಕರ್ನಾಟಕದಲ್ಲಿ 100 ದಶಲಕ್ಷ ಟನ್ ತಂಬಾಕು ಬೆಳೆಯಲು ತಂಬಾಕು ಮಂಡಳಿ ಅವಕಾಶ ನೀಡಿದೆ. ಆದರೆ ಈ ವರ್ಷ ಸುಮಾರು 80 ದಶಲಕ್ಷ ಟನ್ ಬೆಳೆಯಲಾಗಿದೆ. ರೈತರು ಬೆಳೆದ ಸೊಪ್ಪನ್ನು ಸರ್ಕಾರ ನಿರ್ಧಾರ ಮಾಡಿದ ಬೆಲೆಯಲ್ಲಿ ಖರೀದಿ ಮಾಡಬೇಕಿದೆ. ಈ ಹಿಂದೆ ಖರೀದಿ ಭರವಸೆ ನೀಡಿದ್ದ ಕಂಪನಿಗಳು ಅದರಂತೆ ನಡೆದುಕೊಂಡಿಲ್ಲ. ಈಗ ಬೆಳೆದ ಸೊಪ್ಪನ್ನು ಕೂಡಲೇ ಖರೀದಿ ಮಾಡಬೇಕು. ಈ ವಿಚಾರದಲ್ಲೂ ಕೇಂದ್ರ ಸರ್ಕಾರ ಮಧ್ಯ ಪ್ರವೇಶ ಮಾಡಬೇಕು ಎಂದು ಸಚಿವರಿಗೆ ಮನವಿ ಮಾಡಿದ್ದೇವೆ ಎಂದು ಹೇಳಿದರು.

ಅನಿಲ ಪೂರೈಕೆ ಮಾಡಲಾಗದು

ವಿಶ್ವಾಸ ವ್ಯಕ್ತಪಡಿಸಿದ್ದು ಅಲ್ಲಿವರೆಗೆ ಹೋಟೆಲ್ ಮತ್ತು ಇತರ ವಾಣಿಜ್ಯ ಉದ್ಯಮದವರು ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಬೇಕು. ತೈಲ ಕಂಪನಿ ಅಧಿಕಾರಿಗಳ ಮಾಹಿತಿಯಂತೆ ಅಡುಗೆ ಅನಿಲದ ಎರಡು ಹಡಗುಗಳು ಬಂದಿದ್ದು, ಇನ್ನೂ 10 ಹಡಗುಗಳು ಬರುತ್ತಿವೆ ಎಂದು ಮಾಹಿತಿ ನೀಡಿದ್ದಾರೆ. ಕಾಳಸಂತೆಯಲ್ಲಿ ಅನಿಲ ಸಿಲಿಂಡರ್‌ಗಳು ಮಾರಾಟವಾಗದಂತೆ ಎಚ್ಚರಿಕೆ ವಹಿಸಲು ಹಾಗೂ ತಕ್ಷಣ ಕ್ರಮ ಕೈಗೊಳ್ಳಲು ಇಲಾಖಾ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸದ್ಯಕ್ಕೆ ವಾಣಿಜ್ಯ ಬಳಕೆ ಅನಿಲ ಸಿಲಿಂಡರ್ ದಾಸ್ತಾನು ಇಲ್ಲ. ತುರ್ತು ಕಾರ್ಯಗಳಿಗೆ ವಾಣಿಜ್ಯ ಬಳಕೆ ಸಿಲಿಂಡರ್‌ಗಳನ್ನು ಒದಗಿಸುತ್ತೇವೆ. ಆಟೋ ರಿಕ್ಷಾಗಳಿಗೆ ಬೆಂಗಳೂರಿನಲ್ಲಿ ಗ್ಯಾಸ್ ಒದಗಿಸಲು ಹಾಗೂ ಮಂಗಳೂರಿನಲ್ಲೂ ಗ್ಯಾಸ್ ಸಮಸ್ಯೆ ಬಗೆಹರಿಸಲು ಸೂಚಿಸಲಾಗಿದೆ ಎಂದರು.

ಭಿಕ್ಷಾಟನೆ ಮುಕ್ತ ರಾಜ್ಯಕ್ಕೆ ಕ್ರಮ

ಹೇಮಲತಾ ನಾಯಕ್ ಅವರ ಮತ್ತೊಂದು ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಆಧಾರ್ ಜೋಡಣೆ ಮಾಡಿದ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ಇಲಾಖೆಯಿಂದ ಹಣ ಪಾವತಿ ಆಗಲಿದೆ ಎಂದರು. ವಿವಿಧ ಯೋಜನೆಗಳಡಿ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುತ್ತಿದ್ದು, ದುರ್ಬಳಕೆ ತಡೆಯಲು ಆಧಾರ್ ಸೀಡಿಂಗ್ ಮೂಲಕ ಹಣ ವರ್ಗಾವಣೆ ಮಾಡಲಾಗುತ್ತಿದೆ ಎಂದರು.

ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ 10, ವಸತಿ ಶಾಲೆಯಲ್ಲಿ 5 ಹಾಗೂ ವಸತಿ ನಿಲಯಗಳಲ್ಲಿ 12 ವಿದ್ಯಾರ್ಥಿಗಳು ಸೇರಿ ಒಟ್ಟು 27 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಪ್ಪಣ್ಣಪ್ಪ ಕಮಕನೂರು ಪ್ರಸ್ತಾವಕ್ಕೆ ತಿಳಿಸಿದರು. ಇಲಾಖೆ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳು ಪ್ರೇಮ ವೈಫಲ್ಯ, ಮಾನಸಿಕ ಖಿನ್ನತೆ, ಆನ್‌ಲೈನ್ ಜೂಜಾಟ ಮೊದಲಾದ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದು, ಈ ರೀತಿ ಆತ್ಮಹತ್ಯೆ ತಡೆಗೆ ನೀತಿ ತರುತ್ತಿದ್ದೇವೆ. ಇದಕ್ಕೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ನೇತೃತ್ವದಲ್ಲಿ ಅಧಿಕಾರಿಗಳ ಸಮಿತಿ ರಚಿಸಲಾಗಿದೆ ಎಂದರು.

ಗೃಹ, ಆರೋಗ್ಯ ಇಲಾಖೆ, ತಹಸೀಲ್ದಾರ್ ಸೇರಿ ಹಲವರಿಂದ ವಿದ್ಯಾರ್ಥಿಗಳಿಗೆ ಆತ್ಮಹತ್ಯೆ ಮಾಡಿಕೊಳ್ಳದಂತೆ ಜಾಗೃತಿ ಮೂಡಿಸಲು ಕ್ರಮ ವಹಿಸಲಾಗುತ್ತಿದೆ. ವಿದ್ಯಾರ್ಥಿಗಳ ಸುರಕ್ಷತೆಗಾಗಿ ಹಲವು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಆತ್ಮಹತ್ಯೆ ತಡೆ ನೀತಿ 2025ರಂತೆ 100 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವ ಪ್ರತಿಯೊಂದು ಸಂಸ್ಥೆಯೂ ಕನಿಷ್ಠ ಒಬ್ಬ ಅರ್ಹ ಮನೋವೈದ್ಯರನ್ನು, ಕೌನ್ಸಿಲ್, ಸಮಾಜ ಸೇವಕರನ್ನು ನೇಮಿಸಬೇಕಾಗುತ್ತದೆ ಎಂದರು.

ಮೈಸೂರು ಫ್ಯಾಷನ್ ವೀಕ್ ಸೀಸನ್–8ಗೆ ಚಾಲನೆ

ನವನವೀನ ವಿನ್ಯಾಸದ ಉಡುಪುಗಳಲ್ಲಿ ಮೇಳೈಸಿದ ಪ್ರಸಿದ್ಧ ಮಾಡೆಲ್‌ಗಳು!



ಮೈಸೂರು ಫ್ಯಾಷನ್ ವೀಕ್ ರ್‍ಯಾಂಪ್ ವಾಕ್‌ನಲ್ಲಿ ಗಮನ ಸೆಳೆದ ಮಾಡೆಲ್ ಮನ್ನಾರ ಚೋಪ್ರಾ

ಮೈಸೂರು, ಮಾ.13(ವಿವಿಹೆಚ್)– ಸಾಂಸ್ಕೃತಿಕ ನಗರಿ ಮೈಸೂರಿನ ಹೆಸರಾಂತ ಫ್ಯಾಷನ್ ಶೋ ಮೈಸೂರು ಫ್ಯಾಷನ್ ವೀಕ್ ಸೀಸನ್–8ಕ್ಕೆ ಶುಕ್ರವಾರ ಅದ್ದೂರಿ ಚಾಲನೆ ದೊರೆಯಿತು.

ನಗರದ ಸೈಲೆಂಟ್ ಶೋರ್ಸ್ ಖಾಸಗಿ ಹೋಟೆಲ್‌ನಲ್ಲಿ ಜಯಂತಿ ಬಲ್ಲಾಳ್ ಅವರ ನೇತೃತ್ವದಲ್ಲಿ ಆಯೋಜಿಸಿದ್ದು, ಮೈಸೂರು ಫ್ಯಾಷನ್ ವೀಕ್ ವಿನ್ಯಾಸಕರು, ಬ್ರ್ಯಾಂಡ್‌ಗಳು, ಮಾಡೆಲ್‌ಗಳು ಮತ್ತು ಫ್ಯಾಷನ್ ಉತ್ಸಾಹಿಗಳನ್ನು ಒಂದೆಡೆ ಸೇರಿಸಿ ಬ್ರ್ಯಾಂಡ್ ಪರಿಚಯಿಸುವಲ್ಲಿ ಫ್ಯಾಷನ್ ಉದ್ಯಮಿ ಜಯಂತಿ ಬಲ್ಲಾಳ್ ಯಶಸ್ವಿಯಾದರು. ವಿವಿಧ ಬ್ರ್ಯಾಂಡ್ ಬಟ್ಟೆ ಧರಿಸಿದ ಬೆಡಗಿಯರು ರ್‍ಯಾಂಪ್ ವಾಕ್‌ನಲ್ಲಿ ಹಜ್ಜೆಹಾಕುವ ಮೂಲಕ ಎಲ್ಲರ ಕುತೂಹಲ ಕೆರಳಿಸಿದರು.

ಖ್ಯಾತ ಹಾಲಿವುಡ್ ನಟಿ ಪ್ರಿಯಾಂಕಾ ಚೋಪ್ರಾ ಸಹೋದರಿ ಮನ್ನಾರ ಚೋಪ್ರಾ ಅವರು ಮೈಸೂರು ಫ್ಯಾಷನ್ ವೀಕ್‌ನಲ್ಲಿ ಮೋಡಿ ಮಾಡಿದರು. ರ್‍ಯಾಂಪ್ ವಾಕ್‌ನಲ್ಲಿ ಉಳಿದ 51 ಮಂದಿಯೊಂದಿಗೆ ಹೆಜ್ಜೆ ಹಾಕಿ, ಸಂಭ್ರಮಿಸಿದರು.

ಮೈಸೂರು ಫ್ಯಾಷನ್ ವೀಕ್, ಸೃಜನಶೀಲತೆ ಬಿಂಬಿಸುವ ವೇದಿಕೆ ಕಲ್ಪಿಸಿದೆ. ಭಾರತದಾದ್ಯಂತದ ವಿನ್ಯಾಸಕರು, ಮಾಡೆಲ್ ಗಳು ಮತ್ತು ಯುವ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಈ ವೇದಿಕೆ ಕಲ್ಪಿಸಲಾಗಿದೆ ಎಂದು ಮೈಸೂರು ಫ್ಯಾಷನ್ ವೀಕ್‌ನ ಸಂಸ್ಥಾಪಕಿ ಜಯಂತಿ ಬಲ್ಲಾಳ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೈಸೂರಿನಲ್ಲಿ ಈ ಬಾರಿ 'ಟೈಮೆಕ್ಸ್ ಮೈಸೂರು ಫ್ಯಾಷನ್ ವೀಕ್‌ನ 8ನೇ ಸೀಸನ್' ಅತ್ಯಂತ ವರ್ಣರಂಜಿತವಾಗಿ ಆರಂಭ ಪಡೆದಿದೆ. ಬ್ಲಾಂಕಾನ್ವಾಸ್ ಮೀಡಿಯಾದ ಸಂಸ್ಥಾಪಕ ಪರಿಮಲ್ ಮೆಹ್ತಾ ಅವರ ನೇತೃತ್ವದಲ್ಲಿ ಮೂಡಿಬರುತ್ತಿರುವ ಈ ಕಾರ್ಯಕ್ರಮವು, ಆಧುನಿಕ ಭಾರತದ ಬದಲಾಗುತ್ತಿರುವ ಶೈಲಿ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸಲಿದೆ. ಈ ಪ್ರದರ್ಶನದಲ್ಲಿ ದೇಶದ ಖ್ಯಾತ ವಿನ್ಯಾಸಕರು ರೂಪಿಸಿದ ವೈವಿಧ್ಯಮಯ ಉಡುಪುಗಳ ಸಂಗ್ರಹದ ಜೊತೆಗೆ, ಇಶಿತಾ ದತ್ತಾ, ವತ್ಸಲ್ ಶೇತ್ ಮತ್ತು ಚೈತ್ರಾ ಜೆ. ಆಚಾರ್ ಅವರಂತಹ ಪ್ರಸಿದ್ಧ ಸೆಲೆಬ್ರಿಟಿಗಳು ಶೋ–ಸ್ಟಾಪರ್‌ಗಳಾಗಿ ಮಿಂಚಲಿದ್ದಾರೆ.

ಈ ಫ್ಯಾಷನ್ ವೀಕ್‌ಗೆ ಪ್ರವೇಶ ಉಚಿತವಿದ್ದು, ಎಲ್ಲರೂ ಬಂದು ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಮೂರು ದಿನಗಳ ಕಾಲ ನಡೆಯುವ ಈ ಫ್ಯಾಷನ್ ಶೋನಲ್ಲಿ, ರನ್‌ವೇ ರೋಸಿ ಅಹ್ಲುವಾಲಿಯಾ, ರಿಯಾಜ್ ಗಂಜಿ, ರೆಹನ್ ಶಾ, ಅಯ್ನಾ ವರ್ಲ್ಡ್, ಸುರೇಶ್ ಮೆನನ್, ಭಾರ್ಗವಿ ಕುನಮ್, ಕಿಂಗ್‌ಶುಕ್ ಭಾದುರಿ ಮತ್ತು ಪಂಕಜ್ ಸೋನಿ ಅವರಂತಹ ವಿನ್ಯಾಸಕರ ಕಲೆಯನ್ನು ಅನಾವರಣಗೊಳಿಸಲಿದೆ.

ಪುರುಷ ಸೂಪರ್ ಮಾಡೆಲ್ ವೈಭವ್ ಮೌರ್ಯ, ಉಬೈದ್ ಶಾ, ಫೈಜಾನ್ ಖಾನ್ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ. ಇನ್ನು ಟೈಮೆಕ್ಸ್ ಬ್ಲೆಂಡರ್ಸ್ ಪ್ರೈಡ್ ಮತ್ತು ಸೈಲೆಂಟ್ ಶೋರ್ಸ್ ಜೊತೆಗೆ ಟೈಮೆಕ್ಸ್ ಶೀರ್ಷಿಕೆ ಪಾಲುದಾರರಾದರೆ, ಇನ್‌ಸ್ಟಾಕ್ಸ್, ಸೋನಾನಿ ಜ್ಯುವೆಲ್ಸ್, ಅಂಜಲಿ ಟೇಟರ್, ಲಿವಿಂಗ್ ಸ್ಪೇಸ್ ಇಂಕ್ ಮತ್ತು ಜೆಡಿ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ & ಜೆಡಿ ಸ್ಕೂಲ್ ಆಫ್ ಡಿಸೈನ್ ಸೇರಿದಂತೆ ಲೈಫ್ ಸ್ಟೈಲ್ ಹಾಗೂ ಕ್ರಿಯೇಟಿವ್ ತಮ್ಮ ಬ್ರ್ಯಾಂಡ್‌ಗಳ ಪ್ರಚಾರಕ್ಕಾಗಿ ಯುವ ಆಸಕ್ತರಿಗೆ ವೇದಿಕೆ ನೀಡುತ್ತಿದೆ.

ಮಾಜಿ ಸಚಿವ ಬೈರತಿ ಬಸವರಾಜ್ ಜೈಲಿನಿಂದ ಬಿಡುಗಡೆ



ಬೆಂಗಳೂರು, ಮಾ.13– ರೌಡಿಶೀಟರ್ ಬಿಕ್ಲು ಶಿವ ಕೊಲೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿದ್ದ ಮಾಜಿ ಸಚಿವ ಬೈರತಿ ಬಸವರಾಜ್ ಜೈಲಿನಿಂದ ಬಿಡುಗಡೆಯಾಗಿದ್ದಾರೆ. ನಗರದ ಪರಪ್ಪನ ಅಗ್ರಹಾರ ಜೈಲಿನಿಂದ ಇಂದು ಬೈರತಿ ಬಸವರಾಜ್ ರಿಲೀಸ್ ಆಗಿದ್ದಾರೆ. ನಿನ್ನೆಯಷ್ಟೇ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಿಂದ ಜಾಮೀನು ಮಂಜೂರಾಗಿತ್ತು. ಜೈಲಿನ ಗೇಟ್ ಬಳಿ ನೂರಾರು ಸಂಖ್ಯೆಯಲ್ಲಿ ಬೆಂಬಲಿಗರು ಜಮಾಯಿಸಿದ್ದರು. ಜೈಲಿಂದ ರಿಲೀಸ್ ಆದ ಶಾಸಕ ಬೈರತಿ ಬಸವರಾಜ್ ಕಾರಿನಲ್ಲಿ ತೆರಳಿದರು.

ವಿದ್ಯುತ್ ಭೂಗತ ಕೇಬಲ್ ಅಳವಡಿಕೆಯಲ್ಲಿ ಅವೈಜ್ಞಾನಿಕ ಕಾಮಗಾರಿ ಆರೋಪ

● ಚೆಸ್ಕಾಂ, ಪಾಲಿಕೆ ಅಧಿಕಾರಿಗಳಲ್ಲಿ ಸಮನ್ವಯತೆ ಅಭಾವ ● ಸ್ಥಳದಲ್ಲಿ ಚೆಸ್ಕಾಂ, ಪಾಲಿಕೆಯ ಜವಾಬ್ದಾರಿಯುತ ಅಧಿಕಾರಿಗಳೆ ಹಾಜರಿರಲ್ಲ! ● ಸುರಕ್ಷತೆ ಬಗ್ಗೆ ಜನರಲ್ಲಿ ಆತಂಕ; ರಸ್ತೆ, ಫುಟ್‌ಪಾತ್ ಅಧ್ವಾನ ● ನ್ಯಾಯಾಲಯದ ಮೊರೆ ಹೋಗುವುದಾಗಿ ಕೆ.ವಿ.ಶ್ರೀಧರ್ ಎಚ್ಚರಿಕೆ


ಶ್ರೀಧರ್



ಮೈಸೂರು, ಮಾ.13– ಮೈಸೂರು ನಗರ ಪಾಲಿಕೆ ವಲಯ ಕಚೇರಿ 5 ಮತ್ತು 4ರ ವ್ಯಾಪ್ತಿ ಯಲ್ಲಿ ನಡೆಯುತ್ತಿರುವ ಭೂಗತ (ಅಂಡರ್ ಗ್ರೌಂಡ್) ಕೇಬಲ್ ಅಳವಡಿಕೆ ಕಾರ್ಯ ಅವೈಜ್ಞಾನಿಕ ವಾಗಿದ್ದು, ಮುಂದಿನ ದಿನಗಳಲ್ಲಿ ಸಾಕಷ್ಟು ಅನಾಹುತಗಳಿಗೆ ಆಸ್ಪದವಾಗಲಿದೆ ಎಂದು ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್ ಆತಂಕ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ನಗರದೆಲ್ಲೆಡೆ ಇಂತಹ ಅಪಾಯಕಾರಿ ಸ್ಥಿತಿ ನಿರ್ಮಾಣವಾಗಲು ಚೆಸ್ಕಾಂ ಅಧಿಕಾರಿಗಳೇ ನೇರಹೊಣೆ, ಇದಕ್ಕೆ ರಹದಾರಿ ಮಾಡಿಕೊಟ್ಟಿರುವ ನಗರ ಪಾಲಿಕೆಯೂ ಹೊಣೆಗಾರಿಕೆ ಪಾಲು ಹೊಂದಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಎಚ್ಚರ ವಹಿಸಿ ವೈಜ್ಞಾನಿಕ ರೀತಿ ಕಾಮಗಾರಿ ನಡೆಸಲು ಕ್ರಮ ಕೈಗೊಳ್ಳದಿದ್ದರೆ ಅನಿವಾರ್ಯವಾಗಿ ನ್ಯಾಯಾಲಯದ ಮೊರೆ ಹೋಗಬೇಕಾಗುತ್ತದೆ ಎಂದು ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ. ಶ್ರೀಧರ್ ಎಚ್ಚರಿಸಿದ್ದಾರೆ.

ಸುರಕ್ಷಿತ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡುವುದಾಗಿ 450 ಕೋಟಿ ವೆಚ್ಚದಲ್ಲಿ ಯೋಜನೆ ಕೈಗೆತ್ತಿಕೊಂಡಿದ್ದಾರೆ. ಕಾಮಗಾರಿಗಾಗಿ ಎಲ್ಲೆಂದರಲ್ಲಿ, ರಸ್ತೆ ಮಧ್ಯದಲ್ಲೇ ಗುಂಡಿಗಳನ್ನು ತೆಗೆಯಲಾಗುತ್ತಿದೆ. ಹಲವು ಕಡೆಗಳಲ್ಲಿ ಗುಂಡಿಗಳನ್ನು ಮುಚ್ಚದೆ ನಿರ್ಲಕ್ಷ್ಯ ವಹಿಸಲಾಗಿದೆ. ಇದರ ಜತೆಗೆ ಸರಿಯಾಗಿ ಮಣ್ಣು ಮುಚ್ಚದ ಕಾರಣ ಹಲವು ರಸ್ತೆಗಳಲ್ಲಿ ಗುಂಡಿಗಳು ಬಿದ್ದಿದೆ. ಇದರಿಂದಾಗಿ ಜನ ಮತ್ತು ವಾಹನ ಸಂಚಾರಕ್ಕೆ ಪರದಾಡುವಂತಾಗಿದೆ. ಗುತ್ತಿಗೆದಾರರ ಬೇಜವಾಬ್ದಾರಿ ಕಾಮಗಾರಿಯಿಂದಾಗಿ ನಿತ್ಯ ದ್ವಿಚಕ್ರ ವಾಹನ ಸವಾರರು ಆಯತಪ್ಪಿ ಬಿದ್ದು, ಗಾಯಗೊಳ್ಳುತ್ತಿದ್ದಾರೆ. ಮತ್ತೆ ಕೆಲವು ಕಡೆಗಳಲ್ಲಿ ನಾಗರಿಕರು ಗುಂಡಿಗಳಿಗೆ ಬಿದ್ದು ಗಾಯಗೊಂಡಿರುವ ನಿದರ್ಶನಗಳು ಸಾಕ್ಷಿವೆ. ಜನರಿಗೆ ಇಷ್ಟೆಲ್ಲಾ ತೊಂದರೆಯಾಗುತ್ತಿದ್ದರೂ ಬೇಜವಾಬ್ದಾರಿತನದ ಈ ಕಾಮಗಾರಿ ಮುಂದುವರೆದಿದೆ. ಈ ಬಗ್ಗೆ ಚೆಸ್ಕಾಂ ಪಾಲಿಕೆ ಅಧಿಕಾರಿಗಳು ತುರ್ತು ಗಮನಹರಿಸಿ ಸಂಬಂಧಪಟ್ಟ ಗುತ್ತಿಗೆದಾರರಿಗೆ ಸಮರ್ಪಕ ಮತ್ತು ವೈಜ್ಞಾನಿಕವಾಗಿ ಕಾಮಗಾರಿ ನಡೆಸುವಂತೆ ಸೂಚಿಸುವ ಕೆಲಸ ಮಾಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಫುಟ್‌ಪಾತ್ ಅತಿಕ್ರಮ ಸರಿಯಲ್ಲ: ಭೂಗತ ಕೇಬಲ್ ವ್ಯವಸ್ಥೆಯ ಸುರಕ್ಷತೆ ಬಗ್ಗೆಯೇ ಜನರಿಗೆ ಸ್ಪಷ್ಟತೆ ಇಲ್ಲ. ಇನ್ನು ಚೆಸ್ಕಾಂ ವತಿಯಿಂದ ತರಾತುರಿಯಲ್ಲಿ ಕಾಮಗಾರಿ ನಡೆಸುತ್ತಿರುವುದು ಸಾರ್ವಜನಿಕರಲ್ಲಿ ಆತಂಕ ಹೆಚ್ಚಿಸಿದೆ. ಒಂದೆಡೆ ಬೇಕಾಬಿಟ್ಟಿ ರಸ್ತೆ ಅಗೆದು ಗುಂಡಿಮಯ ಮಾಡುತ್ತಿದ್ದಾರೆ. ಕಾಮಗಾರಿ ವೇಳೆ ನೀರಿನ ಪೈಪ್‌ಗಳಿಗೆ ಹಾನಿಯಾಗುವುದು ಸಹಜವಾಗಿ ಬಿಟ್ಟಿದೆ. ಪೈಪ್ ಒಡೆದು ಅಪಾರ ಪ್ರಮಾಣದ ನೀರು ಪೋಲಾಗುವುದಲ್ಲದೆ ಪೂರೈಕೆಯಲ್ಲೂ ವ್ಯತ್ಯಯವಾಗುತ್ತಿದೆ. ಮುಂದಿನ ದಿನಗಳಲ್ಲಿ ಕುಡಿಯುವ ನೀರು, ಯುಜಿಡಿ ಪೈಪ್‌ಲೈನ್ ದುರಸ್ತಿ ಕಾರ್ಯ ನಡೆಸುವುದು ಎಷ್ಟರಮಟ್ಟಿಗೆ ಸುರಕ್ಷಿತ ಎನ್ನುವ ಕನಿಷ್ಠ ಅರಿವು ಚೆಸ್ಕಾಂ, ಪಾಲಿಕೆ ಅಧಿಕಾರಿಗಳಿಗಿಲ್ಲ.

ಸೂಕ್ತ ಸ್ಥಳದಲ್ಲಿ ಅಳವಡಿಸಿ: ಕೇಬಲ್ ಕಾಮಗಾರಿಗಾಗಿ ಫುಟ್‌ಪಾತ್‌ಗಳ ಮೇಲೆಯೇ ಆರ್‌ಎಂಯು ಬಾಕ್ಸ್‌ಗಳನ್ನು ಅಳವಡಿಸಲಾಗುತ್ತಿದೆ. ಇದರಿಂದ ಪಾದಚಾರಿಗಳ ಸಂಚಾರಕ್ಕೆ ತೀವ್ರ ತೊಡಕಾಗುತ್ತಿದೆ. ಇದು ಪಾದಚಾರಿಗಳ ಹಕ್ಕುಗಳನ್ನು ಕಸಿದಂತೆ. ಇಷ್ಟಕ್ಕೂ ಆರ್‌ಎಂವಿ ಬಾಕ್ಸ್‌ಗಳನ್ನು ಅಳವಡಿಸಲು ಇವರಿಗೆ ಪಾಲಿಕೆಯಿಂದ ಅವಕಾಶ ನೀಡಿಲ್ಲ. ಕೇವಲ ಕೇಬಲ್ ಅಳವಡಿಕೆಗೆ ಮಾತ್ರ ಅನುಮತಿ ನೀಡಲಾಗಿದೆ. ಸಿಎ ನಿವೇಶನ, ಉದ್ಯಾನ ಅಥವಾ ಸೂಕ್ತ ಖಾಸಗಿ ಜಾಗವನ್ನು ಖರೀದಿಸಿ, ಅಲ್ಲಿ ಬಾಕ್ಸ್‌ಗಳನ್ನು ಅಳವಡಿಸಲಿ. ಪಾದಚಾರಿ ಮಾರ್ಗಗಳನ್ನು ಒತ್ತುವರಿ ಮಾಡಿಕೊಂಡು, ಎಲ್ಲೆಂದರಲ್ಲಿ ಬೇಕಾಬಿಟ್ಟಿಯಾಗಿ ಅಳವಡಿಸುವುದು ಇಲ್ಲಿಗೆ ನಿಲ್ಲದಿದ್ದರೆ ಈ ಬಗ್ಗೆ ನ್ಯಾಯಾಲಯದ ಮೊರೆ ಹೋಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ನಗರದ ಸೌಂದರ್ಯೀಕರಣಕ್ಕೆ ಧಕ್ಕೆ: ಯುಜಿ ಕೇಬಲ್ ಅಳವಡಿಕೆಯ ಅವೈಜ್ಞಾನಿಕ ಕಾಮಗಾರಿಯಿಂದ ನಗರದ ಸೌಂದರ್ಯ ಹಾಳಾಗುತ್ತಿದೆ. ಎಲ್ಲೆಂದರಲ್ಲಿ ಬೇಕಾಬಿಟ್ಟಿಯಾಗಿ ರಸ್ತೆ ಗುಂಡಿ ತೆಗೆಯುವುದು, ಅದನ್ನು ಸಮರ್ಪಕವಾಗಿ ಮುಚ್ಚದೆ ಹಾಗೆಯೇ ಬಿಡುವುದರಿಂದ ರಸ್ತೆಗಳು ಹಾಳಾಗುತ್ತಿವೆ. ರಸ್ತೆ ಬದಿಯಲ್ಲೇ ಆರ್‌ಎಂಯು ಬಾಕ್ಸ್‌ಗಳನ್ನು ಅಳವಡಿಸುತ್ತಿರುವುದರಿಂದ ನಗರದ ಸೌಂದರ್ಯ ಹಾಳಾಗುತ್ತಿದೆ. ಅಭಿವೃದ್ಧಿ ಕಾಮಗಾರಿಗಳಿಂದ ನಗರದ ಸೌಂದರ್ಯ ಹಾಗೂ ಪಾರಂಪರಿಕತೆಗೆ ಯಾವುದೇ ಧಕ್ಕೆಯಾಗಬಾರದು. ಹಾಗೆ ಆಗುವುದೇ ಆದರೆ ಅಂತಹ ಕಾಮಗಾರಿಗಳು ನಮ್ಮ ನಗರಕ್ಕೆ ಬೇಡವೇ ಬೇಡ.

ನಿಯಮ ಮೀರಿ ಕಾಮಗಾರಿ: ನಿಯಮದ ಪ್ರಕಾರ 0.9 ಮೀಟರ್ ಆಳದಲ್ಲಿ ಯುಜಿ ಕೇಬಲ್ ಅಳವಡಿಕೆ ಆಗಬೇಕು. ಈ ವೇಳೆ ಮ್ಯಾನ್ಯುವಲ್ ಅರ್ಥ್ ವರ್ಕ್ ಮಾಡುವ ಹಾಗಿಲ್ಲ. ಮಾನವ ಕೈಗಳಿಂದ ಕೆಲಸ ಮಾಡಿದರೆ 1.5 ಅಡಿ ಆಳದಲ್ಲಿ ಅಷ್ಟೆ ಕೇಬಲ್ ಅಳವಡಿಸಬಹುದಷ್ಟೇ. ಇದು ಮುಂದಿನ ದಿನಗಳಲ್ಲಿ ಭಾರೀ ಸಮಸ್ಯೆಗೆ ಕಾರಣವಾಗಬಹುದು. ಪಾಲಿಕೆ ಅಭಿವೃದ್ಧಿ ಕಾಮಗಾರಿಗಳ ವೇಳೆ ವಿದ್ಯುತ್ ಕೇಬಲ್‌ಗೆ ಹಾನಿಯಾದರೆ ಕೆಲಸಗಾರರು ಬಲಿಯಾಗಬಹುದು.

ನಿಖರ ಯೋಜನೆಯಿಲ್ಲ: ನಗರದ ಎಲ್ಲೆಲ್ಲಿ ಯುಜಿ ಕೇಬಲ್ ಹೋಗಿದೆ ಎಂಬ ಬಗ್ಗೆ ನಿಖರ ಮಾರ್ಗಸೂಚಿ ಇಲ್ಲದಿರುವುದು ಕಾಮಗಾರಿಯ ಅವೈಜ್ಞಾನಿಕ ಮತ್ತು ವೈಫಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಮುಂದಿನ ದಿನಗಳಲ್ಲಿ ನಗರ ಪಾಲಿಕೆ ಅಭಿವೃದ್ಧಿಗೆ ಇದು ಅಡ್ಡಿಯಾಗಲಿದೆ. ನಿಖರ ಯೋಜನೆ, ಮಾರ್ಗಸೂಚಿಗಳು ಇಲ್ಲದೇ ಕಾಮಗಾರಿ ಕೈಗೊಂಡಿರುವುದು ಅಭಿವೃದ್ಧಿ ಕಾಮಗಾರಿಗಳಿಗೆ ತೊಡಕಾಗಲಿದೆ.

ತಂತ್ರಜ್ಞಾನದ ನಿರ್ಲಕ್ಷ್ಯ ಸರಿಯಲ್ಲ: ವಿದೇಶ ಮಾದರಿ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳುವ ಆವೇಗದಲ್ಲಿ ತಂತ್ರಜ್ಞಾನವನ್ನು ಅಳವಡಿಸಿ ಕೊಳ್ಳುವಲ್ಲಿ ವಿಫಲವಾಗುತ್ತಿದ್ದೇವೆ. ವಿದೇಶದಲ್ಲಿ ಯುಜಿ ಕೇಬಲ್ ಅಳವಡಿಸಿದರೆ ಪ್ರತ್ಯೇಕ ಡೆಕ್ ಮಾಡಿ, ಆ ಕಾಂಕ್ರೀಟ್ ಡೆಕ್‌ನೊಳಗೆ ಕೇಬಲ್ ಅಳವಡಿಸಲಾಗುತ್ತದೆ. ಇದರಿಂದ ಸುರಕ್ಷತೆ ಹೆಚ್ಚಿರುತ್ತದೆ. ಜತೆಗೆ ಡೆಕ್ ಇರುವುದು ಮನದಟ್ಟಾಗುತ್ತದೆ. ಇದೇ ರೀತಿ ಮೈಸೂರಿನಲ್ಲೂ ಡೆಕ್ ವ್ಯವಸ್ಥೆ ಮಾಡಬೇಕು.

ಪಾಲಿಕೆಯಲ್ಲಿ ಕೌನ್ಸಿಲ್ ಇದ್ದಾಗ ಒಂದು ಮೀಟರ್ ಯುಜಿ ಕೇಬಲ್ ಕಾಮಗಾರಿಗೆ 658 ರೂ. ಶುಲ್ಕ ನಿಗದಿಪಡಿಸಲಾಗಿತ್ತು. ಆದರೆ, ನಂತರದ ದಿನಗಳಲ್ಲಿ ಅಧಿಕಾರಿಗಳು 500 ರೂ.ಗೆ ಇಳಿಸಿದ್ದಾರೆ. ಇದರಿಂದ ಪಾಲಿಕೆಗೆ ಸಾಕಷ್ಟು ಆರ್ಥಿಕ ನಷ್ಟವಾಗಲಿದೆ. ಈ ಹಿಂದೆ ಲೈನ್ ಹಾಕಲು ಅನುಮತಿ ನೀಡಲಾಗಿತ್ತು. ಇದೀಗ ಆರ್‌ಎಂಯು ಬಾಕ್ಸ್‌ಗಳನ್ನು ಅಳವಡಿಸಲು ಅವಕಾಶ ಮಾಡಿಕೊಡಲಾಗಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ತುರ್ತು ಗಮನಹರಿಸಿ ಅವೈಜ್ಞಾನಿಕ ಕಾಮಗಾರಿಯನ್ನು ತಡೆಹಿಡಿದು ವೈಜ್ಞಾನಿಕವಾಗಿ ಕಾಮಗಾರಿ ನಡೆಸಲು ಸೂಚಿಸಬೇಕು. ಆ ಮೂಲಕ ಅವೈಜ್ಞಾನಿಕ ಕಾಮಗಾರಿಯ ಸಂಭವನೀಯ ತೊಂದರೆಗಳನ್ನು ತಡೆಯುವಂತೆ ಶ್ರೀಧರ್ ಆಗ್ರಹಿಸಿದ್ದಾರೆ.

3 ತಿಂಗಳಲ್ಲಿ ಯುಜಿ ಕೇಬಲ್ ಅಳವಡಿಕೆ ಪೂರ್ಣ


ಚೆಸ್ಕಾಂ ಎಂಡಿ ಮುನಿಗೋಪಾಲರಾಜು ಮಾಹಿತಿ

ಮೈಸೂರು, ಮಾ.13(ಬಿಎಲ್‌ಯು)– ಮೈಸೂರು ನಗರದಲ್ಲಿ ಅಂಡರ್ ಗ್ರೌಂಡ್ ಕೇಬಲ್ (ಯುಜಿ–ಭೂಗತ ಕೇಬಲ್) ಅಳವಡಿಕೆಯನ್ನು ಇನ್ನು ಮೂರು ತಿಂಗಳ ಒಳಗೆ ಪೂರ್ಣಗೊಳಿಸಲಾಗುವುದು ಎಂದು ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲರಾಜು ತಿಳಿಸಿದರು. ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಅವರು, 450 ಕೋಟಿ ವೆಚ್ಚದಲ್ಲಿ ಮೈಸೂರು ನಗರದಲ್ಲಿ ಭೂಗತ ಕೇಬಲ್ ಅಳವಡಿಕೆ ಕಾರ್ಯ ಪ್ರಗತಿಯಲ್ಲಿದೆ.

ಕೇಬಲ್ ಅಳವಡಿಸುವ ವೇಳೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುತ್ತಿದೆ. ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ಸಂಪರ್ಕ ಇರುವುದಿಲ್ಲ ಎಂದು ಮಾಹಿತಿ ನೀಡಿರುತ್ತೇವೆ. ಆದರೆ ಕೆಲವು ಸಂದರ್ಭದಲ್ಲಿ ನಿಗದಿತ ಅವಧಿಯೊಳಗೆ ವಿದ್ಯುತ್ ಸಂಪರ್ಕ ನೀಡಲು ಸಾಧ್ಯವಾಗದೆ ವಿಳಂಬವಾಗುತ್ತಿದೆ. ಈ ಸಮಸ್ಯೆಯನ್ನು ಶೀಘ್ರ ಪರಿಹರಿಸಲಾಗುವುದು ಎಂದು ತಿಳಿಸಿದರು.



ಕಲಾಭೂಮಿ ಪ್ರತಿಷ್ಠಾನದಿಂದ ವಿಕ್ರಂ ಅಯ್ಯಂಗಾರ್‌ಗೆ ಯುಗಾದಿ ಪುರಸ್ಕಾರ–2026


ವಿಕ್ರಮ್

ಮೈಸೂರು, ಮಾ. 13– ಕಲಾಭೂಮಿ ಪ್ರತಿಷ್ಠಾನ ವತಿಯಿಂದ ಸಾಮಾಜಿಕ ಹೋರಾಟಗಾರ ಹಾಗೂ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್ ಅವರಿಗೆ ಸಂಘಟನಾ ಕ್ಷೇತ್ರದಿಂದ ಮಾ. 16 ರಂದು ಬೆಂಗಳೂರಿನ ನಾಗರಬಾವಿಯಲ್ಲಿರುವ ಮಲ್ಲತಹಳ್ಳಿ ಕಲಾಗ್ರಾಮದಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಕಲಾಭೂಮಿ ಯುಗಾದಿ ಪುರಸ್ಕಾರ 2026 ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಕಲಾಭೂಮಿ ಪ್ರತಿಷ್ಠಾನ ಸಂಸ್ಥಾಪಕ ಅಧ್ಯಕ್ಷರಾದ ಆಸ್ಕರ್ ಕೃಷ್ಣ ತಿಳಿಸಿದ್ದಾರೆ.

ಮೈಸೂರು ಸಂವಾದ ಸಂಭಾಷಣಾ ಸರಣಿ ಮಾರ್ಚ್ 15ರಂದು ಡಾ. ಗುರುರಾಜ್ ಕರಜಗಿ ಅವರೊಂದಿಗೆ ಆರಂಭ ಸಂಸ್ಕೃತಿ, ಜ್ಞಾನ ಮತ್ತು ಸಮಕಾಲೀನ ವಿಚಾರಗಳ ಕುರಿತು ಚಿಂತನೆಪೂರ್ಣ ಸಾರ್ವಜನಿಕ ಸಂಭಾಷಣೆಯ ಪರಂಪರೆಯನ್ನು ಪುನರುಜ್ಜೀವನಗೊಳಿಸುವ ಉದ್ದೇಶದಿಂದ ಮೈಸೂರ ಸಂವಾದ ಎಂಬ ಹೊಸ ಉಪ ಕ್ರಮವು ಮೈಸೂರಿನಲ್ಲಿ ಆರಂಭವಾಗಲಿದೆ.

ಭಾರತದ ದೀರ್ಘಕಾಲದ ನಾಗರಿಕತಾ ಪರಂಪರೆಯಾದ ಸಂವಾದ ಅಂದರೆ ಪರಸ್ಪರ ಗೌರವಪೂರ್ವಕ ಚರ್ಚೆ ಮತ್ತು ಚಿಂತನೆಯ ಮೂಲಕ ನಡೆಯುವ ಅರ್ಥಪೂರ್ಣ ಸಂಭಾಷಣೆ ಇಂದಿನಿಂದ ಪ್ರೇರಿತವಾದ ಈ ಉಪಕ್ರಮವು ಪಂಡಿತರು, ಚಿಂತಕರು, ಕಾರ್ಯಪ್ರವೃತ್ತರು ಮತ್ತು ಸಾರ್ವಜನಿಕರನ್ನು ಒಂದೇ ವೇದಿಕೆಯಲ್ಲಿ ಸೇರಿಸಿ ಭಾರತೀಯ ಸಂಸ್ಕೃತಿ, ಜ್ಞಾನ ಪರಂಪರೆ, ಮೌಲ್ಯಗಳು ಮತ್ತು ಸಮಕಾಲೀನ ಪ್ರಶ್ನೆಗಳ ವಿವಿಧ ಆಯಾಮಗಳ ಕುರಿತು ಸಂಭಾಷಣೆ ನಡೆಸುವ ವೇದಿಕೆಯನ್ನು ನಿರ್ಮಿಸಲು ಉದ್ದೇಶಿಸಿದೆ. ಹೆಚ್ಚಿನ ಮಾಹಿತಿಗಾಗಿ ರಮೇಶ್ ವೆಂಕಟರಾಮನ್ 8217878059, ಕನಕರಾಜು – 9448973582 ಸಂಪರ್ಕಿಸಬಹುದು.

ಅಶೋಕಪುರಂನಲ್ಲಿ ಆದಿಶಕ್ತಿ ಪೂಜಾ ಮಹೋತ್ಸವ



ಮೈಸೂರಿನ ಅಶೋಕಪುರಂನ 6ನೇ ಕ್ರಾಸ್‌ನಲ್ಲಿ ಜರುಗಿದ ಆದಿಶಕ್ತಿ ಪೂಜಾ ಮಹೋತ್ಸವದಲ್ಲಿ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಂ.ಕೆ ಸೋಮಶೇಖರ್ ಭಾಗವಹಿಸಿದ್ದರು. ಈ ವೇಳೆ ಮಾಜಿ ಮಹಾಪೌರ ಪುರುಷೋತ್ತಮ್, ಪ್ರಭುಮೂರ್ತಿ, ದೊಡ್ಡಗರಡಿ ಅಧ್ಯಕ್ಷ ಜೋಗಿಮಹೇಶ್, ಆದಿ ಕರ್ನಾಟಕ ಮಹಾಸಭಾ ಸಿದ್ದರಾಜು, ಈಶ್ವರ್, ಪ್ರಕಾಶ್, ರಾಜು, ಕೆಂಪರಾಜು, ಪುಟ್ಟಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಮಾ.13– ಹೆಚ್.ಡಿ ಕೋಟೆ ವಿದ್ಯುತ್ ವಿತರಣ ಕೇಂದ್ರದ ವ್ಯಾಪ್ತಿಯಲ್ಲಿ ನಿರ್ವಹಣೆ ಕಾಮಗಾರಿ ನಿಮಿತ್ತ ಮಾ.14 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಹೆಚ್.ಡಿ.ಕೋಟೆ ತಾಲೂಕಿನ ಹೆಚ್.ಡಿ.ಕೋಟೆ ಟೌನ್ ಮೇಟಿಕುಪ್ಪೆ, ಚಕ್ಕೂಡನಹಳ್ಳಿ, ಭೀಮನಹಳ್ಳಿ, ಹಿರೇಹಳ್ಳಿ. ಅಣ್ಣೂರು, ಪಡುವಕೋಟೆ, ಸವ್ವೆ, ನಾಗನಹಳ್ಳಿ ಮತ್ತು ಚಿಕ್ಕಕೆರೆಯೂರು ಪಂಚಾಯಿತಿ ವ್ಯಾಪ್ತಿ ಮತ್ತು ಸುತ್ತಮುತ್ತಲಿನ ಗ್ರಾಮಗಳು. ಹ್ಯಾಂಡ್‌ಪೋಸ್ಟ್, ಹೈರಿಗೆ, ಹೆಬ್ಬಲಗುಪ್ಪೆ ಮತ್ತು ನೂರುಲಕುಪ್ಪೆ ಪಂಚಾಯಿತಿ ವ್ಯಾಪ್ತಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಹೆಚ್.ಡಿ.ಕೋಟೆಯ ಸೆಸ್ಕ್ ಪ್ರಕಟಣೆ ತಿಳಿಸಿದೆ.

ತಂಬಾಕಿಗೆ ಕೆಜಿಗೆ 350 ರೂ. ದರ ನೀಡಬೇಕು, ಖರೀದಿ ಪ್ರಮಾಣ ಶೇ.50ಕ್ಕೆ ಹೆಚ್ಚಿಸುವಂತೆ ಆಗ್ರಹಿಸಿ ಐಟಿಸಿ ಮುಂದೆ ಪ್ರತಿಭಟನೆ

ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ನೇತೃತ್ವ



ಮೈಸೂರು–ಹುಣಸೂರು ರಸ್ತೆಯ ಇಲವಾಲದಲ್ಲಿರುವ ಐಟಿಸಿ ಕಂಪನಿ ದ್ವಾರದ ಎದುರು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ನೇತೃತ್ವದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಮಾ.13(ಎಂಕೆ)– ತಂಬಾಕು ಖರೀದಿ ದರವನ್ನು ಪ್ರತಿ ಕೆ.ಜಿಗೆ 350 ರೂಗೆ ಹೆಚ್ಚಿಸಬೇಕು. ಖರೀದಿ ಪ್ರಮಾಣವನ್ನು ಶೇ.20ರಿಂದ ಶೇ.50ಕ್ಕೆ ಹೆಚ್ಚಿಸಬೇಕು ಎಂದು ಆಗ್ರಹಿಸಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ನೇತೃತ್ವದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು–ಹುಣಸೂರು ರಸ್ತೆಯ ಇಲವಾಲದಲ್ಲಿರುವ ಐಟಿಸಿ ಕಂಪನಿ ದ್ವಾರದ ಎದುರು ಜಮಾಯಿಸಿದ ಪಿರಿಯಾಪಟ್ಟಣ, ಹುಣಸೂರು ತಾಲೂಕಿನ ತಂಬಾಕು ಬೆಳೆಗಾರರು ಕಂಪನಿ ಹಾಗೂ ಭಾರತೀಯ ತಂಬಾಕು ಮಂಡಳಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ತಂಬಾಕು ಮಂಡಳಿಯವರು ಐಟಿಸಿ ಕಂಪನಿ ಹೇಳಿದಂತೆ ಕೇಳುತ್ತಿದ್ದಾರೆ. 10 ಕೋಟಿ ಟನ್ ತಂಬಾಕು ಬೆಳೆಯಬೇಕೆಂದು ರೈತರಿಗೆ ಮಂಡಳಿಯು ಗುರಿ ನೀಡಿದ್ದು, ರೈತರು 8.5 ಕೋಟಿ ಟನ್ ಬೆಳೆದಿದ್ದಾರೆ. ಆದರೆ, ಖರೀದಿ ಪ್ರಮಾಣ ಶೇ.20 ರಷ್ಟೂ ಇಲ್ಲ. ನಿನ್ನೆಯಿಂದಷ್ಟೇ ಶೇ.40 ರಷ್ಟು ಹೆಚ್ಚಿಸಿದ್ದಾರೆ. ಕೆ.ಜಿ.ಗೆ 220 ರೂ. ನೀಡುತ್ತಿದ್ದರು. ಇದೀಗ 320 ರೂ.ವರೆಗೆ ಕೊಡುವುದಾಗಿ ಭರವಸೆ ನೀಡಿದ್ದಾರೆ. ಆದರೆ, ಕೆ.ಜಿಗೆ 350 ರೂ.ನೀಡಬೇಕು ಎಂದು ಕಂಪನಿಗೆ ಸಾಂಕೇತಿಕವಾಗಿ ಬೀಗ ಹಾಕುವುದಾಗಿ ಕೈಯ್ಯಲ್ಲಿ ಬೀಗ ಹಿಡಿದು ಒತ್ತಾಯಿಸಿದರು.


ಆಂಧ್ರಪ್ರದೇಶದ ಬೆಳೆಗಾರರಿಗೆ ಒಂದು ನ್ಯಾಯ, ರಾಜ್ಯದ ರೈತರಿಗೆ ಒಂದು ನ್ಯಾಯ ಅನುಸರಿಸಲಾಗುತ್ತಿದೆ. ಸ್ಥಳೀಯ ಸಂಸದರು ರೈತರ ಸಂಕಷ್ಟಕ್ಕೆ ಸ್ಪಂದಿಸುತ್ತಿಲ್ಲ. ಈಗಾಗಲೇ ಟನ್ ಗಟ್ಟಲೇ ಕಡಿಮೆ ಬೆಲೆಗೆ ಕಂಪನಿಗೆ ಮಾರಾಟ ಮಾಡಿದ್ದಾರೆ. ಇದರ ನಷ್ಟ ತುಂಬಿಕೊಡುತ್ತಾರೆಯೇ ಎಂದು ಪ್ರಶ್ನಿಸಿದರಲ್ಲದೆ ಆಂಧ್ರಪ್ರದೇಶದಲ್ಲಿ ಬೆಳೆಯುವ ಹೊಗೆಸೊಪ್ಪು ನಂಬರ್ 1 ಗುಣಮಟ್ಟದ್ದೆಂದು ಬಿಂಬಿಸಲಾಗಿದೆ. ಹುಣಸೂರು, ಪಿರಿಯಾಪಟ್ಟಣದ ವರ್ಜೀನಿಯಾ ಹೊಗೆಸೊಪ್ಪಿಗೆ ನಿವ್ವಳ ಆದಾಯ ಪ್ರತಿ ಕೆ.ಜಿ.ಗೆ ಐಟಿಸಿ ಕಂಪನಿಗೆ 6 ಸಾವಿರ ಸಿಗುತ್ತದೆ. ಆದರೆ, ಅದರಲ್ಲಿ ಕಷ್ಟಪಟ್ಟು ಬೆಳೆದ ರೈತರಿಗೆ ಸಿಗುವುದು ಕೇವಲ 220 ರೂ.ಗೆ ಕುಸಿದಿರುವುದರಿಂದ ಕೇಂದ್ರ ಸರ್ಕಾರವೇ ಬೆಂಬಲ ಬೆಲೆಯಲ್ಲಿ ತಂಬಾಕು ಖರೀದಿ ಮಾಡಲಿ ಎಂದು ಆಗ್ರಹಿಸಲಾಯಿತು.

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷ ಅರುಣ್ ಕುಮಾರ್, ಕಾಂಗ್ರೆಸ್ ಮುಖಂಡರಾದ ನಿತಿನ್ ವೆಂಕಟೇಶ್, ಬಿ.ಎಂ.ರಾಮು, ರೈತರಾದ ಶ್ರೀನಿವಾಸ್, ಮಹೇಶ್, ಬೋರೇಗೌಡ, ಮಹದೇವಸ್ವಾಮಿ ಮತ್ತಿತರರಿದ್ದರು.

ಮೈಸೂರಿನ ಬೆಲವತ್ತದಲ್ಲಿರುವ ಕರಕುಶಲ ಅಭಿವೃದ್ಧಿ ನಿಗಮದ ಜಾಗ ಸರ್ಕಾರಿ ಯೋಜನೆಗಳಿಗೆ ಸೀಮಿತ

ಚಾಮರಾಜ ಕ್ಷೇತ್ರದ ಶಾಸಕ ಹರೀಶ್‌ಗೌಡರಿಗೆ ಸಣ್ಣ ಕೈಗಾರಿಕಾ ಸಚಿವ ಶರಣಬಸಪ್ಪ ಮಾಹಿತಿ


ಕೆ.ಹರೀಶ್‌ಗೌಡ


ಶರಣಬಸಪ್ಪ

ಮೈಸೂರು, ಮಾ.13– ಮೈಸೂರು ಚಾಮರಾಜ ಕ್ಷೇತ್ರ ವ್ಯಾಪ್ತಿಯಲ್ಲಿ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತದ ಸುಪರ್ದಿಯಲ್ಲಿರುವ ಜಾಗವನ್ನು ಸರ್ಕಾರಿ ಯೋಜನೆಗಳ ಅನುಷ್ಠಾನಕ್ಕೇ ಬಳಕೆ ಮಾಡಲಾಗುವುದು ಎಂದು ಸಣ್ಣ ಕೈಗಾರಿಕೆ ಸಚಿವ ಶರಣಬಸಪ್ಪ ದರ್ಶನಾಪುರ್ ತಿಳಿಸಿದ್ದಾರೆ.

ಈ ಸಂಬಂಧ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ಪ್ರಶ್ನೆಗಳಿಗೆ ವಿಧಾನಸಭೆಯಲ್ಲಿ ವಿವರಣೆ ನೀಡಿ, ನಿಗಮದ ಸುಪರ್ದಿಯಲ್ಲಿರುವ ಜಾಗವನ್ನು ಅನ್ಯ ಕಾರ್ಯಕ್ಕೆ ಬಳಕೆ ಮಾಡಲು ಅವಕಾಶ ನೀಡುವುದಿಲ್ಲ ಎಂದು ಭರವಸೆ ನೀಡಿದ್ದಾರೆ.

ಮೈಸೂರಿನ ಮೇಟಗಳ್ಳಿ, ಬೆಲವತ್ತ ಗ್ರಾಮದಲ್ಲಿ ಕರಕುಶಲನಗರ ಸ್ಥಾಪಿಸಲು ಸರ್ಕಾರದ ಆದೇಶ 24–04–1987 ಪ್ರಕಾರ 18.11 ಎಕರೆ ಜಮೀನು ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಹಂಚಿಕೆಯಾಗಿದೆ. ಸದರಿ ಜಮೀನಿನಲ್ಲಿ ಮೈಸೂರಿನಲ್ಲಿ ಕಲಾಕೃತಿಗಳನ್ನು ಸಿದ್ಧಪಡಿಸುವ ಕರಕುಶಲಕರ್ಮಿಗಳಿಗೆ ಪ್ರೋತ್ಸಾಹ ಹಾಗೂ ಅವರ ಶ್ರೇಯೋಭಿವೃದ್ಧಿಗಾಗಿ ಕಲಾ ಸಂಕೀರ್ಣ ಮತ್ತು ಎರಡು ಸಾಮಾನ್ಯ ಸೌಲಭ್ಯ ಕೇಂದ್ರವನ್ನು ಸ್ಥಾಪಿಸಿ ಒಟ್ಟು 480 ವಸತಿ ಗೃಹಗಳನ್ನು ನಿರ್ಮಿಸಿ, ಅವುಗಳನ್ನು ಅರ್ಹ ಕರಕುಶಲಕರ್ಮಿಗಳಿಗೆ ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿದರು.

ಖಾಲಿ ಉಳಿದಿರುವ 6 ಎಕರೆ 18 ಗುಂಟೆ ಜಾಗವು ಕಲಾ ಸಂಕೀರ್ಣದ ಯೋಜನಾಧಿಕಾರಿಯವರ ಸುಪರ್ದಿಯಲ್ಲಿದ್ದು, ಅಲ್ಲಿ ನಿಗಮದ ವತಿಯಿಂದ ತರಬೇತಿ ಶಿಬಿರವನ್ನು ನಡೆಸಲಾಗುತ್ತಿದೆ. ಸದರಿ ಜಾಗದಲ್ಲಿ ನಿಗಮದ ಆಸ್ತಿ ಎಂಬ ಫಲಕಗಳನ್ನು ಅಳವಡಿಸಲಾಗಿದೆ. ಕರಕುಶಲ ಚಟುವಟಿಕೆಗಳಿಗೆ ಕೇಂದ್ರ ಅಥವಾ ರಾಜ್ಯ ಸರ್ಕಾರಗಳಿಂದ ನೀಡುವ ಯೋಜನೆಗಳ ಉದ್ದೇಶಕ್ಕೆ ಅಥವಾ ನಿಗಮದಿಂದ ಮುಂದೆ ಯೋಜಿಸುವ ಕೆಲಸಗಳಿಗಾಗಿ ಈ ಸ್ಥಳವನ್ನು ಬಳಕೆ ಮಾಡಲಾಗುತ್ತದೆ. ಸಾಮಾನ್ಯ ಸೌಲಭ್ಯ ಕೇಂದ್ರದಲ್ಲಿ ಸರ್ಕಾರಗಳ ಯೋಜನೆಯನ್ವಯ ನೋಂದಾಯಿತ ಕರಕುಶಲಕರ್ಮಿಗಳಿಗೆ ತರಬೇತಿ ಹಾಗೂ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗುತ್ತದೆ ಎಂದು ವಿವರಣೆ ನೀಡಿದ್ದಾರೆ.

ದೇಶ – ವಿದೇಶ

ಪಾಕಿಸ್ತಾನದ ಮೇಲೆ ಅಫ್ಘಾನಿಸ್ತಾನದಿಂದ ಪ್ರತೀಕಾರದ ಡ್ರೋನ್ ದಾಳಿ

ಇಸ್ಲಾಮಾಬಾದ್, ಮಾ.13– ಪಾಕಿಸ್ತಾನ ಖೈಬರ್ ಪಖ್ತುನ್ಖ್ವಾದ ಕೊಹಾತ್ ಪ್ರದೇಶದಲ್ಲಿರುವ ಪಾಕ್ ಸೇನೆಯ ಕಾರ್ಯತಂತ್ರದ ಮಿಲಿಟರಿ ಕೇಂದ್ರಗಳು ಮತ್ತು ನೆಲೆಗಳ ಮೇಲೆ ಅಫ್ಘಾನಿಸ್ತಾನ ಶುಕ್ರವಾರ ಪ್ರತೀಕಾರದ ಡ್ರೋನ್ ದಾಳಿ ನಡೆಸಿದೆ ಎಂದು ಅಫ್ಘಾನಿಸ್ತಾನ ರಕ್ಷಣಾ ಸಚಿವಾಲಯ ತಿಳಿಸಿದೆ.

ಪ್ರತೀಕಾರದ ದಾಳಿಯ ಸಮಯದಲ್ಲಿ ಡುರಾಂಡ್ ರೇಖೆಯ ಉದ್ದಕ್ಕೂ ಇರುವ ಯುದ್ಧ ಕಮಾಂಡ್ ಕೇಂದ್ರವಾದ ಪಾಕಿಸ್ತಾನದ ಕೊಹಾತ್ ಮಿಲಿಟರಿ ಕೋಟೆ ಮತ್ತು ಕೋಟೆಯ ಕಮಾಂಡರ್ ಕಚೇರಿಗೆ ಗಮನಾರ್ಹ ಹಾನಿಯಾಗಿದೆ ಎಂದು ಅಫ್ಘಾನಿಸ್ತಾನ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.

ಕೋಟೆಯ ಮಿಲಿಟರಿ ನೆಲೆಗಳು, ಕಮಾಂಡ್ ಸೆಂಟರ್, ಡಿಪೋಗಳು ಮತ್ತು ಸೈನಿಕರ ವಸತಿ ಆವರಣಗಳನ್ನು ನಾಶ ಮಾಡಲಾಗಿದೆ. ದಾಳಿಯಲ್ಲಿ ಹಲವರು ಮೃತಪಟ್ಟಿದ್ದಾರೆ ಮತ್ತು ಭಾರಿ ಪ್ರಮಾಣದಲ್ಲಿ ಆಸ್ತಿ ಹಾನಿಯಾಗಿದೆ ಎಂದು ಅಫ್ಘಾನಿಸ್ತಾನದ ರಕ್ಷಣಾ ಸಚಿವಾಲಯ ತಿಳಿಸಿದೆ.

ಮೂಲಗಳ ಪ್ರಕಾರ, ಕೊಹಾತ್ ಮಿಲಿಟರಿ ಕೋಟೆಯನ್ನು ಪಾಕಿಸ್ತಾನದ ಪ್ರಮುಖ ಮಿಲಿಟರಿ ಕೇಂದ್ರವೆಂದು ಪರಿಗಣಿಸಲಾಗಿದೆ. ಇದು ಪರಚಿನಾರ್, ಸದ್ದಾ, ಖೈಬರ್ ಮತ್ತು ಕುರ್ರಮ್ ಏಜೆನ್ಸಿಯಂತಹ ಪ್ರದೇಶಗಳಿಗೆ ಮಿಲಿಟರಿ ಲಾಜಿಸ್ಟಿಕ್ಸ್ ಮತ್ತು ಕಾರ್ಯಾಚರಣೆಯ ಬೆಂಬಲವನ್ನು ಒದಗಿಸುತ್ತದೆ.

ಮುಟ್ಟಿನ ರಜೆ ಬೇಡಿಕೆ ತಿರಸ್ಕರಿಸಿದ ಸುಪ್ರೀಂ



ನವದೆಹಲಿ, ಮಾ.13– ಮಹಿಳೆಯರಿಗೆ ಕಡ್ಡಾಯ ಮುಟ್ಟಿನ ರಜೆ ಕಾನೂನು ತರುವ ಬೇಡಿಕೆಯನ್ನು ಸುಪ್ರೀಂಕೋರ್ಟ್ ತಿರಸ್ಕರಿಸಿದ್ದು, ಇದರಿಂದ ಉದ್ಯೋಗದ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು ಎಂದು ಅಭಿಪ್ರಾಯಪಟ್ಟಿದೆ.

ಮುಟ್ಟಿನ ರಜೆಗಾಗಿ ಕಡ್ಡಾಯ ಕಾನೂನು ತರಬೇಕು ಎನ್ನುವ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್, ಮಾಲೀಕರು ಮಹಿಳೆಯರನ್ನು ನೇಮಿಸಿಕೊಳ್ಳಲು ಹಿಂಜರಿಯಬಹುದು, ಮಹಿಳೆಯರಲ್ಲಿ ಕೀಳರಿಮೆ ಬೆಳೆಯಬಹುದು. ಇಂತಹ ಕಾನೂನು ಅವರ ವೃತ್ತಿಜೀವನವನ್ನು ಅಂತ್ಯಗೊಳಿಸಬಹುದು ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಆತಂಕ ವ್ಯಕ್ತಪಡಿಸಿದ್ದಾರೆ.

ಈ ವೇಳೆ ಮುಖ್ಯ ನ್ಯಾಯಮೂರ್ತಿಗಳು ಮಾತನಾಡಿ, ಈ ಕಾನೂನನ್ನು ಕಡ್ಡಾಯ ಮಾಡಿದರೆ ಹೆಣ್ಣುಮಕ್ಕಳಿಗೆ ಯಾರೂ ಕೆಲಸ ಕೊಡುವುದಿಲ್ಲ ಬದಲಾಗಿ, ಅಲ್ಲಿಗೆ ಅವರ ವೃತ್ತಿ ಜೀವನ ಕೊನೆಗೊಳ್ಳುತ್ತದೆ, ನೀವು ಮನೆಯಲ್ಲಿಯೇ ಕುಳಿತುಕೊಳ್ಳಿ ಎಂದು ಹೇಳುತ್ತಾರೆ. ಜಾಗೃತಿ ಮೂಡಿಸುವುದು ಮತ್ತು ಸಂವೇದನೆ ಮೂಡಿಸುವುದು ಬೇರೆ, ಆದರೆ ಮುಟ್ಟಿನ ರಜೆಯನ್ನು ಕಡ್ಡಾಯಗೊಳಿಸುವ ಕಾನೂನನ್ನು ನೀವು ತಂದ ತಕ್ಷಣ, ಯಾರೂ ಅವರನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದಿಲ್ಲ ಎಂದು ಅಭಿಪ್ರಾಯಪಟ್ಟಿದೆ.

ಇರಾಕ್‌ನಲ್ಲಿ ಅಮೆರಿಕಾದ ಸೇನಾ ವಿಮಾನ ಪತನ; ನಾಲ್ವರು ಸಿಬ್ಬಂದಿ ಸಾವು



ವಾಷಿಂಗ್ಟನ್, ಮಾ.13– ಇರಾನ್ ವಿರುದ್ಧ ನಡೆಯುತ್ತಿರುವ ಸೇನಾ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ಅಮೆರಿಕದ ಇಂಧನ ತುಂಬುವ ವಿಮಾನ ಇರಾಕ್‌ನಲ್ಲಿ ಪತನಗೊಂಡಿದ್ದು, ನಾಲ್ವರು ಸಿಬ್ಬಂದಿ ಸಾವನ್ನಪ್ಪಿದ್ದಾರೆ.

ಪಶ್ಚಿಮ ಇರಾಕ್‌ನಲ್ಲಿ ಅಪಘಾತಕ್ಕೀಡಾದ ಯುಎಸ್ ಮಿಲಿಟರಿ ಕೆಸಿ –135 ಇಂಧನ ತುಂಬುವ ವಿಮಾನದಲ್ಲಿದ್ದ ಆರು ಸಿಬ್ಬಂದಿಗಳಲ್ಲಿ ನಾಲ್ವರು ಸಾವನ್ನಪ್ಪಿದ್ದಾರೆ ಎಂದು ಅಮೆರಿಕನ್ ಮಿಲಿಟರಿ ಯುಎಸ್ ಸೆಂಟ್ರಲ್ ಕಮಾಂಡ್ ಘೋಷಿಸಿದೆ.

ಸೆಂಟ್ರಲ್ ಕಮಾಂಡ್ ಮಾಹಿತಿ ಪ್ರಕಾರ, ಈ ಕಾರ್ಯಾಚರಣೆಯಲ್ಲಿ ಎರಡು ವಿಮಾನಗಳು ಭಾಗಿಯಾಗಿದ್ದು, ಒಂದು ವಿಮಾನ ಸುರಕ್ಷಿತವಾಗಿ ಇಳಿದಿದ್ದರೆ ಮತ್ತೊಂದು ಪಶ್ಚಿಮ ಇರಾಕ್‌ನಲ್ಲಿ ಪತನಗೊಂಡಿದೆ. ರಕ್ಷಣಾ ಕಾರ್ಯ ಮುಂದುವರಿದಂತೆ ವಿಮಾನದಲ್ಲಿದ್ದ ಆರು ಸಿಬ್ಬಂದಿಗಳಲ್ಲಿ ನಾಲ್ವರು ಸಾವನ್ನಪ್ಪಿದ್ದಾರೆ ಎಂದು ದೃಢಪಡಿಸಲಾಗಿದೆ.

ಘಟನೆ ಕುರಿತು ತನಿಖೆ ಪ್ರಗತಿಯಲ್ಲಿದೆ. ಆದಾಗ್ಯೂ, ಯಾವುದೇ ವಿಪತ್ತು ಅಥವಾ ಬೆಂಕಿಯಿಂದ ವಿಮಾನ ಪತನಗೊಂಡಿಲ್ಲ ಎಂದು ಯುಎಸ್ ಸೆಂಟ್ರಲ್ ಕಮಾಂಡ್ ಹೇಳಿಕೆಯಲ್ಲಿ ತಿಳಿಸಿದೆ. ಇರಾನ್ ವಿರುದ್ಧ ನಡೆಯುತ್ತಿರುವ ಯುದ್ಧ ಕಾರ್ಯಾಚರಣೆಗಳ ನಡುವೆ ಅಮೆರಿಕದ ನಾಲ್ಕನೇ ವಿಮಾನ ಪತನ ಘಟನೆ ಇದಾಗಿದೆ.

ಇರಾನಿನ ರೆಡ್ ಕ್ರೆಸೆಂಟ್ ಸೊಸೈಟಿಗೆ ಚೀನಾ 2 ಲಕ್ಷ ಡಾಲರ್ ನೆರವು

ಅಮೆರಿಕ ದಾಳಿ ಖಂಡಿಸಿದ ಬೀಜಿಂಗ್



ಬೀಜಿಂಗ್, ಮಾ.13– ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಗುವೊ ಜಿಯಾಕುನ್ ಅವರು ಶುಕ್ರವಾರ ಇರಾನಿನ ರೆಡ್ ಕ್ರೆಸೆಂಟ್ ಸೊಸೈಟಿಗೆ 200,000 ಡಾಲರ್ ಮೌಲ್ಯದ ನೆರವು ನೀಡುವುದಾಗಿ ಹೇಳಿದ್ದಾರೆ ಎಂದು ಚೀನಾ ಡೈಲಿ ವರದಿ ಮಾಡಿದೆ.

ಇರಾನ್‌ನಲ್ಲಿ ನಾಗರಿಕರು ಮತ್ತು ಮಿಲಿಟರಿಯೇತರ ಟಾರ್ಗೆಟ್‌ಗಳ ಮೇಲಿನ ವಿವೇಚನಾರಹಿತ ದಾಳಿಯನ್ನು ಬೀಜಿಂಗ್ ಖಂಡಿಸುತ್ತದೆ ಎಂದು ಅವರು ತಿಳಿಸಿದ್ದಾರೆ.

ಇದಕ್ಕೂ ಮೊದಲು, ಪಶ್ಚಿಮ ಏಷ್ಯಾ ಸಂಘರ್ಷದಲ್ಲಿ ಭಾಗಿಯಾಗಿರುವ ಎಲ್ಲಾ ದೇಶಗಳೊಂದಿಗೆ ಸಂಪರ್ಕದಲ್ಲಿರಲು ಚೀನಾ ಇಚ್ಛೆ ವ್ಯಕ್ತಪಡಿಸಿದೆ ಎಂದು ಜಿಯಾಕುನ್ ಹೇಳಿರುವುದಾಗಿ ಚೀನಾ ಡೈಲಿ ವರದಿ ಮಾಡಿದೆ.

ಮಾಧ್ಯಮ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದ ಜಿಯಾಕುನ್, ಸಂಘರ್ಷದಲ್ಲಿ ನೇರವಾಗಿ ಭಾಗಿಯಾಗಿರುವ ದೇಶಗಳು ಸೇರಿದಂತೆ ಎಲ್ಲಾ ಸಂಬಂಧಿತ ರಾಷ್ಟ್ರಗಳೊಂದಿಗೆ ಸಂವಹನವನ್ನು ಬಲಪಡಿಸುವುದನ್ನು ಮುಂದುವರಿಸುತ್ತದೆ ಮತ್ತು ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆಯನ್ನು ಕಡಿಮೆ ಮಾಡುವ ಮತ್ತು ಶಾಂತಿ ಪುನಃಸ್ಥಾಪಿಸುವಲ್ಲಿ ರಚನಾತ್ಮಕ ಪಾತ್ರ ವಹಿಸುತ್ತದೆ ಎಂದು ಹೇಳಿದ್ದಾರೆ.

ದುಬೈನಲ್ಲಿ ಮತ್ತೆ ಸ್ಫೋಟ: ಬುರ್ಜ್ ಖಲೀಫಾ ಬಳಿ ದಟ್ಟ ಕಪ್ಪು ಹೊಗೆ!


ದುಬೈ, ಮಾ.13– ಇರಾನ್ ವಿರುದ್ಧ ಇಸ್ರೇಲ್, ಅಮೆರಿಕ ಜಂಟಿಯಾಗಿ ನಡೆಸುತ್ತಿರುವ ಯುದ್ಧ 14ನೇ ದಿನಕ್ಕೆ ಕಾಲಿಟ್ಟಿರುವಂತೆಯೇ ಕೊಲ್ಲಿ ರಾಷ್ಟ್ರಗಳ ಮೇಲೆ ದಾಳಿ ಮುಂದುವರೆದಿದೆ.

ಜಗತ್ತಿನ ಅತ್ಯಂತ ಎತ್ತರದ ಕಟ್ಟಡವಿರುವ ದುಬೈನ ಬುರ್ಜ್ ಖಲೀಜಾ ಬಳಿ ಶುಕ್ರವಾರವೂ ಭಾರಿ ಸ್ಫೋಟದ ಸದ್ದು ಕೇಳಿಬಂದಿದೆ. ಬಳಿಕ ನಗರದ ಕೇಂದ್ರ ಭಾಗದಲ್ಲಿ ದಟ್ಟವಾದ ಹೊಗೆ ಕಂಡುಬಂದಿದೆ. ಕೇಂದ್ರ ಜಿಲ್ಲೆಯಲ್ಲಿ ದಟ್ಟವಾದ ಕಪ್ಪು ಹೊಗೆ ಹೇಗೆ ಆವರಿಸಿತು ಎಂದು ವರದಿಗಾರರೊಬ್ಬರು ಘಟನೆಯನ್ನು ವರದಿ ಮಾಡಿದ್ದಾರೆ.

ಮಧ್ಯ ದುಬೈನ ಕಟ್ಟಡದ ಹೊರಭಾಗದಲ್ಲಿ ಸಣ್ಣ ಪ್ರಮಾಣದ ದಾಳಿಯಾಗಿದೆ ಆದರೆ ಯಾರೂ ಕೂಡಾ ಗಾಯಗೊಂಡಿಲ್ಲ ಎಂದು ದುಬೈ ಮಾಧ್ಯಮ ಕಚೇರಿ ಹೇಳಿದೆ. ಇಲ್ಲಿಯವರೆಗೂ ಯಾವುದೇ ಗಾಯದ ಕುರಿತು ವರದಿಯಾಗಿಲ್ಲ.

ದುಬೈನ ಪ್ರಮುಖ ಪ್ರದೇಶವಾದ ಶೇಖ್ ಜಾಯೆದ್ ರಸ್ತೆಯ ದಿಕ್ಕಿನಿಂದ ಸೈರನ್‌ಗಳು ಬರುತ್ತಿವೆ ಎಂದು ಮಾಧ್ಯಮಗಳು ವರದಿ ಮಾಡಿದೆ. ಘಟನೆಯ ನಂತರ ದುಬೈ ಪೊಲೀಸರು ಸ್ಥಳಕ್ಕೆ ತಲುಪಿದ್ದು, ಪರಿಶೀಲನೆ ನಡೆಸಿದ್ದಾರೆ. ಕಟ್ಟಡಕ್ಕೆ ಗಮನಾರ್ಹ ಹಾನಿಯಾಗಿದೆ. ದುಬೈ ಇಂಟರ್‌ನ್ಯಾಶನಲ್ ಫೈನಾನ್ಶಿಯಲ್ ಸೆಂಟರ್ (ಡಿಐಎಫ್‌ಸಿ) ನಲ್ಲಿ ಈ ಘಟನೆ ನಡೆದಿದೆ. ಈ ಹಿಂದೆ ಗುರುವಾರವೂ ದುಬೈನ ಡೌನ್ ಟೌನ್‌ನಲ್ಲಿ ಸಣ್ಣ ಡ್ರೋನ್ ದಾಳಿ ನಡೆದಿತ್ತು ಎಂದು ದುಬೈ ಸರ್ಕಾರದ ಮಾಧ್ಯಮ ಕಚೇರಿಯು ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದೆ.

ಸಿದ್ದಾಪುರದಲ್ಲಿ ಉಪಟಳ ನೀಡುತ್ತಿದ್ದ ಕಾಡಾನೆ ಸೆರೆ



ಸಿದ್ದಾಪುರದ ಬಳಿ ಸೆರೆಸಿಕ್ಕ ಕಾಡಾನೆ. ಸಾಕಾನೆಗಳ ಸಹಕಾರದೊಂದಿಗೆ ದುಬಾರೆ ಶಿಬಿರಕ್ಕೆ ಸ್ಥಳಾಂತರಿಸುತ್ತಿರುವುದು.

ಮಡಿಕೇರಿ, ಮಾ.13–ಕಾಡಿನಲ್ಲಿ ಬೀಡು ಬಿಟ್ಟು ಫಸಲನ್ನು ನಾಶ ಮಾಡಿ ಮೂವರನ್ನು ಬಲಿ ತೆಗೆದು ಕೊಂಡಿದ್ದ ಕಾಡಾನೆಯನ್ನು ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಸಿಬ್ಬಂದಿಗಳು ಯಶಸ್ವಿಯಾಗಿದ್ದಾರೆ

ಸಿದ್ದಾಪುರ ಬಳಿ ಕಾಫಿ ತೋಟವೊಂದರ ಬೆಳಗಾರರೊಬ್ಬರನ್ನು ಬಲಿ ತೆಗೆದು ಕೊಂಡಿದ್ದ ಕಾಡಾನೆ ಹಾಡಹಗಲಿನಲ್ಲೇ ರಾಜಾರೋಷವಾಗಿ ಕಾಣಿಸಿಕೊಂಡು ಸ್ಥಳೀಯರಲ್ಲಿ ಆತಂಕ ಸೃಷ್ಟಿ ಮಾಡಿತ್ತು. ಇದನ್ನು ಸೆರೆ ಹಿಡಿಯಬೇಕೆಂದು ಜನ ಪ್ರತಿನಿಧಿಗಳು ಹಾಗೂ ಸ್ಥಳೀಯರು ಪ್ರತಿಭಟನೆ ನಡೆಸಿದ್ದರು. ಕೂಡಲೇ ಕಾಡಾನೆಯನ್ನು ಸೆರೆ ಹಿಡಿಯುವಂತೆ ಶಾಸಕ ಪೊನ್ನಣ್ಣ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

ಅರಣ್ಯ ಇಲಾಖೆ ದುಬಾರೆ ಶಿಬಿರದ ಸುಗ್ರೀವ ಪ್ರಶಾಂತ್, ಕಂಜನ್, ಹರ್ಷ, ಅಯ್ಯಪ್ಪ, ಧನಂಜಯ ಸಾಕಾನೆಗಳ ಸಹಕಾರದೊಂದಿಗೆ ಬೆಳಗಿನಿಂದಲೇ ಕಾರ್ಯಾಚರಣೆ ನಡೆಸಿದಾಗ ಅಮ್ಮತಿ ಭಾಗದಲ್ಲಿ ಕಾಡಾನೆ ಕಾಣಿಸಿಕೊಂಡಿದೆ. ಸಾಕಾನೆಗಳನ್ನು ಕಂಡು ಓಡಲಾರಂಭಿಸಿತು. ಅರಣ್ಯ ಇಲಾಖೆ ಸಿಬ್ಬಂದಿಗಳು ಸುಮಾರು 9ಕಿಮೀನಷ್ಟು ಸಾಕಾನೆಗಳೊಂದಿಗೆ ಹಿಂಬಾಲಿಸಿದರು. ನಂತರ ಪಾಲಿಬೆಟ್ಟ ಸಮೀಪದ ಕಾಫಿ ತೋಟದಲ್ಲಿ ಕಾಣಿಸಿಕೊಂಡು ಮತ್ತೆ ಓಡಿ ಕೊನೆಗೆ ಎಮ್ಮೆಗುಂಡಿ ಮಾರ್ಗವಾಗಿ ಚೆನ್ನಯನಕೋಟೆ ವ್ಯಾಪ್ತಿಯ ಕಾಫಿ ತೋಟದಲ್ಲಿ ಪತ್ತೆಯಾದಾಗ ಶಾರ್ಪ್ ಶೂಟರ್ ರಂಜನ್, ಡಾಕ್ಟರ್ ರಮೇಶ್ ಬಂದೂಕಿನ ಮೂಲಕ ಅರವಳಿಕೆ ಚುಚ್ಚುವುದ್ದು ನೀಡಿ ಪ್ರಜ್ಞೆ ತಪ್ಪುವಂತೆ ಮಾಡಿದರು. ಸಾಕಾನೆಗಳ ಸಹಕಾರದೊಂದಿಗೆ ಹಗ್ಗದಿಂದ ಕಟ್ಟಿ ಆನೆಯನ್ನು ಮುಖ್ಯ ರಸ್ತೆಗೆ ತರಲಾಯಿತು. ಸ್ಥಳಕ್ಕೆ ಸಿಸಿಎಫ್ ಸೋನಾಲ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜಾ ಉತ್ತಪ್ಪ, ಮಡಿಕೇರಿ ಡಿಸಿಎಫ್ ಅಭಿಷೇಕ್, ವಿರಾಜ ಪೇಟೆ ಡಿಎಫ್ ಜಗನ್ನಾಥ್, ಎಸಿಎಫ್ ತಸ್ಲೀಮ ಬಾನು, ಗೋಪಾಲ್, ಆರ್‌ಎಫ್‌ಓ ಶಿವಾರಾಮ್, ಗಂಗಾಧರ್, ಇಟಿ ಎಫ್‌ಆರ್‌ಎಫ್ ಅಮೃತ, ಡಿಆರ್‌ಎಫ್ ಓ ಸಂದೀಪ್ ಸೋಮಯ್ಯ, ಶಶಿ, ದೇವರಾಜ್, ದಿವಾಕರ್ ಸೇರಿದಂತೆ ಈ ಟಿಎಫ್ ಆರ್‌ಆರ್‌ಸಿ ಸಿಬ್ಬಂದಿಗಳು ಹಾಜರಿದ್ದರು. ಸೆರೆ ಹಿಡಿದ ಕಾಡಾನೆ ಯನ್ನು ದುಬಾರೆ ಶಿಬಿರಕ್ಕೆ ಕಳಿಸಲಾಯಿತು.

ಕಾಡಾನೆ ಹಾವಳಿ: ಬಿಜೆಪಿ ಬೃಹತ್ ಪ್ರತಿಭಟನೆ


ಕಾಡಾನೆ ಹಾವಳಿ ನಿಯಂತ್ರಿಸಲು ಸರ್ಕಾರದ ನಿರ್ಲಕ್ಷ್ಯ ಖಂಡಿಸಿ ಬಿಜೆಪಿ ರಸ್ತೆ ತಡೆ ನಡೆಸಿತು.

ಮಡಿಕೇರಿ, ಮಾ.13– ಕಾಡಾನೆಗಳ ದಾಂಧಲೆ ದಿನದಿಂದ ದಿನಕ್ಕೆ ಮಿತಿ ಮೀರುತ್ತಿದ್ದರೂ, ಸಮಸ್ಯೆ ಬಗೆಹರಿಸುವಲ್ಲಿ ಅರಣ್ಯ ಇಲಾಖೆ ಅಗತ್ಯ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆರೋಪಿಸಿ ಜಿಲ್ಲಾ ಬಿಜೆಪಿ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿತು.

ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಜಿ ವಿಧಾನ ಸಭಾಧ್ಯಕ್ಷ ಕೆ.ಜಿ. ಬೋಪಯ್ಯ, ಮಾಜಿ ಸಚಿವ ಅಪ್ಪಚ್ಚು ರಂಜನ್ ನೇತೃತ್ವದಲ್ಲಿ ಶುಕ್ರವಾರ ಬೆಳಗ್ಗೆ ನಗರದ ಅರಣ್ಯ ಭವನದ ಮುಂಭಾಗ ರಾಜ್ಯ ಸರ್ಕಾರ, ಮುಖ್ಯಮಂತ್ರಿಗಳು, ಅರಣ್ಯ ಸಚಿವರು ಮತ್ತು ಜಿಲ್ಲೆಯ ಶಾಸಕರುಗಳ ವಿರುದ್ಧ ಧಿಕ್ಕಾರದ ಘೋಷಣೆಗಳೊಂದಿಗೆ ಅರಣ್ಯ ಇಲಾಖೆ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಸಿದ್ದಾಪುರ ವಿಭಾಗದಲ್ಲಿ ಇಬ್ಬರು ವ್ಯಕ್ತಿಗಳು ಹಾಗೂ ಬೆಟ್ಟತ್ತೂರು ಗ್ರಾಮ ದಲ್ಲಿ ಓರ್ವ ವಿದ್ಯಾರ್ಥಿನಿ ಸೇರಿದಂತೆ ಕೆಲವು ದಿನಗಳ ಅವಧಿಯಲ್ಲಿ ಐದಾರು ಮಂದಿ ಕಾಡಾನೆ ದಾಳಿಗೆ ಬಲಿಯಾಗಿದ್ದಾರೆ. ಹೀಗಿದ್ದೂ ಸರ್ಕಾರ ಸಮಸ್ಯೆ ಬಗೆಹರಿಕೆಗೆ ಸೂಕ್ತ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ತಾಳಿದೆ. ತಕ್ಷಣವೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಪೊಲೀಸರು ಹಾಕಿದ್ದ ಬ್ಯಾರಿಕೇಡ್‌ಗಳನ್ನು ತಳ್ಳಿ ಅರಣ್ಯ ಭವನದ ಕಚೇರಿಗೆ, ಪ್ರತಿಭಟನಾಕಾರರು ನುಗ್ಗಲು ಯತ್ನಿಸಿದ ಘಟನೆಯೂ ನಡೆಯಿತು. ಈ ಹೊತ್ತಿನಲ್ಲಿ ಪೊಲೀಸರು ಪ್ರತಿಭಟನಾಕಾರರ ನಡುವೆ ನೂಕಾಟ ತಳ್ಳಾಟಗಳ ಸಹಿತ ತೀವ್ರ ಮಾತಿನ ಚಕಮಕಿ ನಡೆದವು.

ಸ್ಥಳಕ್ಕೆ ಮುಖ್ಯ ಅರಣ್ಯ ಸಂರಕ್ಷಣಾದಿಕಾರಿ ಸೋನಲ್ ವೃಷ್ಟಿ ಸ್ಥಳಕ್ಕೆ ಬರುವಂತೆ ಆಗ್ರಹಿಸಿ ಕೆಲಕಾಲ ರಸ್ತೆತಡೆ ನಡೆಸಿದರು.

ಸುನಿಲ್ ಸುಬ್ರಮಣಿ, ಮೇದಪ್ಪ, ಕಲಾವತಿ, ಮಹೇಶ್ ಜೈನಿ ಮೊದಲಾದವರಿದ್ದರು.

ಜಿಲ್ಲೆಯಾದ್ಯಂತ ಸ್ವಚ್ಛತಾ ಅಭಿಯಾನ



ಮಡಿಕೇರಿ ಮಾ.13–ಸ್ವಚ್ಛ ಕೊಡಗು–ಸುಂದರ ಕೊಡಗು ಹೆಸರಿನಲ್ಲಿ ಪುಣ್ಯಕ್ಷೇತ್ರ ದೇವಾಲಯಗಳು, ಪ್ರವಾಸಿ ಸ್ಥಳಗಳು, ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ಸ್ವಚ್ಛತಾ ಅಭಿಯಾನ ಹಮ್ಮಿಕೊಳ್ಳಲು ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ನಗರದ ಉಪ ವಿಭಾಗಾಧಿಕಾರಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾ.16 ರಂದು ಜಿಲ್ಲೆಯಾದ್ಯಂತ ಎಲ್ಲಾ ಪ್ರವಾಸಿ ಸ್ಥಳಗಳು ಹಾಗೂ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಸ್ವಚ್ಛ ಕೊಡಗು–ಸುಂದರ ಕೊಡಗು ಹೆಸರಿನಲ್ಲಿ ಶುಚಿತ್ವಕ್ಕೆ ಒತ್ತು ನೀಡಲು ತೀರ್ಮಾನಿಸಲಾಯಿತು.

ಪ್ರಸಿದ್ಧ ಪುಣ್ಯ ಕ್ಷೇತ್ರಗಳಾದ ತಲಕಾವೇರಿ, ಓಂಕಾರೇಶ್ವರ ದೇವಸ್ಥಾನ, ಭಾಗಮಂಡಲ, ಪ್ರವಾಸಿ ಸ್ಥಳಗಳಾದ ತಾಲೂಕಿನ ಅಬ್ಬಿ ಜಲಪಾತ, ನಾಲ್ಕುನಾಡು ಅರಮನೆ, ರಾಜರ ಗದ್ದುಗೆ, ರಾಜಾಸೀಟು, ಕೋಟೆ, ಅಬ್ಬಿ ಜಲಪಾತ, ಚೇಲಾವರ ಜಲಪಾತ. ಕುಶಾಲ ನಗರ ತಾಲೂಕಿನ ದುಬಾರೆ ರಿವರ್ ರ‍್ಯಾಫ್ಟಿಂಗ್, ಕಾವೇರಿ ನಿಸರ್ಗಧಾಮ, ಹಾರಂಗಿ ಜಲಾಶಯ, ಹಾರಂಗಿ ಉದ್ಯಾನವನ ಆನೆ ಶಿಬಿರ ಮತ್ತು ಹಿನ್ನೀರಿನ ಸಾಹಸ ಕ್ರೀಡೆ ಸ್ಥಳಗಳು, ಚಿಕ್ಲಿ ಹೊಳೆ, ಸೋಮವಾರಪೇಟೆ ತಾಲೂಕಿನ ಹೊನ್ನಮ್ಮ ಕೆರೆ, ಮಕ್ಕಳ ಗುಡಿ ಬೆಟ್ಟ, ಕೋಟೆ ಬೆಟ್ಟ, ಸೂರ್ಲಬ್ಬಿ ಜಲಪಾತ ಮತ್ತು ಮಲ್ಲಳ್ಳಿ ಜಲಪಾತ. ಹಾಗೆಯೇ ಪೊನ್ನಂಪೇಟೆ ತಾಲೂಕಿನ ಬರ್ಪಹೊಳೆ ರಿವರ್ ರ‍್ಯಾಫ್ಟಿಂಗ್ ಮತ್ತು ಇರ್ಪು ಜಲಪಾತಗಳಲ್ಲಿ ಸ್ವಚ್ಛತಾ ಅಭಿಯಾನ ನಡೆಯಲಿದೆ.

ಹಾಗೆಯೇ ಮಡಿಕೇರಿ ನಗರದಲ್ಲಿ ವಿರಾಜಪೇಟೆ ರಸ್ತೆ ಭಾಗಮಂಡಲ–ತಲಕಾವೇರಿ ರಸ್ತೆ(ಮಂಗಳೂರು ರಸ್ತೆ), ಮಡಿಕೇರಿ–ಸಿದ್ದಾಪುರ ರಸ್ತೆ ಮತ್ತು ಮಡಿಕೇರಿ–ಮೈಸೂರು ರಸ್ತೆ ಈ ವ್ಯಾಪ್ತಿಯ 2 ಕಿ.ಮೀ ವರೆಗೆ ಸ್ವಚ್ಛತಾ ಅಭಿಯಾನ ನಡೆಯಲಿದೆ. ಕುಶಾಲನಗರದಲ್ಲಿ ಕೊಪ್ಪ ಗೇಟಿನಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದವರೆಗೆ, ಸೋಮೇಶ್ವರ ದೇವಸ್ಥಾನದಿಂದ ಕೋಣ ಮಾರಮ್ಮ ದೇವಸ್ಥಾನ ವೃತ್ತದ ಮುಖಾಂತರ ಐಬಿ ರಸ್ತೆಗಾಗಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದವರೆಗೆ, ತಾವರೆಕೆರೆಯಿಂದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ದವರೆಗೆ ಮತ್ತು ಅಯ್ಯಪ್ಪ ಸ್ವಾಮಿ ದೇವಸ್ಥಾನದಿಂದ ಕೆಎಸ್‌ಆರ್‌ಸಿ ಬಸ್ ನಿಲ್ದಾಣದವರೆಗೆ ಸ್ವಚ್ಛ ಕೊಡಗು–ಸುಂದರ ಕೊಡಗು ಹೆಸರಿನಲ್ಲಿ ಸ್ವಚ್ಛತಾ ಅಭಿಯಾನ ಕೈಗೊಳ್ಳಲು ತೀರ್ಮಾನಿಸಲಾಯಿತು.

ತಹಸೀಲ್ದಾರ್ ಶ್ರೀಧರ, ಪ್ರಾಂಶುಪಾಲ ರಾಘವ, ಉತ್ತಪ್ಪ, ಜತಿನ್, ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು, ಪಿಡಿಓ, ವಿವಿಧ ಕಾಲೇಜಿನ ಪ್ರಾಂಶುಪಾಲರು ಇದ್ದರು.

ವಿರಾಜಪೇಟೆ ಪುರಸಭೆಗೆ ಹರಾಜಿನಲ್ಲಿ ಕಡಿಮೆ ಆದಾಯ


ಪುರಸಭೆಯ ವಾರ್ಷಿಕ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ ಅಧಿಕಾರಿಗಳು.

ವಿರಾಜಪೇಟೆ, ಮಾ.13– ಪುರಸಭೆಯ ವಾರ್ಷಿಕ ಹರಾಜಿನಲ್ಲಿ 18 ಲಕ್ಷದ 82000 ಸಾವಿರ ರೂ. ಕಡಿಮೆ ಅದಾಯ ಬಂದಿದೆ. ವಾರ್ಷಿಕ ಹರಾಜಿನಲ್ಲಿ ಭಾಗವಹಿಸಿದ ಮಳಿಗೆ ಆಕಾಂಕ್ಷಿಗಳು ಅಸಕ್ತಿ ವಹಿಸದೆ ಇರುವುದರಿಂದ ಕಡಿಮೆ ಮೊತ್ತದ ಅದಾಯ ಪುರಸಭೆಗೆ ಲಭಿಸಿದೆ ಎಂದು ಮುಖ್ಯಾಧಿಕಾರಿ ನಾಚಪ್ಪ ತಿಳಿಸಿದರು.

ಕಳೆದ ಸಾಲಿನ ಹರಾಜಿನಲ್ಲಿ ಪುರಸಭೆಗೆ 38 ಲಕ್ಷದ 34 ಸಾವಿರ ರೂ ಅದಾಯ ಬಂದಿತ್ತು. ಈ ಬಾರಿ ಹಲವು ಮಳಿಗೆ ಕಡಿಮೆ ಮೊತ್ತಕ್ಕೆ ಹರಾಜಾದ ಕಾರಣ 19 ಲಕ್ಷದ 52 ಸಾವಿರ ರೂಗಳ ಕಡಿಮೆ ಅದಾಯ ಬಂದಿದೆ. ಆದರಿಂದ 4 ಹಸಿ ಮೀನು ಮಳಿಗೆ ಕುರಿಮಾಂಸದ ಮಳಿಗೆ 5 ಮತ್ತು ಕೋಳಿ ಮಳಿಗೆ 3 ಮತ್ತು ವಾಹನ ಶುಲ್ಕ ಎತ್ತುವಳಿ ಹರಾಜನ್ನು ಮತ್ತೆ ಕರೆಯಲಾಗುತ್ತದೆ ಎಂದು ಅವರು ಹೇಳಿದರು.

ಸಭೆಯ ಆರಂಭದಲ್ಲಿ ಪಟ್ರಪಂಡ ರಘು ನಾಣಯ್ಯ, ಪಿ.ಕೆ ಮಹ್ಮದ್ ಮತ್ತಿತರರು ಮಾತನಾಡಿ ಗ್ರಾಪಂನಲ್ಲಿ 25 ಸಾವಿರದಂತೆ ವಾರ್ಷಿಕ ಹರಾಜಿನಲ್ಲಿ ವಹಿವಾಟಿಗೆ ಅವಕಾಶ ಇದೆ. ಆದರೆ ಪುರಸಭೆಯಲ್ಲಿ 25 ಲಕ್ಷಕ್ಕೂ ಹೆಚ್ಚು ಹಣ ಕಟ್ಟಿ ಮಳಿಗೆ ಪಡೆದು ಮೀನು ಇತ್ಯಾದಿಯನ್ನು ಜನರಿಗೆ ಕಡಿಮೆ ಬೆಲೆಯಲ್ಲಿ ನೀಡಲು ಸಾಧ್ಯ ಈ ಬಗ್ಗೆ ಪುರಸಭೆ ಸೂಕ್ತ ನಿರ್ಧಾರ ತಳೆಯಬೇಕೆಂದು ಆಗ್ರಹಿಸಿದರು.

ಮುಖ್ಯಾಧಿಕಾರಿ ನಾಚಪ್ಪ ಹಿಂದಿನಿಂದ ಈ ರೀತಿ ಹರಾಜು ನಡೆಯುತ್ತಿದ್ದು ನಿಯಮದಂತೆ ನಾವು ಹೆಚ್ಚಿನ ದರವನ್ನು ಹರಾಜಿನಲ್ಲಿ ಪಡೆಯಬೇಕಿದೆ ಎಂದರು.

ಈ ಸಂದರ್ಭ ಕೆಲವು ವರ್ತಕರು ಸಭೆಯಲ್ಲಿ ಪಂಜರುಪೇಟೆಯಲ್ಲಿ ಮುಖ್ಯ ರಸ್ತೆಯಲ್ಲಿ ಅಂಗಡಿ ಮುಂದೆ ವಾಹನ ನಿಲುಗಡೆ ಮಾಡುತ್ತಿರುವುದರಿಂದ ಸಾರ್ವಜನಿಕರಿಗೆ ಇತರ ವಾಹನ ಸಂಚಾರಕ್ಕೂ ಅಡ್ಡಿಯಾಗುತ್ತಿರುವ ಬಗ್ಗೆ ಪ್ರಸ್ತಾಪಿಸಿದರು. ಆಗ ಮುಖ್ಯಾಧಿಕಾರಿ ಪಾದಚಾರಿ ರಸ್ತೆ ಅಭಿವೃದ್ದಿಗೆ 27 ಲಕ್ಷ ರೂ ಗಳ ಟೆಂಡರ್ ಕರೆಯಲಾಗಿದ್ದು ಕಾಮಗಾರಿ ಆರಂಭಿಸಲಾಗುತ್ತದೆ ಎಂದರು.

ಈ ಹರಾಜು ಪ್ರಕ್ರಿಯೆಯಲ್ಲಿ ಪುರಸಭೆ ಕಂದಾಯಾಧಿಕಾರಿ ವಿ.ಕೆ.ಸೋಮಶೇಖರ್ ಪರಿಸರ ಅಭಿಯಂತರ ರೀತು ಸಿಂಗ್, ಸಿಬ್ಬಂದಿಗಳಾದ ಕೆ.ಎಂ ಸುಲೇಖ ಎಂ.ಯು.ರಜನಿ ಮತ್ತಿತರರು ಕಾರ್ಯನಿರ್ವಹಿಸಿದರು.

ಪೊನ್ನಂಪೇಟೆಗೆ ನೂತನ ತಹಸೀಲ್ದಾರ್



ಮಡಿಕೇರಿ, ಮಾ.13–ಪೊನ್ನಂಪೇಟೆ ತಾಲೂಕು ತಹಶೀಲ್ದಾರ್ ಆಗಿ ಸಿ.ಎಸ್ ಸಂಜನಾ ಅವರನ್ನು ಸರಕಾರ ನೇಮಕ ಮಾಡಿ ಆದೇಶ ಹೊರಡಿಸಿದೆ. ಬೆಂಗಳೂರಿನ ತಾಂತ್ರಿಕ ಕೋಶ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಲ್ಲಿ ಗ್ರೇಡ್ 2 ತಹಸೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂಜನಾ ವಿಧಾನ ಸೌಧದಲ್ಲಿ ಶಾಸಕ ಪೊನ್ನಣ್ಣರನ್ನು ಭೇಟಿ ಮಾಡಿ ಸಲಹೆ ಸೂಚನೆಗಳನ್ನು ಪಡೆದರು.

ಪರೀಕ್ಷೆಗೆ ಹೊರಟಿದ್ದ ವಿದ್ಯಾರ್ಥಿ ಅಪಘಾತಕ್ಕೆ ಬಲಿ

ಕುಶಾಲನಗರ, ಮಾ.13–ತನ್ನ ಭವಿಷ್ಯ ರೂಪಿಸಿಕೊಳ್ಳಲು ಪರೀಕ್ಷೆಗೆ ಬೈಕ್‌ನಲ್ಲಿ ಹೋಗುತ್ತಿದ್ದ ವಿದ್ಯಾರ್ಥಿ ಅಪಘಾತಕ್ಕೆ ಬಲಿಯಾಗಿರುವ ಘಟನೆಯೊಂದು ಶುಕ್ರವಾರ ಸಂಭವಿಸಿದೆ.

ಮೂಲತಃ ಪಿರಿಯಾಪಟ್ಟಣ ತಾಲೂಕಿನ ನವಿಲೂರು ಗ್ರಾಮದ ನಿವಾಸಿ ಕುಶಾಲ ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿ.ಯುಸಿ. ವಿದ್ಯಾರ್ಥಿ ಸುಮಂತ್ (17) ಅಪಘಾತಕ್ಕೆ ತುತ್ತಾದ ದುರ್ದೈವಿ.

ಇಂದು ಬೆಳಿಗ್ಗೆ ಸುಮಂತ್ ನವಿಲೂರು ಗ್ರಾಮದಿಂದ ಪರೀಕ್ಷೆಗೆ ಹಾಜರಾಗಲೆಂದು ಕುಶಾಲನಗರಕ್ಕೆ ಬೈಕ್ (ಕೆಎ09, ಇಬಿ–620)ತೆರಳುತ್ತಿದ್ದಾಗ ಮಂಚೆದೇವನಹಳ್ಳಿ ಬಳಿ ಟಿಬೇಟಿಯನ್ ಕ್ಯಾಂಪ್‌ನಿಂದ ಸ್ಕೂಟರ್(ಕೆಎ45, ಎಕ್ಸ್–7700) ನಲ್ಲಿ ಬೈಲಕುಪ್ಪೆ ಕಡೆಗೆ ಬರುತ್ತಿದ್ದ ಸಿ.ತ್ಸೆರಿಂಗ್ ಎಂಬಾತ ಮುಂದೆ ಹೋಗುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದಿದ್ದಾನೆ.

ತೀವ್ರವಾಗಿ ಗಾಯಗೊಂಡ ಸುಮಂತ್‌ನನ್ನು ಚಿಕಿತ್ಸೆಗಾಗಿ ಬೈಲಕುಪ್ಪೆ ಆಸ್ಪತ್ರೆಗೆ ಕರೆ ದೊಯ್ದರಾದರೂ ಚಿಕಿತ್ಸೆ ಫಲಕಾರಿಯಾಗದೆ ಅಸು ನೀಗಿದ್ದಾನೆ. ಸ್ಕೂಟರ್ ಸವಾರ ತ್ಸೆರಿಂಗ್‌ನನ್ನು ಚಿಕಿತ್ಸೆಗೆಂದು ಮೈಸೂರಿಗೆ ಕರೆತಂದು ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಿದರಾದರೂ ಸಂಜೆ ವೇಳೆಗೆ ಆತನೂ ಅಸುನೀಗಿದನೆಂದು ಹೇಳಲಾಗಿದೆ.

ಪಿರಿಯಾಪಟ್ಟಣ ಪೊಲೀಸರು ಎರಡೂ ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡು ಮೊಕದ್ದಮೆ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಕಾಫಿ ತೋಟಕ್ಕೆ ಕಾಡಾನೆ ಲಗ್ಗೆ ಕಾಫಿ, ಕರಿಮೆಣಸು ನಾಶ

ಮಡಿಕೇರಿ, ಮಾ.13–ಸಿದ್ದಾಪುರ ಸಮೀಪದ ಕರಡಿಗೋಡುವಿನ ಕೃಷಿಕ ಕುಕ್ಕನೂರು ಚಿದಾನಂದ ಅವರ ಕಾಫಿ ತೋಟಕ್ಕೆ ಬೃಹತ್ ಗಾತ್ರದ ಒಂಟಿ ಸಲಗವೊಂದು ಬೆಳಗಿನ ಜಾವ ಲಗ್ಗೆ ಇಟ್ಟು ಕಾಫಿ, ಕರಿಮೆಣಸು ಹಾಗೂ ತೋಟದಲ್ಲಿ ಹಾದು ಹೋದ ಸ್ಪಿಂಕ್ಲರ್ ಅಲ್ಯೂಮಿನಿಯಂ ಪೈಪ ಅನ್ನು ತುಳಿದು ನಾಶಪಡಿಸಿದೆ.

ಒಂಟಿ ಸಲಗ ತೋಟದಲ್ಲಿ ಅಪಾರ ಪ್ರಮಾಣದ ನಷ್ಟವನ್ನು ಉಂಟುಮಾಡಿದ್ದು ಇದೀಗ ಮಳೆ ಇಲ್ಲದ ಕಾರಣ ತೋಟದಲ್ಲಿ ಕಾಫಿ ಗಿಡಗಳಿಗೆ ನೀರಾವರಿ ವ್ಯವಸ್ಥೆ ಕೈಗೊಳ್ಳಲು ಕಷ್ಟಕರವಾಗುತ್ತಿದೆ ಎಂದು ಕೃಷಿಕ ಚಿದಾನಂದ ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಅರಣ್ಯ ಇಲಾಖೆ ಆದಷ್ಟು ಬೇಗ ಒಂಟಿ ಸಲಗವನ್ನು ಸೆರೆ ಹಿಡಿದು ನಾಡಿನಿಂದ ಬೇರೆಡೆಗೆ ಸ್ಥಳಾಂತರಿಸಬೇಕೆಂದು ಒತ್ತಾಯಿಸಿದ್ದಾರೆ.

ಪತ್ನಿಯೊಂದಿಗೆ ಗಾಜನೂರಿಗೆ ಭೇಟಿ ನೀಡಿದ ಶಿವರಾಜ್‌ಕುಮಾರ್


ಗಾಜನೂರಿನಲ್ಲಿ ಡಾ.ರಾಜಕುಮಾರ್ ವೃತ್ತವನ್ನು ಶಿವಣ್ಣ ಉದ್ಘಾಟಿಸಿದರು.

ಚಾಮರಾಜನಗರ: ಹ್ಯಾಟ್ರಿಕ್ ಹೀರೊ ಶಿವರಾಜಕುಮಾರ್ ಅವರು, ಪತ್ನಿ ಗೀತಾ ಅವರೊಂದಿಗೆ ತಮ್ಮ ತಂದೆಯವರ ಹುಟ್ಟೂರಾದ ಗಾಜನೂರಿಗೆ ಬುಧವಾರ ಭೇಟಿ ನೀಡಿದ್ದರು.

ಗಾಜನೂರಿನಲ್ಲಿ ಕೆಲವು ದಿನಗಳ ಹಿಂದೆ ಮಂಟೇಸ್ವಾಮಿ ದೇವಾಲಯದ ರಾಜಗೋಪುರ ನಿರ್ಮಾಣ ಜೀರ್ಣೋದ್ದಾರ ಕಾಮಗಾರಿ ನಡೆದು ಉದ್ಘಾಟನೆಯಾಗಿತ್ತು. ಇದರ ನಿರ್ಮಾಣಕ್ಕೆ ಶಿವಣ್ಣ ಸಹ ಸೇವಾರ್ಥ ನೀಡಿದ್ದರು. ಅಂದು ಶಿವಣ್ಣ ದೇವಾಲಯಕ್ಕೆ ಬರಲು ಆಗಿರಲಿಲ್ಲ. ಹಾಗಾಗಿ ಬುಧವಾರ ದೇವಾಲಯಕ್ಕೆ ಪತ್ನಿ ಗೀತಾ ಅವರ ಜೊತೆ ಭೇಟಿ ನೀಡಿ ದರ್ಶನ ಪಡೆದರು.

ಹಾಗೆಯೇ ಕೆಲವು ದಿನಗಳ ಹಿಂದೆ ತಾಳವಾಡಿಯಿಂದ ಗಾಜನೂರಿಗೆ ಬರುವಾಗ ಇರುವ ವೃತ್ತಕ್ಕೆ ಡಾ.ರಾಜಕುಮಾರ್ ವೃತ್ತ ಎಂದು ನಾಮಫಲಕ ಹಾಕಿ ಉದ್ಘಾಟನೆ ಮಾಡಲಾಗಿತ್ತು. ಶಿವರಾಜಕುಮಾರ್ ಬಂದಿದ್ದ ಹಿನ್ನೆಲೆಯಲ್ಲಿ ಇನ್ನೊಮ್ಮೆ ಟೇಪ್ ಕತ್ತರಿಸಿ ವೃತ್ತದ ನಾಮಫಲಕವನ್ನು ಉದ್ಘಾಟಿಸಿದರು. ಹಾಗೆಯೇ ಶಿವಣ್ಣ ದಂಪತಿ, ರಾಜಕುಮಾರ್ ಅವರ ನೆಚ್ಚಿನ ಆಲದ ಮರ ಜಮೀನಿಗೆ ತೆರಳಿ ಆಲದ ಮರದಡಿ ಕುಳಿತು ವಿಶ್ರಮಿಸಿದರು. ರಾಜ್ ಹುಟ್ಟಿದ ಹಳೆಯ ಮನೆ, ಹೊಸ ಮನೆಗೆ ತೆರಳಿ ಕಾಲ ಕಳೆದರು.

ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಯುಗಾದಿ ಸಂಭ್ರಮ

ನಾಳೆ ರಥೋತ್ಸವ, ಪ್ರತಿನಿತ್ಯ ಸ್ವಾಮಿಗೆ ವಿಶೇಷ ಪೂಜೆ



ಗುಂಡ್ಲುಪೇಟೆ, ಮಾ.13– ನಾಡಿನ ಪ್ರಸಿದ್ದ ಕಣ್ಮನ ತಣಿಸುವ ರಮ್ಯ ತಾಣವಾದ ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಯುಗಾದಿ ಜಾತ್ರಾ ಸಂಭ್ರಮ ಆರಂಭವಾಗಿದೆ.

ಮಾ.15ರಂದು ಮಧ್ಯಾಹ್ನ 12ಕ್ಕೆ ನಡೆಯಲಿರುವ ಯುಗಾದಿ ರಥೋತ್ಸವಕ್ಕಾಗಿ ದಿನ ನಿತ್ಯವೂ ವಿವಿಧ ಪೂಜಾ ಕಾರ್ಯಗಳೊಂದಿಗೆ ಬೆಟ್ಟದಲ್ಲಿ ವಿಶೇಷ ಹೂವಿನ ಅಲಂಕಾರ ಮತ್ತು ಸುಣ್ಣ ಬಣ್ಣದೊಂದಿಗೆ ದೇವಾಲಯ ಸಜ್ಜುಗೊಂಡಿದೆ.

ಗೋಪಾಲಸ್ವಾಮಿಗೆ ನಾನಾ ವರ್ಣದ ಹೂವುಗಳಿಂದ ಶೃಂಗಾರ ಮಾಡಲಾಗುತ್ತಿದೆ. ಭಾನುವಾರ ರಥೋತ್ಸವವು ಶುಭ ಅಭಿಜಿನ್ ಲಗ್ನದಲ್ಲಿ ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಮಾ.12ರಿಂದ 18ರವರೆಗೆ ಗೋಪಾಲಸ್ವಾಮಿಗೆ ವಿವಿಧ ಪೂಜಾ ಕೈಂಕರ್ಯಗಳು ನಡೆಯಲಿದೆ ಎಂದು ಪ್ರಧಾನ ಅರ್ಚಕ ಗೋಪಾಲ ಕೃಷ್ಣ ಭಟ್ (ಗೋಪಿ) ತಿಳಿಸಿದ್ದಾರೆ.

ವರ್ಷಪೂರ್ತಿ ಹಿಮದಿಂದ ತಂಪಾಗಿರುವ ಶ್ರೀ ರುಕ್ಮಿಣೀ ಸತ್ಯಭಾಮ ಸಹಿತನಾಗಿ ಕೊಳಲು ನುಡಿಸುತ್ತಿರುವ ಭಂಗಿಯಲ್ಲಿ ನಿಂತಿರುವ ಗೋಪಾಲನಿಗೆ ವಿಶೇಷ ಪೂಜಾ ಕೈಂಕಾರ್ಯಗಳು ನಡೆಯಲಿವೆ. ರಥೋತ್ಸವಕ್ಕೆ ರಾಜ್ಯ ಮತ್ತು ನೆರೆ ರಾಜ್ಯಗಳ ವಿವಿಧ ಭಾಗಗಳಿಂದ ಆಗಮಿಸುವ ಭಕ್ತಾದಿಗಳಿಗಾಗಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಮೂಲಭೂತ ಸೌಕರ್ಯಗಳ ಸೌಲಭ್ಯವನ್ನು ಮಾಡಲಾಗುತ್ತಿದ್ದು. ಅರಣ್ಯ ಇಲಾಖೆ ಬೆಟ್ಟಕ್ಕೆ ಪ್ಲಾಸ್ಟಿಕ್ ವಸ್ತುಗಳನ್ನು ಸಂಪೂರ್ಣ ನಿಷೇಧಿಸಿದೆ.

ಸಾರಿಗೆ ಬಸ್ ವ್ಯವಸ್ಥೆ ಈ ಜಾತ್ರೆಗೆ ಸರ್ಕಾರಿ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಹೊರತುಪಡಿಸಿದರೆ ಬೇರಾವುದೇ ಖಾಸಗಿ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ. ಬೆಟ್ಟದ ತಪ್ಪಲಿನವರೆಗೆ ಮಾತ್ರ ಖಾಸಗಿ ವಾಹನಗಳು ಸಂಚರಿಸಲು ಅವಕಾಶವಿದೆ.

ನಾಲ್ಕು ಆಟೋ ಗ್ಯಾಸ್ ಬಂಕ್‌ಗಳು ಬಂದ್



ಆಟೋ ಗ್ಯಾಸ್ ಬಂಕ್‌ಗಳು ಬಂದ್ ಆಗಿರುವುದು.

ಚಾಮರಾಜನಗರ: ನಗರದ ಗ್ಯಾಸ್ ಬಂಕ್‌ಗಳಲ್ಲಿ ಗ್ಯಾಸ್ ಖಾಲಿಯಾಗಿದ್ದು, ಜಿಲ್ಲಾ ಕೇಂದ್ರದಲ್ಲಿನ ನಾಲ್ಕು ಗ್ಯಾಸ್ ಬಂಕ್‌ಗಳು ಸೇರಿದಂತೆ ಜಿಲ್ಲೆಯ ವಿವಿಧೆಡೆ ಆಟೋ ಗ್ಯಾಸ್ ಬಂಕ್‌ಗಳು ತಾತ್ಕಾಲಿಕವಾಗಿ ಬಂದ್ ಆಗಿವೆ.

ಜಿಲ್ಲಾ ಕೇಂದ್ರದಲ್ಲಿರುವ ಎರಡು ಸಿಎನ್‌ಜಿ ಬಂಕ್, ಎರಡು ಆಟೋ ಎಲ್‌ಪಿಜಿ ಬಂಕ್ ಶುಕ್ರವಾರದಿಂದ ತಾತ್ಕಾಲಿಕವಾಗಿ ಬಂದ್ ಆಗಿದೆ. ಇದರ ಪರಿಣಾಮದಿಂದ ಗ್ಯಾಸ್ ತುಂಬಿಸಲು ಆಟೋ ಚಾಲಕರ ಪರದಾಡುವಂತಾಗಿದ್ದು, ಎಲ್‌ಪಿಜಿ ಗ್ಯಾಸ್ ನಂಬಿಕೊಂಡಿದ್ದ ಆಟೋ ಚಾಲಕರ ಸ್ಥಿತಿ ಅಯೋಮಯವಾಗಿದೆ.

ಆಟೋ ದುಡಿಮೆಯನ್ನೇ ನಂಬಿಕೊಂಡು ಜೀವನ ನಡೆಸುತ್ತಿದೇನೆ. ನಮ್ಮ ಆಟೋಗೆ ಪೆಟ್ರೋಲ್ ಸಹ ಹಾಕಿಸಲು ಆಗಲ್ಲ. ಗ್ಯಾಸ್ ಎಲ್ಲಿ ಹಾಕಿಸೋದು. ಸಾಲ ತೀರಿಸುವುದು, ಕುಟುಂಬ ನಿರ್ವಹಣೆ ಮಾಡುವುದು ಹೇಗೆ ಎಂಬ ಪ್ರಶ್ನೆ ಕಾಡುತ್ತಿದ್ದು, ಸರ್ಕಾರ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ನಮಗೆ ಸಹಾಯ ಮಾಡಬೇಕು. ಇಲ್ಲದಿದ್ದರೇ ಆತ್ಮಹತ್ಯೆ ಮಾಡಿಕೊಳ್ಳಬೇಕಾಗುತ್ತದೆ ಎಂದು ಚಾಲಕ ಸತೀಶ್ 'ಮೈಸೂರು ಮಿತ್ರನೊಂದಿಗೆ ಅಳಲು ತೋಡಿಕೊಂಡರು. ಕಳೆದ ಏಳು ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಗ್ಯಾಸ್ ಬಂಕ್ ಖಾಲಿಯಾಗಿದೆ. ನಿತ್ಯ 2000 ಲೀಟರ್ ಗ್ಯಾಸ್ ಮಾರಾಟವಾಗುತ್ತಿತ್ತು. ಗುರುವಾರದಿಂದ ಪೂರೈಕೆ ಸ್ಥಗಿತಗೊಂಡಿದೆ ಎಂದು ಗ್ಯಾಸ್ ಬಂಕ್ ಮಾಲೀಕ ಉಮರ್ ತಿಳಿಸಿದರು.

ಮಾನವೀಯತೆ ಮೆರೆದ ಶಾಸಕ ಸಿ.ಪುಟ್ಟರಂಗಶೆಟ್ಟಿ



ಯಳಂದೂರು, ಮಾ.13– ಅಪಘಾತದಲ್ಲಿ ಗಾಯಗೊಂಡಿದ್ದ ಸವಾರನನ್ನು ಚಾಮರಾಜನಗರದ ಕ್ಷೇತ್ರದ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ತಮ್ಮ ಕಾರಿನಲ್ಲೇ ಕರೆದೊಯ್ದು ಆಸ್ಪತ್ರೆಗೆ ದಾಖಲಿಸಿ ಮಾನವೀಯತೆ ಮೆರೆದಿದ್ದಾರೆ.

ತಾಲೂಕಿನ ಯರಿಯೂರು ಗ್ರಾಮದ ಬಳಿ ಎರಡು ಬೈಕ್‌ಗಳ ನಡುವೆ ಮುಖಾಮುಖಿ ಡಿಕ್ಕಿಯಾಗಿ ಇರಸವಾಡಿ ಗ್ರಾಮದ ಸಚಿನ್ ಎಂಬಾತ ಗಾಯಗೊಂಡು ರಸ್ತೆಯಲ್ಲಿ ಒದ್ದಾಡುತ್ತಿದ್ದ ವೇಳೆ ಬೆಂಗಳೂರಿನಿಂದ ಸ್ವಗ್ರಾಮ ಉಪ್ಪಿನಮೋಳೆಗೆ ತೆರಳುತ್ತಿದ್ದ ಚಾ.ನಗರ ಕ್ಷೇತ್ರದ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ಕಾರು ನಿಲ್ಲಿಸಿ ಗಾಯಾಳುವನ್ನು ತಮ್ಮ ಕಾರಿನಲ್ಲಿ ಕೂರಿಸಿಕೊಂಡು ಯಳಂದೂರು ತಾಲೂಕು ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ.

ಆಸ್ಪತ್ರೆಯಲ್ಲಿ ಗಾಯಾಳುವಿಗೆ ಪ್ರಥಮ ಚಿಕಿತ್ಸೆ ಕೊಡಿಸುವಾಗಲೂ ಸ್ಥಳದಲ್ಲೇ ಇದ್ದು ಮಾನವೀಯತೆ ಮೆರೆದಿದ್ದಾರೆ. ಶಾಸಕರ ಕಾರ್ಯಕ್ಕೆ ಸಾರ್ವಜನಿಕ ವಲಯದಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ.

ವೃತ್ತಿ ಮಾರ್ಗದರ್ಶನ ಕಾರ್ಯಕ್ರಮ



ಬದನಗುಪ್ಪೆ ಪ್ರೌಢ ಶಾಲೆಯಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಭರವಸೆ ತುಂಬುವ ಹಾಗೂ ಶೈಕ್ಷಣಿಕ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮವನ್ನು ಡಯಟ್‌ನ ಪ್ರಾಂಶುಪಾಲ ಎಂ.ಕಾಶೀನಾಥ್ ಉದ್ಘಾಟಿಸಿದರು. ಕೃಷಿ ಮಾರಾಟ ಇಲಾಖೆಯ ಉಪನಿರ್ದೇಶಕ ಎ.ಜಿ.ಬಸವಣ್ಣ, ಹಿರಿಯ ಉಪನ್ಯಾಸಕ ಲಿಂಗರಾಜು, ಎಸ್‌ಡಿಎಂಸಿ ಅಧ್ಯಕ್ಷ ಮುಕುಂದ ಮೂರ್ತಿ, ಸದಸ್ಯರಾದ ನಂಜೇಶ್, ವೆಂಕಟೇಶ್ ಮೂರ್ತಿ, ಮುಖ್ಯ ಶಿಕ್ಷಕ ನಂಜುಂಡಸ್ವಾಮಿ, ಶಿಕ್ಷಕರಾದ ಸಿದ್ದಮಲ್ಲಪ್ಪ, ಗಜೇಂದ್ರ ಇದ್ದರು.

ನಾಳೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ: ಚಾಮರಾಜನಗರದಲ್ಲಿ 4ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಮಾ.15ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2 ಗಂಟೆವರೆಗೆ ಗಾಳಿಪುರ, ಮೆಡಿಕಲ್ ಕಾಲೇಜು, ಮಲ್ಲಯ್ಯನಪುರ, ಮೂಡಲಪುರ, ಮೂಡಲಪುರ ಸಣ್ಣ ಕೈಗಾರಿಕಾ ಇಲಾಖೆ, ಉತ್ತುವಳ್ಳಿ, ಯಡಪುರ, ಸೋಮವಾರಪೇಟೆ, ರಹಮತ್ ನಗರ, ವರದರಾಜಪುರ, ಸತ್ತಿ ರಸ್ತೆ ಗುಂಡ್ಲುಪೇಟೆ ರಸ್ತೆ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ರಾಜಕೀಯದಲ್ಲಿ ವಂಶ ಪಾರಂಪರ್ಯ ಆಡಳಿತ, ಭ್ರಷ್ಟಾಚಾರ ಸ್ವಜನ ಪಕ್ಷಪಾತ ಮಿತಿ ಮೀರಿದೆ


ಮುಕ್ತ ಸಂವಾದ ಕಾರ್ಯಕ್ರಮದಲ್ಲಿ ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಮಾತನಾಡುತ್ತಿರುವುದು.

ಚಾಮರಾಜನಗರ: ರಾಜಕೀಯ ರಂಗದಲ್ಲಿ ವಂಶಪಾರಂಪರ್ಯ ಆಡಳಿತ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮಿತಿ ಮೀರಿದ್ದು, ಇದನ್ನು ಸುಧಾರಿಸಲು ಯುವಜನರು ಜಾಗೃತಿಗೊಳ್ಳಬೇಕು ಎಂದು ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಸಲಹೆ ನೀಡಿದರು.

ನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಮೈಸೂರಿನ ದಾರಿ ಫೌಂಡೇಶನ್, ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಸಹಯೋಗದೊಂದಿಗೆ ಆಯೋಜಿಸಿದ್ದ "ಭವಿಷ್ಯದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ ಜವಾಬ್ದಾರಿ ಯುವಶಕ್ತಿಯ ಕೈಯಲ್ಲಿ–ಮುಕ್ತ ಸಂವಾದ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪಕ್ಷಭೇದವಿಲ್ಲದೇ ಈಗ ವಂಶಪಾರಂಪರ್ಯ ರಾಜಕಾರಣ ನಡೆಯುತ್ತಿದೆ. ರಾಜಕೀಯ ಮುಖಂಡರ ಮಕ್ಕಳು, ಸೋದರರೇ ಶಾಸಕರು, ಸಚಿವರಾಗುತ್ತಿದ್ದಾರೆ. ಒಂದೊಂದು ಜಿಲ್ಲೆಯನ್ನು ಒಬ್ಬೊಬ್ಬರು ಹಿಡಿದರೆ ಜನಸಾಮಾನ್ಯರ ಗತಿಯೇನು? ಇದಕ್ಕೆ ಪ್ರಜಾಪ್ರಭುತ್ವ ಎನ್ನುತ್ತಾರಾ? ಇದರ ಸುಧಾರಣೆ ಯಾರು ಮಾಡಬೇಕು? ಯುವ ಜನರಾದ ನೀವು ಜಾಗೃತಿಗೊಳ್ಳಬೇಕು. ಯುವ ಜನತೆ ಕಡ್ಡಾಯವಾಗಿ ಮತದಾನ ಮಾಡಬೇಕು. ಚುನಾವಣೆಗೆ ನಿಲ್ಲಲೂ ಸಿದ್ಧರಿರಬೇಕು ಎಂದು ಅವರು ಹೇಳಿದರು.

ವಧು–ವರ ನೋಡುವಾಗ ಎಲ್ಲವನ್ನೂ ಪರೀಕ್ಷೆ ಮಾಡುತ್ತೇವೆ. ಅವನು ಉದ್ಯೋಗದಲ್ಲಿದ್ದಾನಾ? ಒಳ್ಳೆಯ ನಡತೆಯುಳ್ಳವನಾ? ಎಂದು ಪರಿಶೀಲನೆ ಮಾಡುತ್ತೇವೆ. ಆದರೆ ಚುನಾವಣೆಗೆ ಸ್ಪರ್ಧಿಸಿರುವ ಜನಪ್ರತಿನಿಧಿಯಾಗುವವನನ್ನು ಆರಿಸುವಾಗ ಮೈಮರೆಯುತ್ತೇವೆ. ಸ್ಪರ್ಧಿಗಳ ಜಾತಿ ನೋಡಿ ಮತ ಹಾಕಬೇಡಿ. ಯಾರು ಯೋಗ್ಯರು ಎಂದು ನಿರ್ಧರಿಸಿ ಮತ ಹಾಕಿ. ನಿಮ್ಮ ಕ್ಷೇತ್ರಕ್ಕೆ ಅಭಿವೃದ್ಧಿ ಕೆಲಸ ಮಾಡುವವರಿಗೆ ಮತ ಹಾಕಿ. ಆತ್ಮಸಾಕ್ಷಿಯಂತೆ, ಕಡ್ಡಾಯವಾಗಿ ಮತ ಹಾಕಿ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ತರಕಾರಿ ಕೊಳ್ಳುವಾಗ ಇದು ಚೆನ್ನಾಗಿದೆಯಾ? ಇದು ತಾಜಾ ಇದೆಯಾ? ಎಂದು ಪರೀಕ್ಷಿಸಿ ಕೊಳ್ಳುತ್ತೀರಿ. ಇದೇ ರೀತಿಯ ಕಾಳಜಿ ಜನಪ್ರತಿನಿಧಿ ಆರಿಸುವಾಗಲೂ ಇರಬೇಕು ಎಂದು ಅವರು ಸಲಹೆ ನೀಡಿದರು.

ರೈತರು ಬೆಳೆದ ಬೆಳೆಗಳಿಗೆ ಬೆಲೆಯಿಲ್ಲ. ಬೆಳೆಯುವ ರೈತನಿಗೆ ಹಣ ದೊರಕುವುದಿಲ್ಲ. ಮಧ್ಯವರ್ತಿಗಳಿಗೆ ಅದರ ಲಾಭ ದೊರಕುತ್ತಿದೆ. ಹತ್ತಿ ಬೆಳೆದವನಿಗೆ ಬೆಲೆ ಇಲ್ಲ. ಕಾಟನ್ ಇಂಡಸ್ಟ್ರೀಸ್ ಲಾಭ ಮಾಡುತ್ತಾರೆ. ಟೊಮೆಟೋ ಬೆಳೆದವನಿಗೆ ದರ ಇಲ್ಲ. ಸಾಸ್, ಕೆಚಪ್ ಮಾಡಿದವರಿಗೆ ಬೆಲೆ ದೊರಕುತ್ತದೆ. ಜನಪ್ರತಿನಿಧಿಗಳಾದವರು ರೈತರು ಬೆಳೆದ ಬೆಳೆಗಳಿಗೆ ಉತ್ತಮ ಬೆಲೆ ಕೊಡಿಸಲು ಕಾಳಜಿ ವಹಿಸಬೇಕು ಎಂದು ಮುಖ್ಯಮಂತ್ರಿ ಚಂದ್ರು ಹೇಳಿದರು.

ಪತ್ರಕರ್ತ ಕೆ.ಎಸ್.ಬನಶಂಕರ ಆರಾಧ್ಯ ಮಾತನಾಡಿ, ಜಗತ್ತಿನಲ್ಲಿ ಅತಿ ಹೆಚ್ಚು ಯುವ ಜನರನ್ನು ಹೊಂದಿರುವ ದೇಶ ಭಾರತ. ಯುವಜನರೇ ದೇಶದ ಭವಿಷ್ಯ. ಮೂಢನಂಬಿಕೆಗಳನ್ನು ಬಿಡಿ. ವೈಜ್ಞಾನಿಕವಾಗಿ ಚಿಂತಿಸಿ. ಸಾಮಾಜಿಕ ಜಾಲತಾಣಗಳಲ್ಲಿ ಬರುವ ಸುಳ್ಳು ಮಾಹಿತಿಗಳನ್ನು ಪರಿಶೀಲಿಸಿ. ಮೊಬೈಲ್‌ಗೆ ಬಂದದ್ದನ್ನೆಲ್ಲ ಪರಾಮರ್ಶಿಸದೇ ಫಾರ್ವರ್ಡ್ ಮಾಡಬೇಡಿ ಎಂದು ಹೇಳಿದರು.

ಸಕರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಂಶುಪಾಲ ಪ್ರೊ. ಬಿ.ಎಸ್. ಮಹದೇವಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಆರ್. ಎನ್.ಸಿದ್ದಲಿಂಗಸ್ವಾಮಿ, ಪ್ರಧಾನ ಕಾರ್ಯದರ್ಶಿ ಪ್ರಸಾದ್ ಲಕ್ಕೂರು, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಶೈಲೇಶ್ ಕುಮಾರ್, ದಾರಿ ಫೌಂಡೇಶನ್ ಅಧ್ಯಕ್ಷ ಎಲ್.ರಂಗಯ್ಯ, ಸಂಚಾಲಕ ಪ್ರಭಾಕರ್, ಕಾರ್ಯದರ್ಶಿ ತಗಡೂರು ವೀರೇಶ್ ಕುಮಾರ್, ಖಜಾಂಚಿ ವಿಶ್ವನಾಥ್ ಕುಲಕರ್ಣಿ, ತೋಂಟೇಶ್, ಶಾಂತರಾಜು ಪ್ರಾಧ್ಯಾಪಕರಾದ ಡಾ.ಬಿ.ಆರ್.ಜಯಣ್ಣ, ಮಲ್ಲಣ್ಣ, ಲಿಖಿತಾ ಮತ್ತು ಕಾಲೇಜು ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

SITE FOR SALE
MUDA APPROVED
1) 30X50 West,
2) 18x40 S/E Corner
Swarna Layout
Gaddige Bogadi
Road. Call
9972399939

ಬೇಕಾಗಿದ್ದಾರೆ
ಕಂಪ್ಯೂಟರ್ ಟೈಪಿಂಗ್ ಅನುಭವವುಳ್ಳ ಅಭ್ಯರ್ಥಿಗಳು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ.
ಅನಿಲ್ 7026996123
ಶೇಕರ್ 9945911118

ತಕ್ಷಣ ಬೇಕಾಗಿದ್ದಾರೆ
ಮೈಸೂರು ನಗರದ ಪ್ರತಿಷ್ಠಿತ ಸಂಸ್ಥೆಯೊಂದನ್ನು ನೋಡಿಕೊಳ್ಳಲು ವಾಚ್‌ಮನ್ ಕುಟುಂಬದವರು ಬೇಕಾಗಿದ್ದಾರೆ. ವಸತಿ ಉಚಿತ, ಸಂಬಳ ರೂ. 10 ಸಾವಿರ + ಭತ್ಯೆ. ಕೂಡಲೇ ಸಂಪರ್ಕಿಸಿ:
9844768662, 9743769403

Go Mysore Holidays
ತಿರುಪತಿ–ತಿರುಮಲ–ಕಾಳಹಸ್ತಿ ಪ್ಯಾಕೇಜ್
1st April 2026 ಮತ್ತು 10th April 2026
ಹೊರಡುವುದು ಎರಡು ದಿನದ ಪ್ರವಾಸ,
ಕೆ.ಡಿ. ಸರ್ಕಲ್, ವಿಜಯನಗರ, 2ನೇ ಹಂತ, ಮೈಸೂರು
8197998916
9033154301

ಸೈಟ್ ಮಾರಾಟಕ್ಕಿದೆ
30'x47, E/S ಕಾರ್ನರ್, ಜ್ಞಾನ ಭಾರತಿ
30x40', S/F, JP ನಗರ ರೋಡ್, ವಿಮಾನ ನಗರ, ಸಂಪರ್ಕಿಸಿ:
ಮೊ: 99003-72013

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು–10
9739816440

HOUSE FOR RENT
at E&F Block Kuvempunagar, Behind Shanthi Sagar Complex, 1st Floor, Independent Entrance, 2 BHK, Study Room, 3 Bath Rooms, Living room, Dining Hall, Park Facing and Traffic Free Residential area
Call : 93432 89398

Ladies P.G available for Rent in Bhogodi 2nd Stage near Nirmithi Kendra 5th Cross Students Capacity Around 60 Members 20 Rooms and Fully Furnished
9481382535
8197679929

ಸೈಟು/ಮನೆ/ಮಾರಾಟ/ಬಾಡಿಗೆಗೆ
30x50 Karle Habitate, 30x40 ಸಾತಗಳ್ಳಿ ಹಂಚ್ಯಾ ರೋಡ್, 50x80, 40x60, 30x50 ಪರುಶುರಾಮನಗರ ಬನ್ನೂರು ರಸ್ತೆ 20x30 3 BHK Duplex House Saleಗೆ ಲಲಿತಾದ್ರಿನಗರ, Muda Site ನಲ್ಲಿ ಕಟ್ಟಿರುವ ಮನೆ 40x60 2 BHK Car Parking Independent, H-Block, ರಾಮಕೃಷ್ಣನಗರದಲ್ಲಿ ಬಾಡಿಗೆಗೆ ಇದೆ. Main Road
9448938989
7892035789

FOR SALE SITES NEAR RING ROAD

Vijayanagara 4th Stage	-1.2 Cr
40X60, Next to 4th Stage	-1.15 Cr
Niveditha Nagar	-1.15 Cr
Dattagalli 40 X 50	- 1.40 Cr
Srirampura - RT Nagar	70-75 Lakhs
Bannur Road, Vidya Vikas	-54 Lakhs

10 to 30 Gunta Land , 12 Km to City
Call: 81230 75038
Brokers Excuse

MUDA Allotted 40x60 site for sale
in Bogadi North, Archaeological Dept. of Survey, Bogadi. Prime location. Inside ring road. 1.45 Cr. Contact:
8884616461, 7411356023

WANTED
Telecalling ಮಾಡಲು ಹುಡುಗಿಯರು ಬೇಕಾಗಿದ್ದಾರೆ.
Salary + Incentive.
D.D. Urs Road.
Mob: 7353633297

House for Rent
Ramanuja Road, 14th Cross, Mysore. 2 BHK. No car parking.
8050259938, 8073733963

ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಏಜೆನ್ಸಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ. ಕೆಲಸದಲ್ಲಿ ಅನುಭವ ಇರಬೇಕು. (ಎಸ್‌ಎಸ್‌ಎಲ್‌ಸಿ ಪಾಸ್, ಸ್ಕೂಟರ್ ಇರಬೇಕು, ವಯಸ್ಸು 45ರ ಒಳಗೆ). ಸಂಪರ್ಕಿಸಿ:
8105522314, 8310098788

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಬಳಿ ಇರುವ ಚಿಕ್ಕಯ್ಯನ ಛತ್ರ ಇಂಡಸ್ಟ್ರಿಯಲ್ ಏರಿಯಾದಲ್ಲಿ ಹೆಲ್ಪರ್ಸ್ ಕೆಲಸ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. 08 ಗಂಟೆಗಳ ಕೆಲಸದ ಅವಧಿ, ವಾರದ ರಜೆ, ESI+PF +ಆಕರ್ಷಕ ವೇತನ, ವಾರ್ಷಿಕ ಬೋನಸ್, ಸೌಲಭ್ಯ ಇರುತ್ತದೆ. (ಆಸಕ್ತಿಯುಳ್ಳವರು) OT ಮಾಡಲು ಅವಕಾಶ ಇರುತ್ತದೆ. ಸಂಪರ್ಕಿಸಿ
7019378337
8884204612

'ವೃದ್ಧಾಶ್ರಮ' ಚಾರಿಟೇಬಲ್ ಟ್ರಸ್ಟ್
ನಿಮ್ಮ ವಯಸ್ಸಾದ ಮಹಿಳಾ ವೃದ್ಧರನ್ನು ನಿಮ್ಮ ಮನೆಯಂತೆಯೇ ಹಲವು ವರ್ಷಗಳಿಂದ ಆರೈಕೆ ಮಾಡುತ್ತಿರುವ ಸಂಸ್ಥೆ 'ಗನವ ಫೌಂಡೇಶನ್', ಶುದ್ಧತೆ, ಶುದ್ಧ ಆಹಾರ ಮತ್ತು ಮೆಡಿಕಲ್ ಸೌಲಭ್ಯ ನಮ್ಮ ಮೊದಲ ಆದ್ಯತೆ, ಸೇರಲು ಅಥವಾ ಸೇರಿಸಲು ಇಚ್ಛಿಸುವವರು ನಮ್ಮನ್ನು ಸಂಪರ್ಕಿಸಿ. ಸ್ಥಳ: ನಾಯ್ಡು ನಗರ, ಮೈಸೂರು.
99169 05188

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob : 9535361279

HOUSE FOR SALE
20X30, North Facing at Vasantha nagar, Behind Vidyavardhaka Engg College, Mysore.
98802-48386

ಮೈಸೂರಿನಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸ ಡೇಟಾ ಎಂಟ್ರಿ, ಪ್ಯಾಕಿಂಗ್ ಕೆಲಸಗಳಿಗೆ ನೇರ ಆಯ್ಕೆ 20,000 ದಿಂದ ಕೊರಿಯರ್ ಲಭ್ಯವಿದೆ.
9742133993

Nandini TOURISTS (YATRAS, HOLIDAYS & MEMORIES)
9916574089
9663653005
ಬೆಂಗಳೂರಿನಿಂದ ಪ್ಯಾಕೇಜ್ ಪ್ರವಾಸಗಳು
ಭೂತಾನ್ 6D/7N
ನೇಪಾಳ ಮುಕ್ತಿನಾಥ ಯಾತ್ರೆ, 9N/10D
ಕಾಶಿ ಅಯೋಧ್ಯಾ ಪ್ರಯಾಗರಾಜ್ 4N/5D
ಶಿರಡಿ 2N/3D
ಆದಿ ಕೈಲಾಶ್ ಮತ್ತು ಓಂ ಪರ್ವತ 9N/10D
ಪುರಿ ಜಗನ್ನಾಥ 2N/3D

ROOMS FOR RENT
On Monthly basis near Suburban Bus Stand with basic amenities.
Contact : Archana
76192 49709

50X80 site sale, Roopa nagar, Call
9880273834

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ MNC ಕಂಪನಿ ಮತ್ತು ಆಫೀಸ್ ಶೋರೂಂಗಳಿಗೆ 7th, 8th, 10th, PUC, ITI, Any Degree Pass and Fail ಆದ ಯುವಕ ಯುವತಿಯರಿಗೆ Casheir Billing, Data Entry, Packing, Helper, Maintenance, HR, Admin, Quality Checking, Accounts ಮುಂತಾದ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ 18000 to 55000) (ESI+ PF + OT ಯೊಂದಿಗೆ ಸಂಪರ್ಕಿಸಿ
8050028161 / 9187667857

GODOWN FOR RENT
APMC Yard B-Block Bandipalya 20x20 Feet Height -12 Feet
Mobile: 9480169436

ಕಮರ್ಷಿಯಲ್ ಸೈಟ್ ಸೇಲ್
20/90- ವೆಸ್ಟ್‌ಫೇಸ್ ವಿಷ್ಣುವರ್ಧನ್ ರೋಡ್, Old ಕೋರ್ಟ್ ಹತ್ತಿರ, ಮೈಸೂರು.
9611392033

MYSURU COFFEE WANTED
Coffee Makers & Juice Maker, Full Time/ Part Time, Pref. Freshers
7259483181

ಸ್ವೀಟ್ ಶಾಪ್‌ಗೆ ಕೆಲಸಕ್ಕೆ ಬೇಕಾಗಿದ್ದಾರೆ
ವಯೋಮಿತಿ: 18 ರಿಂದ 30 ವರ್ಷಗಳೊಳಗೆ
ವಿದ್ಯಾರ್ಹತೆ: SSLC / PUC
ಸಂಬಳ: 12-15K. ಸಂಪರ್ಕಿಸಿ:
9071112488, 9071112486

AXIS MAX LIFE INSURANCE
ಮಕ್ಕಳಿಗಾಗಿ Children Plan
ನಿಮಗಾಗಿ Savings Plan
ನಿಮ್ಮವರಿಗಾಗಿ Protection Plan
ಭವಿಷ್ಯಕ್ಕಾಗಿ Pension Plan
ಜೀವನಕ್ಕೆ Money Back
ನೆಮ್ಮದಿಗಾಗಿ Axis Max Life Insurance ತಗೊಳ್ಳಿ... ಖುಷಿಯಾಗಿರಿ
8095741384

ಮಾರಾಟಕ್ಕಿದೆ ಜಾಗ
ಮೈಸೂರು ನಗರದ ಸರ್ದಾರ್ ವಲ್ಲಭಭಾಯಿ ಪಟೇಲ್ ನಗರದಲ್ಲಿ 40×60 ಅಳತೆಯ ದಕ್ಷಿಣಮುಖಿ ಸೈಟ್ ಮಾರಾಟಕ್ಕೆ ಲಭ್ಯ. ಶಾಂತವಾದ ಹಾಗೂ ಉತ್ತಮ ನಿವಾಸ ಪ್ರದೇಶ. ಮನೆ ಕಟ್ಟಲು ಸೂಕ್ತವಾದ ಜಾಗ. ಆಸಕ್ತರು ಸಂಪರ್ಕಿಸಿ:
9986621579

Commercial site sale Dattagalli, Call
9880273834

ಬೇಕಾಗಿದ್ದಾರೆ
ಹುದ್ದೆ: ಹಣಕಾಸು ಸಲಹೆಗಾರ ಭಾರತದ ಟಾಪ್ ಬ್ಯಾಂಕ್‌ನಿಂದ ಸಮಯದ ಮಿತಿಯಿಲ್ಲ (PART TIME) ಅಂತರಾಷ್ಟ್ರೀಯ ಪ್ರವಾಸಗಳು ವೇರಿಯಬಲ್ ಭತ್ಯೆ(5L TO 8L), P.A (Based on Business) ಗೃಹಿಣಿಯರು, ವ್ಯಾಪಾರಸ್ಥರಿಗೆ ಆದ್ಯತೆ, ವಯಸ್ಸು 25y to 55y ವಿದ್ಯಾರ್ಹತೆ : SSLC ಕಡಿಮೆ ಅವಕಾಶಗಳು ಮಾತ್ರ Contact more Info
8095741384

WANTED URGENT
Impulse ನ ವಿವಿಧ ವಿಭಾಗಕ್ಕೆ, Age (18-24) 10th, PUC, ಮೇಲ್ಪಟ್ಟವರಿಗೆ Earn (10,600 ರಿಂದ 20,400/-) ವರೆಗೂ, ಪರಸ್ಥಳದವರಿಗೆ ಮಾತ್ರ ವಸತಿ, ಯಾವುದೇ ಶುಲ್ಕ ವಿರುವುದಿಲ್ಲ, ನೇರವಾಗಿ ಸಂಪರ್ಕಿಸಿ
ಮೈಸೂರು: 9342827788
ಕಾವ್ಯ : 9342238667

SITE FOR SALE
NORTH FACE 40X60 (MUDA APPROVED YADAHALLI MAIN BUS ROAD, MYSURU ZILLA PANCHAYATH EMPLOYEES WELFARE ASSOCIATION(R) MYSURU
8971415815

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ, ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮೇಲ್ಪಟ್ಟು,
ವಯೋಮಿತಿ : 50 ವರ್ಷದೊಳಗೆ
ಸಂಬಳ : 18000 (8 hrs, 26 ದಿನಗಳು)
ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819
9620667819

40x44 N/W ಕಾರ್ನರ್ ಸೈಟು ಮಾರಾಟಕ್ಕಿದೆ. 32 ಲಕ್ಷಗಳು ರೇರಾ ಅಪ್ರೂಡ್ (Opp. Park) GSS ನಿರ್ವಾಣ್ ಲೇಔಟ್, ತಳೂರು TVS ಫ್ಯಾಕ್ಟರಿ ಹತ್ತಿರ, ಮೈಸೂರು
9742198093

Solar Water Heaters
Modern Living


SUNZONE SOLAR SYSTEM
VM Double Road, Kuvempunagar, Mysuru
9845175443

WE ARE HIRING
SLEEPWAVE MATTRESS PVT. LTD.
A growing mattress manufacturing company in Mysore is hiring: Helpers - 5, Accountant (TallyPrime) – 1, Sales Executive (Experience) – 1, Salary: 14,000 - 35,000
Call / WhatsApp:
90368 24741
Email:sleepwavemysore@gmail.com

ಹೊಸ ಮನೆ ಬಾಡಿಗೆಗೆ ಇದೆ
(ಸಸ್ಯಾಹಾರಿಗಳಿಗೆ ಮಾತ್ರ) ಗೋಕುಲಂ 2ನೇ ಹಂತ ಓಶೋ ಗ್ಲಿಮ್ಸ್ ಹತ್ತಿರ ಗ್ರೌಂಡ್ ಫ್ಲೋರ್ 2 BHK ಉತ್ತರ ದಿಕ್ಕು
9343679309
9343233468

ಬೇಕಾಗಿದ್ದಾರೆ
ಮೈಸೂರಿನ KRS ರಸ್ತೆ, ಫಾಲ್ಕನ್ ಟೈರ್ಸ್ ಹತ್ತಿರವಿರುವ ಕಾರ್ಖಾನೆಗೆ 8 ಗಂಟೆ ಕೆಲಸ 3 ಪಾಳಿಯಲ್ಲಿ(ಶಿಫ್ಟ್) SSLC ಓದಿರುವ ಅನುಭವವಿರುವ 30ರಿಂದ 45 ವರ್ಷ ಒಳಗಿನ ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವೇತನ Take Home: 18500 ರೂ. ಇತರ ಭತ್ಯೆಗಳು ಸಂಪರ್ಕಿಸಿ:
9731976148

ಮಳಿಗೆಗಳು ಬಾಡಿಗೆಗೆ ದೊರೆಯುತ್ತದೆ
ಪೂರ್ವ ದಿಕ್ಕಿನಲ್ಲಿರುವ ರಾಮಕೃಷ್ಣ ನಗರ 'ಐ' ಬ್ಲಾಕ್‌ನಲ್ಲಿ 493, ಸುಮಿತ್ರ ಸ್ಟೀಲ್ ಅಂಗಡಿ ಹತ್ತಿರ. ಸಂಪರ್ಕಿಸಿ:
Mob: 8147704670

ಉಚಿತ ವಸತಿ ಶಾಲೆಗೆ ಬೇಕಾಗಿದ್ದಾರೆ
ಈಗಷ್ಟೇ ನಿವೃತ್ತಿ ಹೊಂದಿರುವ ಸಂಸ್ಥೆಯಲ್ಲಿದ್ದುಕೊಂಡು ಸೇವೆ ಸಲ್ಲಿಸಲು, ಆರೋಗ್ಯವಂತ ಪುರುಷ ಮತ್ತು ಸ್ತ್ರೀಯರು ಬೇಕಾಗಿದ್ದಾರೆ. ಮಾಸಿಕ 15,000ದ ವರೆಗೆ + ಉಚಿತ ಸಸ್ಯಾಹಾರಿ ಊಟ + ವಸತಿ).
ದಿವ್ಯ ದೀಪ ಚಾರಿಟಬಲ್ ಟ್ರಸ್ಟ್, ಹೆಚ್.ಡಿ. ಕೋಟೆ ರಸ್ತೆ, ಮೈಸೂರು
9341369901
9538499901
8088586087
www.divyadeepatrust.org

JOB OPPORTUNITY
50+ age ಹಿರಿಯರಿಗೆ VRS, ನಿವೃತ್ತರಿಗೆ, ವಿದ್ಯಾವಂತ ಗೃಹಿಣಿಯರಿಗೆ , Enterpreneurs ಆಗಲು ಬಯಸುವವರಿಗೆ ಸೆಮಿನಾರ್ 16–03–2026 ಸೋಮವಾರ ಬೆಳಿಗ್ಗೆ 11 ಗಂಟೆಗೆ ಮಯೂರ ಹೊಯ್ಸಳ Hotel (ಮೆಟ್ರೋಪೋಲ್ Hotel ಎದುರು) Lunch Arrenged
7349052084, 9611073077
9892810890, 9845458130

ಮೂಲ ಪ್ರತಿ ಕಳೆದಿದೆ
ಸ್ವತ್ತಿನ ವಿವರ : ಮುರಟೀಕ್ಯಾತನಹಳ್ಳಿ ಜಂಜರ್ ನಂ 304/B ನಿವೇಶನ ಸಂಖ್ಯೆ 09 ಕ್ರಯಪತ್ರ ನೋಂದಣಿ ಸಂಖ್ಯೆ ಸಿ.ಡಿ ನಂ MYND 338,MYN-1-15875-2012-13 ಮಾಲೀಕರು : ಜೆ. ಶಿವಲಿಂಗ ಬಿನ್ ಲೇಟ್. ಜವರೇಗೌಡ ಮೊ: 9686297727 ಯಾರಿಗಾದರೂ ಸಿಕ್ಕಲ್ಲಿ ಮೇಲ್ಕಂಡ ನಂಬರಿಗೆ ಸಂಪರ್ಕಿಸಿ

ಡ್ರೈವರ್ ಬೇಕಾಗಿದ್ದಾರೆ
ಉಚಿತ ಊಟ, ವಸತಿ.
ಸಂಬಳ: 15,000 – 20,000.
Mob: 8884179981

ಪ್ರಜೀತ್ ಫೆಸಿಲಿಟಿ ಮ್ಯಾನೇಜ್‌ಮೆಂಟ್ ಪ್ರೈವೇಟ್ ಲಿಮಿಟೆಡ್‌ಗೆ
ಫೀಲ್ಡ್ ಆಫೀಸರ್, ಸೆಕ್ಯೂರಿಟಿ ಸೂಪರ್‌ವೈಸರ್, ಸೆಕ್ಯೂರಿಟಿ ಗಾರ್ಡ್, ಶ್ರೀರಂಗಪಟ್ಟಣಕ್ಕೆ ಹೌಸ್‌ಕೀಪಿಂಗ್, ವಾರ್ಡ್‌ಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ:
8088538037
8884339446

ಬೇಕಾಗಿದ್ದಾರೆ
Ladies P.G. ಯಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. (ಅಡುಗೆ ಹೆಲ್ಪರ್) ಕಡ್ಡಾಯವಾಗಿ ಪಿ.ಜಿ. ಯಲ್ಲಿಯೇ ಉಳಿದುಕೊಳ್ಳಬೇಕು. ಊಟ, ವಸತಿ ದೊರೆಯುತ್ತದೆ. ಸಂಬಳ: 10,000.
9972567537
9035004605

ಸ್ವಂತ ಉದ್ಯೋಗ ಅವಕಾಶ.
* ಸ್ವಂತ ವ್ಯಾಪಾರ ಹಾಗೂ ನಿರುದ್ಯೋಗ ಸಮಸ್ಯೆ ನಿವಾರಣೆ.
* ಕಡಿಮೆ ಹೂಡಿಕೆ ಗರಿಷ್ಠ ಲಾಭ.
ಮಾರ್ಕೆಟಿಂಗ್ ಮತ್ತು ಕಚ್ಚಾ ವಸ್ತುಗಳ ವ್ಯವಸ್ಥೆ ನಮ್ಮ ಜೊತೆ. ಹೆಚ್ಚಿನ ಮಾಹಿತಿ:
Mob: 8746800908

ಏಷಿಯನ್ ಪೇಂಟ್ ಕಲರ್ ಐಡಿಯಾ ಶೋರೂಂ ಅಲ್ಲಿ ಕೆಲಸ ಮಾಡಲು ಅಕೌಂಟೆಂಟ್ ಬೇಕಾಗಿದ್ದಾರೆ. ಎರಡು ವರ್ಷ ಅನುಭವ ಇರಬೇಕು ಹಾಗೂ ಟ್ಯಾಲಿ ಗೊತ್ತಿರಬೇಕು. ಸಂಬಳ 15,000 ದಿಂದ 20,000. ಸ್ಥಳ: ಚಿಕ್ಕಳ್ಳಿ, ಟಿ.ನರಸೀಪುರ ಮೇನ್ ರೋಡ್, ಮೈಸೂರು–570 028.
Mob: 9980198020

BANK AUCTION PROPERTY CONSULTANT
Buy Bank Auction Properties safely & legally. Legal verification | Bank coordination | Bidding support | Registration assistance. Price will be below the market value & Reasonable (Sites | Houses | Commercial | Agricultural Lands)
8553050040
6364554306

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್, JSS ಲೇಔಟ್, ನಿರ್ಮಾಣ್ ನಗರ ಹಾಗೂ ಸುತ್ತಮುತ್ತ ಇರುವ ಲೇಔಟ್‌ಗಳಲ್ಲಿ.
9844436672

ಮನೆ, ಸೈಟು ಮಾರಾಟಕ್ಕಿದೆ
40x60 ಸೈಟು ಆದಿತ್ಯ ಸರ್ಕಲ್, ದಟ್ಟಗಳ್ಳಿ,
30x40 ಮನೆ ಗ್ರೌಂಡ್ ಫ್ಲೋರ್, ದಟ್ಟಗಳ್ಳಿ,
30x40 ಸೈಟು ಆದಿತ್ಯ ಸರ್ಕಲ್. ದಟ್ಟಗಳ್ಳಿ,
ಮಾರುವವರು, ಕೊಳ್ಳುವವರು ಸಂಪರ್ಕಿಸಿ:
Mob: 9945042875

Site for Sale
ಲಲಿತಾದ್ರಿಪುರ ರಿಂಗ್ ರಸ್ತೆಯಿಂದ 2 ಕಿ.ಮೀ. ದೂರದಲ್ಲಿ 30x50, 30x40 ನಿವೇಶನಗಳು ಲಭ್ಯವಿದೆ.
Mob: 9448447035

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್ / ಜೆಎಸ್‌ಎಸ್ ಹಿರಿಯ ವಿದ್ಯಾರ್ಥಿಗಳ ಸಂಘ, ಜೆಎಸ್‌ಎಸ್ 3ನೇ ಹಂತ / ನಿರ್ಮಾಣ ಲೇಔಟ್ ಹಾಗೂ ವರುಣ ಸುತ್ತಮುತ್ತ ಇರುವ ಲೇಔಟ್‌ಗಳಲ್ಲಿ ಟಿ.ನರಸೀಪುರ ರಸ್ತೆ / ಬನ್ನೂರು ರಸ್ತೆ.
Mob: 9686071750

ವರ ಬೇಕಾಗಿದ್ದಾರೆ
ಸುಂದರವಾದ ವಧುವಿಗೆ SC ಜಾತಿಯ ವರ 20 ರಿಂದ 28ರ ವಯಸ್ಸಿನ ವರ ಬೇಕಾಗಿದ್ದಾರೆ. ಒಳ್ಳೆಯ ಕೆಲಸದಲ್ಲಿ ಇರಬೇಕು. ಸಂಪರ್ಕಿಸಿ:
9964949462
7090202776

Job Opportunity
* Office Staff - 1 No.
(With basic accounting knowledge
* Collection Boy - 1 No.
@ Mysuru City Centre
9980062066

WANTED DAY CARE TEACHER:
wanted Day care teacher with montessori certified around 20-30year old for 6 month old baby at home. (Freshers can apply)
Salary -12000 fixed
Timings: 10am to 6.30pm.
9663745923
7022470930
Location: Vijaynagar 3rd stage, Mysuru

ಹೂಟಗಳ್ಳಿ ಸೈಟ್ ಮಾರಾಟಕ್ಕಿದೆ
70x50 ಶ್ರೀರಾಂಪುರ,
30x40 ಸೈಟ್ ಮಾರಾಟಕ್ಕಿದೆ.
20x30 ಸೈಟ್ ಮಾರಾಟಕ್ಕಿದೆ.
9008711654

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
8197383645, 9008711654

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರು ನಗರದ ಸುತ್ತಮುತ್ತ ಕೈಗಾರಿಕಾ ಪ್ರದೇಶ, ಕರ್ಖಾನೆಗಳಲ್ಲಿ, ಕಂಪನಿಗಳಲ್ಲಿ, ಸ್ಕೂಲ್‌ಗಳಲ್ಲಿ ಹಾಗೂ ಹಾಸ್ಪಿಟಲ್‌ಗಳಲ್ಲಿ, ಹೆಬ್ಬಾಳು, ಮೇಟಗಳ್ಳಿ ಶಾರದೇವಿನಗರ, ದಟ್ಟಗಳ್ಳಿ ಪ್ರದೇಶಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಹೌಸ್ ಕೀಪಿಂಗ್ ಹಾಗೂ Helper ಗಳು ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ. ಉತ್ತಮ ಸಂಬಳ ಹಾಗೂ ESI, PF ಲಭ್ಯವಿರುತ್ತದೆ.
Mob: 7795367205,
9611208553, 9036461347

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
Mob: 9964733988

SITE FOR SALE
KHB Kenchala-gudu S/W Corner
1776 sq.ft.
BROKERS EXCUSE
Mob: 9449990513

SITE FOR SALE
Dimension : 30x40
Facing : North
Layout : KSRTC employees Housing Board
Location : D Salundi
8310008208

WANTED SITES
Vijayanagar, Dattagalli, Lakshmipuram, Rajivnagar, Satgalli, & Mysore surroundings, any dimension, any facing.
8660463567, 9845315593

FOR SALE
Single owner driven Toyota Urban Cruiser Hyryder, 2024 August.
Mob: 9845920613

FOR SALE
2 & 3 BHK New Apartments @ Ramakrishna Nagar.
20x30, 30x40 2,3 & 4 BHK New Construction as Per Your Plan Near Rainbow School, Bogadi
30x50 Sites Near RT Nagar Brahmins Lyt, 50ft & 60ft Road
PRAKRUTHI PROPERTIES
95386 90359, 90359 90359

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

FOR SALE
20x40, 30x50 Sites@ Gurukula Lyt, JP Ngr
30x45 Corner Site@ Dattagalli
20X30, 40X60 NEW HOUSE NEAR HARIVIDYALAYA, BOGADI
30x40 New House @ JP Ngr Siddlingeshwara Lyt,
G+3 House @ Aravind Nagar
20x30 Duplex House @ Vijaya Ngr
PRAKRUTHI PROPERTIES
95386 90359, 90359 90359

LENIN CONVENT
SRIRANGAPATNA
WANTED Experience TEACHERS
HM POST 5 experience (MA, M.Sc, B.Ed, D.Ed). ENGLISH (With fluent English) - 1
Hindi - 1, Kannada- 1
Physical education- 1 (Male)
9844854461, 6362000950
IMMEDIATE APPOINTMENT

ತಕ್ಷಣ ಬೇಕಾಗಿದ್ದಾರೆ
ಹೋಂ ನರ್ಸಿಂಗ್ ಹುದ್ದೆಗೆ
ಶಿಕ್ಷಣ: 7th - PUC
ವಯಸ್ಸಿನ ಮಿತಿಯಿಲ್ಲ.
ಉಚಿತ ಊಟ, ವಸತಿಯೊಂದಿಗೆ, ಅಗತ್ಯವಿದ್ದಲ್ಲಿ ತಿಂಗಳ ಮಧ್ಯದಲ್ಲಿ ಹಣ ಪಡೆಯುವ ಸೌಲಭ್ಯವಿರುತ್ತದೆ. ಮೈಸೂರು.
Mob: 9071422555

ಮನೆ ಬಾಡಿಗೆಗೆ
ಸಣ್ಣ ಕುಟುಂಬಕ್ಕೆ #2/A ಸೆಂಟ್ ಥಾಮಸ್ ಸ್ಕೂಲ್ ಹತ್ತಿರ. (ಸ್ಟರ್ಲಿಂಗ್ ಟಾಕೀಸ್ ರಸ್ತೆ), ವಿಶ್ವೇಶ್ವರನಗರ, 19ನೇ ಕ್ರಾಸ್, ಮೈಸೂರು.
Ground floor RCC 12½ x50 ಉತ್ತರ ದಿಕ್ಕು (North Face) 1 BHK ಮನೆ. Visiting Time- ಬೆಳಗ್ಗೆ 10:00 ರಿಂದ ಸಂಜೆ 6.00(ಪ್ರತಿದಿನ)
9845393364

ಬೇಕಾಗಿದ್ದಾರೆ
ಸುರಕ್ಷವೆಲ್ ಡ್ಯೂಟಿ ಪೋರ್ಸ್ ಸಂಸ್ಥೆಗೆ ನುರಿತ ಸೆಕ್ಯೂರಿಟಿ ಸಿಬ್ಬಂದಿಗಳ ಅವಶ್ಯಕತೆಯಿದೆ. ಉಚಿತ ವಸತಿ/ಊಟ/ ESI/ PF ಹಾಗೂ ಆಕರ್ಷಕ ಸಂಬಳ
9686422400
9242406261

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ, ಪ್ರತಿದಿನ ವಧುವರರ ನೇರ ಸಂದರ್ಶನ ಇರುತ್ತದೆ.
9448229184
7899625268

20x30, 30x40, 60x40 ಸೈಟು ಬೇಕಾಗಿದೆ
ಲಾಲ್‌ಬಹದ್ದೂರ್ ಶಾಸ್ತ್ರಿನಗರ ವಸಂತನಗರ, ಶಾಂತವೇರಿ ಗೋಪಾಲಗೌಡ ನಗರ, ಲಲಿತಾದ್ರಿನಗರ,
9187593627

S.K. CONSTRUCTION
ಹುಣಸೂರು ನಗರದಲ್ಲಿ ಸ್ವಂತ ಮನೆ ನಿವೇಶನ ಮುಡ ಬೇಕೆ ಚಿಂತೆ ಬೇಡ.
30x40 Site 1250/- Sqft
2 BHK ಮನೆ 35 lakh Only, Huda, Approved Layout Loan ಸಹಿತ ಮಾಡಿ ಕೊಡುತ್ತೇವೆ.
9620528490

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮಹಿಳೆಯರು ಸ್ವಾವಲಂಬಿಗಳಾಗಿ ಬದುಕು ಕಟ್ಟಿಕೊಳ್ಳಿ



ತಿ.ನರಸೀಪುರದ ಪುರಸಭೆಯಲ್ಲಿ ಮಹಿಳಾ ದಿನಾಚರಣೆ ನಡೆಯಿತು.

ಪುರಸಭಾ ಮುಖ್ಯಾಧಿಕಾರಿ ಸಿ.ಶ್ರೀನಿವಾಸ್ ಸಲಹೆ

ತಿ.ನರಸೀಪುರ, ಮಾ.13– ಮಹಿಳೆಯರು ಸ್ವಾವಲಂಬಿಗಳಾಗುವ ಮೂಲಕ ಸಮಾಜದಲ್ಲಿ ಆದರ್ಶ ಬದುಕು ಕಟ್ಟಿಕೊಳ್ಳಬೇಕು ಎಂದು ಪುರಸಭಾ ಮುಖ್ಯಾಧಿಕಾರಿ ಸಿ.ಶ್ರೀನಿವಾಸ್ ಸಲಹೆ ನೀಡಿದರು.

ಪಟ್ಟಣದ ಪುರಸಭೆಯಲ್ಲಿ ನಡೆದ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದ ವಿವಿಧ ಸ್ತರಗಳಲ್ಲಿ ತಮ್ಮ ಸಾಮರ್ಥ್ಯವನ್ನು ಮಹಿಳೆಯರು ಸಾಬೀತು ಪಡಿಸುತ್ತಿದ್ದಾರೆ ಎಂದರು.

ಮಹಿಳೆಯರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸದ ಜೊತೆಗೆ ವಿನಯ, ವಿವೇಕ ಕಲಿಸಬೇಕು. ಅಲ್ಲದೇ ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದ ಅವರು, ಪುರಸಭೆ ವತಿಯಿಂದ ಮಹಿಳಾ ಪೌರಕಾರ್ಮಿಕರ ಆರೋಗ್ಯ ರಕ್ಷಣೆಗೆ ಬೇಕಾದ ಎಲ್ಲಾ ರೀತಿಯ ಸೌಲಭ್ಯ ಕಲ್ಪಿಸಲಾಗುವುದು. ಹೀಗಾಗಿ ಅವರು ತಮ್ಮ ಆರೋಗ್ಯದ ಜೊತೆಗೆ ತಿ.ನರಸೀಪುರದ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದರು.

ಮಹಿಳೆಯರಿಲ್ಲದ ಕುಟುಂಬಗಳನ್ನು ಊಹಿಸಲೂ ಅಸಾಧ್ಯ. ಮಹಿಳೆ ಕುಟುಂಬದ ಬೆಳಕು ಹಾಗೂ ಸಮಾಜದ ಕಣ್ಣು. ಮಹಿಳೆಯರನ್ನು ಆರ್ಥಿಕವಾಗಿ ಇನ್ನಷ್ಟು ಪ್ರಬಲರನ್ನಾಗಿಸಲು ಸರ್ಕಾರ ಹಲವು ಯೋಜನೆಗಳನ್ನು ಜಾರಿಗೊಳಿಸಿದೆ. ಅವುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಮಹಿಳೆಯರು ಕೀಳರಿಮೆ ಬಿಟ್ಟು ಸಮಾಜದ ಮುಖ್ಯವಾಹಿನಿಗೆ ಬರಬೇಕು. ಮಹಿಳಾ ಸ್ವಸಹಾಯ ಸಂಘಗಳಿಗೆ ಬ್ಯಾಂಕುಗಳಿಂದ ದೊರಕುವ ಸಾಲ ಸೌಲಭ್ಯಗಳ ಪ್ರಯೋಜನ ಪಡೆದು ಉದ್ಯಮಿಗಳಾಗಬೇಕು ಎಂದು ಸಲಹೆ ನೀಡಿದರು.

ಪುರಸಭೆ ಮಾಜಿ ಅಧ್ಯಕ್ಷ ಸಿಪ್ರಕಾಶ್ ಮಾತನಾಡಿ, ಮಹಿಳೆಯರ ಆರೋಗ್ಯ ಎಂದರೆ ಕೇವಲ ದೈಹಿಕ ಆರೋಗ್ಯ ಮಾತ್ರವಲ್ಲ. ಮಾನಸಿಕ, ಸಾಮಾಜಿಕ ಮತ್ತು ಭಾವನಾತ್ಮಕ ಆರೋಗ್ಯವೂ ಅದರಲ್ಲಿ ಒಳಗೊಂಡಿದೆ. ಸರಿಯಾದ ಆಹಾರ ಪದ್ಧತಿ, ನಿಯಮಿತ ವ್ಯಾಯಾಮ, ಸಮರ್ಪಕ ವಿಶ್ರಾಂತಿ ಮತ್ತು ನಿಯಮಿತ ವೈದ್ಯಕೀಯ ತಪಾಸಣೆ, ಇವುಗಳ ಮೂಲಕ ಮಹಿಳೆಯರು ತಮ್ಮ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದರು.

ಇಂದಿನ ಯುವಪೀಳಿಗೆ ವಿದ್ಯಾಭ್ಯಾಸ, ಉದ್ಯೋಗ ಮತ್ತು ಜೀವನದ ಗುರಿಗಳನ್ನು ಸಾಧಿಸಲು ಹೆಚ್ಚಿನ ಒತ್ತು ನೀಡುತ್ತಾರೆ. ಇದು ಒಳ್ಳೆಯ ಸಂಗತಿ. ಆದರೆ ಜೀವನದಲ್ಲಿ ಆರೋಗ್ಯ ಮತ್ತು ಕುಟುಂಬದ ವಿಷಯಕ್ಕೂ ಸಮಾನ ಮಹತ್ವ ನೀಡುವುದು ಅಗತ್ಯವಾಗಿದೆ. ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಅಧ್ಯಕ್ಷ ಎನ್.ಸೋಮು, ಕಂದಾಯಾಧಿಕಾರಿ ಕೆ.ಸಿ.ತ್ರಿವೇಣಿ, ಕಚೇರಿ ವ್ಯವಸ್ಥಾಪಕ ಮಹೇಂದ್ರ, ಹಿರಿಯ ಆರೋಗ್ಯ ನಿರೀಕ್ಷಕಿ ಚಂಪಾಶ್ರೀ, ಸಮುದಾಯ ಸಂಘಟನಾಧಿಕಾರಿ ನಳಿನ, ಕಿರಿಯ ಅಭಿಯಂತರ ಸಿದ್ದಪ್ಪ, ಲೆಕ್ಕಾಧಿಕಾರಿ ವಿನಯ್, ರಾಮು, ಹರೀಶ್, ಪೌರಕಾರ್ಮಿಕರಾದ ಶಿವಣ್ಣ, ಸೋಮ, ಮಹಾದೇವ್, ಸಿಬ್ಬಂದಿ ಹಾಜರಿದ್ದರು.

ಕುಡಿಯುವ ನೀರು ಪೂರೈಕೆಗೆ ಒತ್ತಾಯಿಸಿ ಪ್ರತಿಭಟನೆ



ಕುಡಿಯುವ ನೀರಿಗೆ ಆಗ್ರಹಿಸಿ ಸಿದ್ದಾಪುರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಹೆಚ್.ಡಿ.ಕೋಟೆ, ಮಾ.13– ಸಮರ್ಪಕ ಕುಡಿಯುವ ನೀರು ಪೂರೈಕೆಗೆ ಒತ್ತಾಯಿಸಿ ತಾಲೂಕಿನ ಚಕ್ಕೋಡನಹಳ್ಳಿ ಗ್ರಾಪಂ ವ್ಯಾಪ್ತಿಯ ಸಿದ್ದಾಪುರ ಗ್ರಾಮಸ್ಥರು ಖಾಲಿ ಕೊಡದೊಂದಿಗೆ ಶುಕ್ರವಾರ ಪ್ರತಿಭಟನೆ ನಡೆಸಿದರು.

ಗ್ರಾಮದಲ್ಲಿ ಖಾಲಿ ಕೊಡಗಳೊಂದಿಗೆ ಜಮಾಯಿಸಿದ ಗ್ರಾಮಸ್ಥರು ಸಮರ್ಪಕ ಕುಡಿಯುವ ನೀರು ಪೂರೈಕೆ ಮಾಡದ ಸ್ಥಳೀಯ ಗ್ರಾಪಂ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಮದ ಮುಖಂಡ ಗಣೇಶ್ ನಾಯಕ ಮಾತನಾಡಿ, ಕಾಡಂಚಿನ ಗ್ರಾಮವಾದ ಸಿದ್ದಾಪುರದಲ್ಲಿ ಸಾವಿರಕ್ಕೂ ಹೆಚ್ಚು ಮಂದಿ ವಾಸಿಸುತ್ತಾರೆ. ಆದರೆ ಗ್ರಾಮದಲ್ಲಿ ಹಲವು ತಿಂಗಳಿಂದ ಕುಡಿಯುವ ನೀರಿನ ಸಮಸ್ಯೆ ಇದೆ. ನೀರಿನ ಸಮಸ್ಯೆ ಬಗೆಹರಿಸುವಂತೆ ಸಾಕಷ್ಟು ಬಾರಿ ಗ್ರಾಮಸ್ಥರು ಪಿಡಿಓ ಗಮನಕ್ಕೆ ತಂದು ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಹೀಗಾಗಿ ಇಂದು ಪ್ರತಿಭಟನೆಗೆ ಮುಂದಾಗಿದ್ದೇವೆ ಎಂದರು.

ಪ್ರತಿಭಟನಾ ಸ್ಥಳಕ್ಕಾಗಮಿಸಿದ ಪಿಡಿಓ ಸೋಲೋಮನ್ ರಾಜ್, ಇನ್ನೆರಡು ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುತ್ತೇನೆ ಎಂದು ಪ್ರತಿಭಟನಾಕಾರರ ಮನವೊಲಿಸಲು ಯತ್ನಿಸಿದ ವೇಳೆ ಪಿಡಿಓ ಮತ್ತು ಗ್ರಾಮಸ್ಥರ ನಡುವೆ ಮಾತಿನ ಚಕಮಕಿ ನಡೆಯಿತು. ಬಳಿಕ ಗ್ರಾಮಸ್ಥರನ್ನು ಸಮಾಧಾನಗೊಳಿಸಿದ ಪಿಡಿಓ ಸೋಲೋಮನ್ ರಾಜ್ ಟ್ಯಾಂಕರ್‌ನಲ್ಲಿ ನೀರನ್ನು ತರಿಸಿ ಪೂರೈಸಿದರು. ಬಳಿಕ 2 ದಿನಗಳ ಕಾಲ ಕಾಲಾವಕಾಶ ಪಡೆದು ಸಮಸ್ಯೆ ಬಗೆಹರಿಸುವುದಾಗಿ ಪಿಡಿಓ ಭರವಸೆ ನೀಡಿದ್ದರಿಂದ ಗ್ರಾಮಸ್ಥರು ಪ್ರತಿಭಟನೆ ಕೈಬಿಟ್ಟರು.

> “ ಬೇಸಿಗೆ ವೇಳೆ ನೀರಿನ ಸಮಸ್ಯೆ ಯಾಗದಂತೆ ಕ್ರಮ ಕೈಗೊಳ್ಳುವಂತೆ ಈಗಾಗಲೇ ತಾಲೂಕಿನ ಪಿಡಿಓಗಳ ಸಭೆ ಕರೆದು ಸೂಚಿಸಲಾಗಿದೆ. ಆದರೆ ಸಿದ್ದಾಪುರ ಗ್ರಾಮದಲ್ಲಿನ ನೀರಿನ ಸಮಸ್ಯೆ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಹೀಗಾಗಿ ನಾನೇ ಖುದ್ದು ಭೇಟಿ ನೀಡಿ ಸಮಸ್ಯೆ ಬಗೆಹರಿಸುತ್ತೇನೆ. – ಧರಣೇಶ್, ತಾಪಂ ಇಓ.

ಪ್ರತಿಭಟನೆಯಲ್ಲಿ ಗ್ರಾಮಸ್ಥರಾದ ಸಿದ್ದರಾಜು, ಸುರೇಶ್, ಸುನೀಲ್, ವೆಂಕಟೇಶ್, ಶಂಕರ ನಾಯಕ್, ಯೋಗೇಶ್, ವಿನೋದ್, ಜೈರಾಮ್, ಮನೋಜ್, ಮಹದೇವಸ್ವಾಮಿ, ಬಸವರಾಜು, ನೀಲಿಬಾಯಿ, ಲಕ್ಷ್ಮಿಬಾಯಿ, ನಾಗನಾಯಕ್, ಪದ್ಮ, ರುದ್ರೇಶ್, ಮಂಜು, ಶಿಲ್ಪಾ, ಕೃಷ್ಣ, ಲಕ್ಷ್ಮಣ ನಾಯಕ್, ಕುಮಾರ್ ಇದ್ದರು.

ಕಪ್ಪಡಿ ಜಾತ್ರಾ ಮಹೋತ್ಸವಕ್ಕೆ ಅದ್ಧೂರಿ ತೆರೆ



ಕಪ್ಪಡಿ ಕ್ಷೇತ್ರದಲ್ಲಿ ಮಹಾ ಮಾದಲಿ ಪ್ರಸಾದ ಖರೀದಿಸಲು ಭಕ್ತರು ನೆರೆದಿರುವುದು

ಕೆ.ಆರ್.ನಗರ, ಮಾ.13– ತಾಲೂಕಿನ ಪ್ರಸಿದ್ಧ ಕಪ್ಪಡಿ ಕ್ಷೇತ್ರದಲ್ಲಿ ಮಹಾ ಶಿವರಾತ್ರಿಯಂದು ಆರಂಭವಾಗಿದ್ದ ಜಾತ್ರಾ ಮಹೋತ್ಸವಕ್ಕೆ ಶುಕ್ರವಾರ ಅದ್ಧೂರಿ ಮಹಾಮಾದಲಿ ಸೇವೆ ನಡೆಸುವ ಮೂಲಕ ತೆರೆ ಎಳೆಯಲಾಯಿತು.

ಕಾವೇರಿ ನದಿ ದಂಡೆಯ ಹಸಿರು ತೋಪಿನಲ್ಲಿರುವ ಕಪ್ಪಡಿ ಕ್ಷೇತ್ರಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ರಾಚಪ್ಪಾಜಿ, ಚನ್ನಾಜಮ್ಮನವರ ಗದ್ದಿಗೆ, ಸಿದ್ದಪ್ಪಾಜಿ ದೇವಸ್ಥಾನ, ಉರಿ ಗದ್ದಿಗೆ, ಮಂಟೇಸ್ವಾಮಿ, ಬಸವಣ್ಣ ದೇಗುಲವಿದ್ದು, ನೀಲಗಾರರ ಸಂಪ್ರದಾಯದಂತೆ ಭಕ್ತರಿಂದ ಗದ್ದುಗೆ, ಕಂಡಾಯ ಪೂಜೆ ನಡೆಯುತ್ತದೆ. ಕ್ಷೇತ್ರದಲ್ಲಿ ಭೋಜನ ಶಾಲೆ ಇದ್ದು, ಜಾತ್ರೋತ್ಸವ ಸಂದರ್ಭ ನಿತ್ಯ ಪ್ರಸಾದ ವಿನಿಯೋಗ ನಡೆಯುತ್ತದೆ. ಪ್ರತಿ ವರ್ಷದಂತೆ ಈ ವರ್ಷವೂ ಜಾತ್ರೋತ್ಸವದ ಕೊನೆ ದಿನಗಳಂದು ದೂರದ ಊರುಗಳಿಂದ ಸಾಕಷ್ಟು ಸಂಖ್ಯೆಯಲ್ಲಿ ಆಗಮಿಸಿದ್ದ ಭಕ್ತರು ಗುರುವಾರ ಮತ್ತು ಶುಕ್ರವಾರ ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿದ್ದರು.

ಕುಟುಂಬ ಸದಸ್ಯರು, ಸ್ನೇಹಿತರೊಂದಿಗೆ ಕಪ್ಪಡಿ ಕ್ಷೇತ್ರಕ್ಕೆ ಆಗಮಿಸಿದ್ದ ಭಕ್ತರು ಮಾಂಸ, ಸಸ್ಯಾಹಾರ ಅಡುಗೆ ತಯಾರಿಸಿ ಸವಿದರು. ಅಲ್ಲದೇ ಗುರುವಾರ ದೇವರ ದರ್ಶನ ಪಡೆದ ಭಕ್ತರು ಮಹಾ ಮಾದಲಿ ಪ್ರಸಾದ ಸೇವೆಯಲ್ಲಿ ಭಾಗಿಯಾಗಿ, ಮಾರಾಟಕ್ಕೆ ಇಡಲಾಗಿದ್ದ ಪ್ರಸಾದ ಖರೀದಿಸಿದರು.

ಶುಕ್ರವಾರ ಗದ್ದುಗೆ ಮಹಾಭಿಷೇಕಕ್ಕೂ ಭಕ್ತರು ಹೆಚ್ಚಾಗಿ ಸೇರಿದ್ದರು. ಮಹಾಭಿಷೇಕ ನಡೆದ ನಂತರ ಮಧ್ಯಾಹ್ನ ಕಪ್ಪಡಿ ಕ್ಷೇತ್ರದ ಪೀಠಾಧಿಪತಿ ಶ್ರೀಕಂಠ ಸಿದ್ದಲಿಂಗರಾಜೇ ಅರಸ್ ಅವರು ಕಪ್ಪಡಿಯಿಂದ ನಿರ್ಗಮಿಸಿದರು.

ಮಳವಳ್ಳಿಯ ಕುಂದೂರು ಗ್ರಾಮದ ಗುಡ್ಡಪ್ಪ ಮಾತನಾಡಿ, ಪ್ರತಿ ವರ್ಷ ಮಹಾ ಮಾದಲಿ ಸೇವೆಗೆ 3 ದಿನ ಮುಂಚೆ ಕಂಡಾಯ ಹೊತ್ತು ಬರುತ್ತೇನೆ. ಇಲ್ಲಿಯೇ ತಂಗಿ ಉರಿ ಗದ್ದುಗೆಗೆ ಬಂದು ಪೂಜೆ ಸಲ್ಲಿಸಿ ಹೋಗುವುದರಿಂದ ದೇವರು ನಮಗೆ ಆಶೀರ್ವಾದ ಮಾಡುತ್ತಾರೆ. ಇದರಿಂದ ಬೆಟ್ಟದಷ್ಟು ಕಷ್ಟಗಳು ಬಂದರೂ ನೀರಿನಂತೆ ಕರಗಿ ಹೋಗುತ್ತವೆ. ಮನೆ ದೇವರು ಆಗಿದ್ದರಿಂದ ಹಲವು ವರ್ಷಗಳಿಂದಲೂ ಕಪ್ಪಡಿ ಕ್ಷೇತ್ರಕ್ಕೆ ಬರುತ್ತಿದ್ದೇನೆ. ಮುಡಿ ಕೊಟ್ಟು ಪೂಜೆ ಸಲ್ಲಿಸಿದ್ದೇನೆ ಎಂದರು.

ಹುಣಸೂರಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



ಕಾರ್ಯಕ್ರಮವನ್ನು ಪೌರಾಯುಕ್ತೆ ಮಾನಸ ಉದ್ಘಾಟಿಸಿದರು.

ಹುಣಸೂರು, ಮಾ.13– ಮಹಿಳೆ ದುರ್ಬಲಳಲ್ಲ, ಅವಳು ಸಬಲಳು ಎಂದು ನಗರ ಸಭಾ ಪೌರಾಯುಕ್ತೆ ಮಾನಸ ತಿಳಿಸಿದರು.

ನಗರದ ಗುರುಗಳಕಟ್ಟೆ ಬಡಾವಣೆಯಲ್ಲಿ ದಸಂಸ ಮತ್ತು ದಲಿತ ಮಹಿಳಾ ಒಕ್ಕೂಟದಿಂದ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಬಡ ಮಹಿಳೆ ಪಾರ್ವತಮ್ಮ ಅವರ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಿ ಮಹಿಳೆಯರ ಜಾಗೃತಿ ಕಾರ್ಯಕ್ರಮ ಮಾತನಾಡಿದ ಅವರು, ಮಹಿಳೆಯರು ನಾವು ಅಸಹಾಯಕರು ಎಂಬ ಮನೋಭಾವನೆ ಬಿಡಬೇಕು. ನಾನು ಅನಾಥಳು, ನನಗೆ ಯಾರೂ ಇಲ್ಲ, ನನ್ನಿಂದ ಆಗುವುದಿಲ್ಲ ಎಂಬ ಮನಸ್ಥಿತಿಯಿಂದ ಹೊರ ಬರಬೇಕು. ಇತಿಹಾಸದ ಕೆಲವು ಘಟನೆಗಳನ್ನು ನೋಡಿದಾಗ ಯಾವುದೇ ಬದಲಾವಣೆ ಮಹಿಳೆಯಿಂದಲೇ ಆಗಿರುತ್ತದೆ ಎಂಬುದನ್ನು ಮರೆಯಬಾರದು ಎಂದರು.

ಶಿಕ್ಷಣದಿಂದ ವಂಚಿತರಾಗಿದ್ದ ಬಹುಜನರಿಗೆ ಜ್ಯೋತಿಬಾ ಫುಲೆ ಅವರ ಪತ್ನಿ ಸಾವಿತ್ರಿಬಾಯಿ ಫುಲೆ ಅವರು ದಲಿತರ ಕೇರಿಗಳಿಗೆ ತೆರಳಿ ಅವರ ಮಕ್ಕಳಿಗೆ ಶಿಕ್ಷಣ ಕಲಿಸುವ ವೇಳೆ ಅನೇಕ ತೊಂದರೆಗಳು ಬಂದರೂ, ಎದೆಗುಂದದೆ ಶಿಕ್ಷಣ ವಂಚಿತ ಮಹಿಳೆಯರಿಗೆ ಶಿಕ್ಷಣ ನೀಡಿದರು ಎಂದರು.

ಸಾರ್ವಜನಿಕ ಆಸ್ಪತ್ರೆ ಮಕ್ಕಳ ತಜ್ಞೆ ಡಾ.ಸುಜಾತ ಮಾತನಾಡಿ, ಮಹಿಳೆಯರು ಆರೋಗ್ಯದ ಬಗ್ಗೆ ಹೆಚ್ಚು ಗಮನ ಹರಿಸಬೇಕು. ಅಡಿಗೆ ಮನೆಗಳೇ ಚಿಕಿತ್ಸೆ ಕೇಂದ್ರಗಳಾಗಬೇಕು. ನಮ್ಮ ಆಹಾರ ಪದ್ಧತಿಗಳು ಬದಲಾಗಬೇಕು. ವ್ಯಾಯಾಮ, ಧ್ಯಾನಗಳನ್ನು ನಿರ್ದಿಷ್ಟ ಸಮಯದಲ್ಲಿ ಮಾಡಿ ರೋಗಗಳು ಬಾರದಂತೆ ಮುನ್ನೆಚ್ಚರಿಕೆ ವಹಿಸಬೇಕು. ಎಲ್ಲದಕ್ಕೂ ಆಸ್ಪತ್ರೆಗಳನ್ನು ಅವಲಂಬಿಸಬಾರದು. ಮಹಿಳೆ ಆರೋಗ್ಯವಾದ್ದರೆ ಕುಟುಂಬ, ಕುಟುಂಬ ಆರೋಗ್ಯವಾಗಿದ್ದರೆ ಸಮಾಜ ಆರೋಗ್ಯವಾಗಿರುತ್ತದೆ. ದ್ವೇಷ–ಅಸೂಯೆ, ಕೋಪಗಳನ್ನು ಬಿಟ್ಟು, ಪ್ರೀತಿ, ಕರುಣೆ, ಸಹನೆಗಳನ್ನು ಮೈಗೂಡಿಸಿಕೊಳ್ಳಬೇಕು. ಕಷ್ಟದಲ್ಲಿರುವವರಿಗೆ ಸಹಾಯ ಮಾಡಬೇಕು. ಆಗ ಮಾತ್ರ ಪ್ರತಿಯೊಬ್ಬ ಮಹಿಳೆಯೂ ಮಾನಸಿಕವಾಗಿ ಆರೋಗ್ಯವಂತಳಾಗಿರಲು ಸಾಧ್ಯ ಎಂದರು.

ಚಿಕ್ಕ ವಯಸ್ಸಿನಲ್ಲಿ ಬಾಲ್ಯ ವಿವಾಹ ಮಾಡಬಾರದು. ಲಿಂಗ ಪತ್ತೆ ಮಾಡಿ ಹೆಣ್ಣು ಭ್ರೂಣ ಹತ್ಯೆ ಮಾಡಬಾರದು. ಇದು ಕಾನೂನಿನಲ್ಲಿ ಶಿಕ್ಷಾರ್ಹ ಅಪರಾಧವಾಗಿದೆ. ಹೆಣ್ಣು ಭ್ರೂಣ ಹತ್ಯೆಯಿಂದಾಗಿ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗಿ ಸಮಾಜದಲ್ಲಿ ಅಸಮತೋಲನ ಉಂಟಾಗಿ ಅಧಃಪತನವಾಗುವ ಅಪಾಯ ಎದುರಾಗಲಿದೆ ಎಂದರು.

ಕಲ್ಕುಣಿಕೆ ಗ್ರಾಮದ ಭವ್ಯ ಅಧ್ಯಕ್ಷತೆ ವಹಿಸಿದ್ದರು. ದಸಂಸ ಸಂಘಟನಾ ಸಂಚಾಲಕ ನಿಂಗರಾಜ್ ಮಲ್ಲಾಡಿ ಮಾತನಾಡಿದರು. ದಲಿತ ಮುಖಂಡ ಬಸವಲಿಂಗಯ್ಯ, ಅಬ್ದುಲ್ ಮಾಲೀಕ್, ಮಹದೇವ, ಗೌರಮ್ಮ, ದಲಿತ ಮಹಿಳಾ ಒಕ್ಕೂಟದ ಲಕ್ಷ್ಮಿ, ನೇತ್ರ, ಅಂಬೇಡ್ಕರ್ ನಗರದ ದಾಸಪ್ಪ, ಶೋಭಮ್ಮ, ರಾಜೇಶ್ ನಾಯಕ, ಸಿದ್ದರಾಜು, ಚಂದ್ರನಾಯಕ, ರಾಜನಾಯಕ, ಪುಟ್ಟನಾಯಕ, ಕುಮಾರನಾಯಕ, ಪುಟ್ಟಸ್ವಾಮಿ, ಕೆಂಪರಾಜು, ಗಜೇಂದ್ರ, ಮಹಿಳೆಯರಾದ ಮಂಜುಳಾ, ಮಂಗಳ, ಗೀತಾ, ಲಕ್ಷ್ಮಿ, ಶಿವಮ್ಮ, ಕಾವೇರಿ, ಕವಿತಾ, ಜ್ಯೋತಿ, ಪಾರ್ವತಿ, ಮಹದೇವಿ, ಜಯಮ್ಮ, ಚನ್ನಾಜಮ್ಮ, ಹುಚ್ಚಮ್ಮ, ದೇವಮ್ಮ, ಪುಟ್ಟಸಿದ್ದಮ್ಮ ಇತರರಿದ್ದರು.

ಮಾ.16, ಜ್ಯೋತಿರ್ಲಿಂಗ ದರ್ಶನ



ನಂಜನಗೂಡು, ಮಾ.13– ಆರ್ಟ್ ಆಫ್ ಲಿವಿಂಗ್ ವತಿಯಿಂದ ಮಾ.16 ರಂದು ನಗರದ ಶ್ರೀಅಯ್ಯಪ್ಪಸ್ವಾಮಿ ದೇವಾಲಯದಲ್ಲಿ ಸಾರ್ವಜನಿಕರಿಗೆ ಗುಜರಾತ್‌ನ ಪ್ರಸಿದ್ಧ ಸೋಮನಾಥ ದೇವಾಲಯದ ಆಯಸ್ಕಾಂತೀಯ ಅಪರೂಪದ ಶಿಲೆಯುಳ್ಳ ಪವಿತ್ರ ಸೋಮನಾಥ ಜ್ಯೋತಿರ್ಲಿಂಗದ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದು ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ನಾಗನಂದಿನಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾವಿರ ವರ್ಷಕ್ಕೂ ಹಳೆಯದಾದ ಸೋಮನಾಥ ದೇವಾಲಯದ ಶಿವಲಿಂಗವು ದಾಳಿಕೋರರ ಸಂಚಿನಿಂದ ನಾಶವಾಯಿತು. ಆದರೆ ಅದನ್ನು ಅಗ್ನಿಹೋತ್ರಿ ಮಹರ್ಷಿ ಸಂರಕ್ಷಿಸಿದ್ದರು ಎಂಬ ವಾಡಿಕೆ ಇದ್ದು, ನೂರು ವರ್ಷದ ಹಿಂದೆ ಕಂಚಿ ಶ್ರೀಗಳನ್ನು ಈ ಶಿವಲಿಂಗದ ಪ್ರತಿಷ್ಠಾಪನೆ ಬಗ್ಗೆ ವಿಚಾರಿಸಲಾಗಿ, ಅವರು ಅಯೋಧ್ಯ ದೇವಾಲಯ ನಿರ್ಮಾಣದ ನಂತರ 2025ರಲ್ಲಿ ಆರ್ಟ್ ಆಫ್ ಲಿವಿಂಗ್ ಸಂಸ್ಥೆ ರವಿಶಂಕರ್ ಗುರೂಜಿ ಎಂಬುವರು ಈ ಶಿವಲಿಂಗವನ್ನು ಪ್ರತಿಷ್ಠಾಪನೆ ನಡೆಸುತ್ತಾರೆ ಅವರಿಗೆ ಈ ಶಿವಲಿಂಗವನ್ನು ಒಪ್ಪಿಸಿ ಎಂದು ಹೇಳಿದ್ದರು. ಅದರಂತೆ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ರವಿಶಂಕರ್ ಗುರೂಜಿ ಅವರು ಇಡೀ ಭಾರತದ್ಯಾಂತ ಸೋಮನಾಥ ಜ್ಯೋತಿರ್ಲಿಂಗದ ದರ್ಶನ ಯಾತ್ರೆ ಹಮ್ಮಿಕೊಂಡಿದ್ದಾರೆ. ಇದರ ಅಂಗವಾಗಿ ನಂಜನಗೂಡಿನ ಕಪಿಲಾ ನದಿ ತೀರದಲ್ಲಿರುವ ಶ್ರೀಅಯ್ಯಪ್ಪ ಸ್ವಾಮಿ ದೇವಾಲಯದಲ್ಲಿ ಮಾ.16ರಂದು ಸಂಜೆ 4 ರಿಂದ 8 ರವರೆಗೆ ಜ್ಯೋತಿರ್ಲಿಂಗದ ದಿವ್ಯ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದ್ದು, ಈ ವೇಳೆ ರುದ್ರಾಭಿಷೇಕ ನಡೆಯಲಿದೆ. ಸಾರ್ವಜನಿಕರು ಮತ್ತು ಸದ್ಭಕ್ತರು ಕುಟುಂಬ ಸಮೇತರಾಗಿ ಆಗಮಿಸಿ ಸೋಮನಾಥ ಜ್ಯೋತಿರ್ಲಿಂಗದ ದರ್ಶನ ಪಡೆದು ದೇವರ ಕೃಪೆಗೆ ಪಾತ್ರರಾಗಬೇಕು ಎಂದು ಮನವಿ ಮಾಡಿದರು. ಈ ವೇಳೆ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಆರ್.ಹೆಚ್.ರವಿಕುಮಾರ್, ವಿಶ್ವನಾಥ್ ಉಪಸ್ಥಿತರಿದ್ದರು.

ನಾಳೆ ಉಚಿತ ಆರೋಗ್ಯ ತಪಾಸಣಾ ಶಿಬಿರ

ಸರಗೂರು, ಮಾ.13– ಜೆಎಸ್‌ಎಸ್ ಆಸ್ಪತ್ರೆ ಮೈಸೂರು, ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ ಜಿಲ್ಲಾ ಘಟಕ ಮೈಸೂರು ಹಾಗೂ ರೋಟರಿ ಮೈಸೂರು ಉತ್ತರ ಇವರ ಸಂಯುಕ್ತಾಶ್ರಯದಲ್ಲಿ ಮಾ.15 ರಂದು ತಾಲೂಕಿನ ಬಿ.ಮಟಕೆರೆ ಸಹಕಾರ ಭವನದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಶಿಬಿರದ ಸಾನಿಧ್ಯವನ್ನು ದಡದಹಳ್ಳಿಯ ಷಡಕ್ಷರಿ ಸ್ವಾಮೀಜಿ ಹಾಗೂ ಹಂಚೀಪುರದ ಚನ್ನಬಸವ ಸ್ವಾಮೀಜಿ ವಹಿಸಲಿದ್ದು, ಶಾಸಕ ಅನಿಲ್ ಚಿಕ್ಕಮಾದು ಅಧ್ಯಕ್ಷತೆ ವಹಿಸಲಿದ್ದಾರೆ. ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್ ಶಿಬಿರ ಉದ್ಘಾಟಿಸಲಿದ್ದಾರೆ.

ಏ.2, ಶ್ರೀಗುಂಜಾನರಸಿಂಹಸ್ವಾಮಿ ದಿವ್ಯ ಮಹಾ ರಥೋತ್ಸವ

ವಿಜೃಂಭಣೆಯ ಆಚರಣೆಗೆ ಪೂರ್ವಭಾವಿ ಸಭೆಯಲ್ಲಿ ನಿರ್ಧಾರ



ಶ್ರೀಗುಂಜಾನರಸಿಂಹಸ್ವಾಮಿ ರಥೋತ್ಸವ ಸಂಬಂಧ ಪೂರ್ವಭಾವಿ ಸಭೆ ನಡೆಯಿತು.

ತಿ.ನರಸೀಪುರ, ಮಾ.13– ಪಟ್ಟಣದ ಶ್ರೀಗುಂಜಾನರಸಿಂಹಸ್ವಾಮಿ ದಿವ್ಯ ಮಹಾ ರಥೋತ್ಸವವನ್ನು ಏ.2ರಂದು ವಿಜೃಂಭಣೆಯಿಂದ ಆಚರಿಸಲು ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಯಿತು.

ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಮಾತನಾಡಿ, ಕಾಶಿಗಿಂತ ಗುಲಗಂಜಿ ಗಾತ್ರ ಎನಿಸಿರುವ ಕಾವೇರಿ ಮತ್ತು ಕಪಿಲಾ ನದಿ ತೀರದಲ್ಲಿರುವ ಶ್ರೀಗುಂಜಾನರಸಿಂಹಸ್ವಾಮಿ ಮಹಾ ರಥೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಳ್ಳುವುದರಿಂದ ಅವರಿಗೆ ಯಾವುದೇ ತೊಂದರೆಯಾಗದಂತೆ ಸಕಲ ವ್ಯವಸ್ಥೆ ಮಾಡುವಂತೆ ತಿಳಿಸಿದರು.

ನಿಗದಿತ ಸಮಯದಲ್ಲೇ ರಥೋತ್ಸವ ನಡೆಸಬೇಕು. ಯಾವ ಇಲಾಖೆ ಏನೇನೂ ಕೆಲಸ ಮಾಡಬೇಕು ಎಂಬುದರ ಬಗ್ಗೆ ನನ್ನ ಜೊತೆ ಚರ್ಚಿಸಬೇಕು ಎಂದ ಅವರು, ಒಟ್ಟಿನಲ್ಲಿ ಎಲ್ಲರೂ ಕೈ ಜೋಡಿಸಿ ರಥೋತ್ಸವ ಯಶಸ್ವಿಯಾಗಿ ನಡೆಯಲು ಸಹಕರಿಸಬೇಕು ಎಂದರು.

ತಹಸೀಲ್ದಾರ್ ಸುರೇಶ್ ಆಚಾರ್ ಮಾತನಾಡಿ, ಇದು ನಮ್ಮ ಊರ ಹಬ್ಬ. ಸುತ್ತಮುತ್ತಲಿನ ಐದು ಗ್ರಾಮಗಳ ಗ್ರಾಮಸ್ಥರು ಸೇರಿ ಅದ್ಧೂರಿಯಾಗಿ ರಥೋತ್ಸವಕ್ಕೆ ಮುಂದಾಗಿದ್ದೀರಿ. ಹೀಗಾಗಿ ಯಾವುದೇ ಅಹಿತಕರ ಘಟನೆಗೆ ಆಸ್ಪದ ನೀಡದಂತೆ ಎಲ್ಲಾ ಸೌಲಭ್ಯ ಕಲ್ಪಿಸುವ ಮೂಲಕ ರಥೋತ್ಸವದ ಯಶಸ್ಸಿಗೆ ಸಹಕರಿಸಲಾಗುವುದು ಎಂದರು.

ಕೆಬ್ಬೆ ಯಜಮಾನ ಕೃಷ್ಣ ಮಾತನಾಡಿ, ರಥೋತ್ಸವದ ವೇಳೆ ಭಕ್ತರಿಗೆ ಯುವಕರು ಬಣ್ಣ ಬಳಿಯುವುದನ್ನು ತಪ್ಪಿಸಬೇಕು ಎಂದು ಮನವಿ ಮಾಡಿದ ಅವರು, ರಥೋತ್ಸವ ವೇಳೆ ಕುಡಿಯುವ ನೀರು, ಸ್ವಚ್ಛತೆಗೆ ಹೆಚ್ಚು ಆದ್ಯತೆ ನೀಡಬೇಕು. ಅಲ್ಲದೇ ಈ ಬಾರಿ ಹೆಚ್ಚು ಪ್ರಚಾರ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಪಾರುಪತ್ತೇದಾರ್ ದೀಪು, ತಿ.ನರಸೀಪುರ ಯಜಮಾನರಾದ ಮಹದೇವಸ್ವಾಮಿ, ರಾಜು, ಆಲಗೂಡು ಯಜಮಾನರಾದ ಸಿದ್ದನಾಯ್ಕ, ರಂಗಪ್ಪ, ಶಿವರಾಜ್, ಸಿ.ಮಹದೇವ್, ಪುಳ್ಳಾರಿಗೌಡ, ಮಹದೇವಪ್ಪ, ಪುರಸಭಾ ಮಾಜಿ ಸದಸ್ಯ ಮಹದೇವಸ್ವಾಮಿ, ಟಿ.ಎಸ್.ಶಾಂತರಾಜು, ಶಾಮಿಯಾನ ವೀರೇಶ್, ಲೋಕೋಪಯೋಗಿ ಇಲಾಖೆಯ ಸತೀಶ್ ಚಂದ್ರ ಸೆಸ್ಕಾಂ ವೀರೇಶ್, ಆರ್‌ಐ ಮಹೇಂದ್ರ, ವಿಎ ವಿಕಾಸ್ ಇತರರಿದ್ದರು.

ಜಿ.ಟಿ.ದೇವೇಗೌಡರಿಂದ ದೇವರ ದರ್ಶನ



ಮೈಸೂರು ತಾಲೂಕಿನ ಜಯಪುರದ ಗ್ರಾಮದೇವತೆ ಗುಜ್ಜಮ್ಮತಾಯಿ ಜಾತ್ರಾ ಮಹೋತ್ಸವ ಪ್ರಯುಕ್ತ ಶಾಸಕ ಜಿ.ಟಿ.ದೇವೇಗೌಡ ದೇವಾಲಯಕ್ಕೆ ಆಗಮಿಸಿ ದೇವರ ದರ್ಶನ ಪಡೆದರು. ಈ ವೇಳೆ ಬಸವಣ್ಣ, ಜವರನಾಯಕ, ಸಮಾಜ ಸೇವಕ ಎಸ್.ಶ್ರೀಕಾಂತ್, ಅಬ್ದುಲ್ ಮುತಾಲೀಫ್, ಎಂ.ನಾಗರಾಜು, ಬರಡನಪುರ ಬಸವಣ್ಣ, ಮಹದೇವಸ್ವಾಮಿ, ಚಿಕ್ಕಣ್ಣ, ಅಂಕಪ್ಪ ಇನ್ನಿತರರಿದ್ದರು.

ಚಿರತೆ ದಾಳಿ: ಕಾರ್ಮಿಕನಿಗೆ ಗಾಯ



ಹನಗೋಡು, ಮಾ.13– ಚಿರತೆ ದಾಳಿಗೆ ಕೂಲಿ ಕಾರ್ಮಿಕ ಗಾಯಗೊಂಡಿರುವ ಘಟನೆ ಇಲ್ಲಿಗೆ ಸಮೀಪದ ಕಣಗಾಲು ಗ್ರಾಮದ ಬಳಿಯ ಕಂಪಲಾಪುರ ರಸ್ತೆಯಲ್ಲಿ ನಡೆದಿದೆ.

ಕಣಗಾಲು ಗ್ರಾಮದ ನಿವಾಸಿ ಮಾದೇಶ್ ನಾಯಕ ಗಾಯಗೊಂಡವರು. ಈತ ಎಂದಿನಂತೆ ಜಮೀನಿನ ಬೂರುಗದ ಮರಗಳಲ್ಲಿ ಮರಾಟ್ ಮೊಗ್ಗುಗಳನ್ನು ಸಂಗ್ರಹಿಸಲು ತೆರಳಿದ್ದ ವೇಳೆ ದಾಳಿ ನಡೆಸಿದ ಚಿರತೆ ಕುತ್ತಿಗೆ ಬಳಿ ಗಾಯಗೊಳಿಸಿದೆ. ಈ ವೇಳೆ ಮಾದೇಶ್ ನಾಯಕನ ಕೂಗಾಟದಿಂದ ಅಕ್ಕಪಕ್ಕದ ಜಮೀನಿನಲ್ಲಿದ್ದ ರೈತರು ಸ್ಥಳಕ್ಕಾಗಮಿಸಿದ್ದರಿಂದ ಚಿರತೆ ಪರಾರಿಯಾಗಿದೆ. ತಕ್ಷಣ ಮಾದೇಶ್ ನಾಯಕನನ್ನು ಪಿರಿಯಾಪಟ್ಟಣ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿಷಯ ತಿಳಿದು ಪಿರಿಯಾಪಟ್ಟಣ ಪ್ರಾದೇಶಿಕ ಅರಣ್ಯ ವಿಭಾಗದ ಆರ್‌ಎಫ್‌ಓ ಪದ್ಮಶ್ರೀ, ಡಿಆರ್ ಎಫ್‌ಓ ಪಾರ್ವತಿ ಪಿರಿಯಾಪಟ್ಟಣ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳು ಆರೋಗ್ಯ ವಿಚಾರಿಸಿದರು. ಡಿಸಿಎಫ್ ಕಿರುಬನಾಥನ್ ಗಾಯಾಳುವಿನ ವೆಚ್ಚವನ್ನು ಇಲಾಖೆಯಿಂದಲೇ ಭರಿಸಲಾಗುವುದೆಂದು ತಿಳಿಸಿದರು.

ರಾಜಪ್ಪ ನಿಧನ



ಹೆಚ್.ಡಿ.ಕೋಟೆ, ಮಾ.13– ತಾಲೂಕಿನ ಬೀಚನಹಳ್ಳಿ ಗ್ರಾಮದ ತಲಕಾಡು ಕ್ಯಾಂಪಿನ ನಿವಾಸಿ ರಾಜಪ್ಪ(80) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಸ್ವಗ್ರಾಮದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಹೊಮ್ಮರಗಳ್ಳಿ: ಇಂದಿನಿಂದ ಶ್ರೀದುರ್ಗಾಪರಮೇಶ್ವರಿ ಜಾತ್ರಾ ಮಹೋತ್ಸವ

ಹಂಪಾಪುರ, ಮಾ.13– ಹೆಚ್.ಡಿ.ಕೋಟೆ ತಾಲೂಕಿನ ಹೊಮ್ಮರಗಳ್ಳಿಯಲ್ಲಿ ಶ್ರೀದುರ್ಗಾಪರಮೇಶ್ವರಿ ಅಮ್ಮನವರ ಜಾತ್ರಾ ಮಹೋತ್ಸವ ಮಾ.14ರಿಂದ 16ರವರೆಗೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾ.14ರಂದು ಸಂಜೆ 7.30ಕ್ಕೆ ದೇವಾಲಯದಲ್ಲಿ ದೇವಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಲಾಗುವುದು. ಮಾ.15ರಂದು ಬೆಳಗ್ಗೆ 9.30ಕ್ಕೆ ಅಮ್ಮನವರಿಗೆ ಚಂಡಿಹೋಮ ಸೇರಿದಂತೆ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದೆ. ಮಾ.16ರಂದು ಮಧ್ಯಾಹ್ನ 3ರಿಂದ ರಾತ್ರಿ 8ರವರೆಗೆ ಉತ್ಸವ ಮೂರ್ತಿಗಳ ಮೆರವಣಿಗೆ ಮತ್ತು ದೇವಿಗೆ ವಿಶೇಷ ಪೂಜೆ ನಡೆಯಲಿದೆ. ಹೀಗಾಗಿ ಸುತ್ತಮುತ್ತಲ ಗ್ರಾಮಸ್ಥರು, ಸಾರ್ವಜನಿಕರು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರ ಕೃಪೆಗೆ ಪಾತ್ರರಾಗುವಂತೆ ಪ್ರಕಟಣೆ ತಿಳಿಸಿದೆ.

ಮಾ.16, ಶ್ರೀನಂಜುಂಡಸ್ವಾಮಿಯವರ ಸಂಸ್ಮರಣೋತ್ಸವ



ಶ್ರೀಬಸವರಾಜೇಂದ್ರ ಸ್ವಾಮೀಜಿ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆಗೊಳಿಸಿದರು.

ತಿ.ನರಸೀಪುರ, ಮಾ.13– ಮಳವಳ್ಳಿ ತಾಲೂಕಿನ ಸರಗೂರು ಹೊಸ ಮಠದಲ್ಲಿ ಮಾ.16 ರಿಂದ 18ರವರೆಗೆ ಶ್ರೀಮಲೆ ಮಹದೇಶ್ವರಸ್ವಾಮಿ ನೂತನ ಹುಲಿ ವಾಹನದ ಸಂಪ್ರೋಕ್ಷಣೆ, ಲಿಂಗೈಕ್ಯ ಶ್ರೀನಂಜುಂಡಸ್ವಾಮಿಯವರ 16ನೇ ಸಂಸ್ಮರಣೋತ್ಸವ ಹಾಗೂ ಶ್ರೀಕಪ್ಪಡಿ ಕ್ಷೇತ್ರದಿಂದ ಬರುವ ಭಕ್ತರಿಗೆ ದಾಸೋಹ ಆಯೋಜಿಸಲಾಗಿದೆ ಎಂದು ಹೊಸ ಮಠದ ಶ್ರೀಬಸವರಾಜೇಂದ್ರ ಸ್ವಾಮೀಜಿ ತಿಳಿಸಿದರು.

ಸರಗೂರಿನ ಹೊಸ ಮಠದಲ್ಲಿ ಸೋಮವಾರದಿಂದ ನಡೆಯುವ ಧಾರ್ಮಿಕ ಕಾರ್ಯಕ್ರಮದ ಬಗ್ಗೆ ಹೊಸ ತಿರುಮಕೂಡಲಿನ ಸೇತುವೆ ಮಠದಲ್ಲಿ ಶುಕ್ರವಾರ ಮಾಹಿತಿ ನೀಡಿ, ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಪ್ರತಿ ವರ್ಷ ಯುಗಾದಿ ಹಬ್ಬದ ಹಿಂದಿನ 3 ದಿನಗಳ ಕಾಲ ಕಪ್ಪಡಿ ಶ್ರೀರಾಚಪ್ಪಾಜಿ ಸನ್ನಿಧಿಯಿಂದ ಧರೆಗೆ ದೊಡ್ಡವರ ಶ್ರೀಕ್ಷೇತ್ರ ಬೊಪ್ಪೇಗೌಡನಪುರಕ್ಕೆ ಬರುವ ಸಾವಿರಾರು ಭಕ್ತರಿಗೆ ದಾಸೋಹ ವ್ಯವಸ್ಥೆ ಮಾಡಲಾಗುತ್ತಿದೆ. ಅದರಂತೆ ಈ ವರ್ಷವೂ ಸರಗೂರು ಹೊಸ ಮಠದ ಶ್ರೀನಂಜುಂಡಸ್ವಾಮಿಗಳ ಸೇವಾ ಟ್ರಸ್ಟ್ ವತಿಯಿಂದ ದಾಸೋಹ ವ್ಯವಸ್ಥೆ ಮಾಡಲಾಗುತ್ತಿದೆ ಎಂದರು.

ಮಾ.16ರಂದು ಸಂಜೆ 6 ಗಂಟೆಗೆ ನೂತನ ಶ್ರೀಮಲೆ ಮಹದೇಶ್ವರಸ್ವಾಮಿ ಉತ್ಸವ ಮೂರ್ತಿ ಸಂಪ್ರೋಕ್ಷಣ ಕಾರ್ಯಕ್ರಮ, ಮಾ.17ರಂದು ಬ್ರಾಹ್ಮಿ ಮುಹೂರ್ತದಲ್ಲಿ ರುದ್ರಾಭಿಷೇಕ, ಪ್ರಾಣ ಪ್ರತಿಷ್ಠೆ ನೇತ್ರೋನ್ಮೀಲನ, ಅಲಂಕಾರ ಅಷ್ಟೋತ್ತರ, ಮಹಾಮಂಗಳಾರತಿ ಜರುಗಲಿದೆ. ಸಂಜೆ 5 ಗಂಟೆಗೆ ನಡೆಯುವ ಧಾರ್ಮಿಕ ಸಭೆಯಲ್ಲಿ ಡಾ.ಮುಮ್ಮಡಿ ಶಿವರುದ್ರ ಸ್ವಾಮೀಜಿ, ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಶಿವರುದ್ರ ಶಿವಾಚಾರ್ಯ ಸ್ವಾಮೀಜಿ, ಗೌರಿಶಂಕರ ಸ್ವಾಮೀಜಿ, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಮಂಡ್ಯ ಶ್ರೀಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಎಸ್.ನಾಗರಾಜು, ಬೆಂಗಳೂರಿನ ವೀರಶೈವ ಕ್ಷೇಮಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಕೆ.ಆರ್.ಸಿದ್ದಲಿಂಗರಾಧ್ಯ, ಬಿಡದಿ ಉದ್ಯಮಿ ಹೆಚ್.ಎಸ್.ಶಿವಸ್ವಾಮಿ ಹಾಗೂ ಇನ್ನಿತರ ಗಣ್ಯರು ಭಾಗವಹಿಸಲಿದ್ದಾರೆ.

ಮುಖ್ಯ ಭಾಷಣಕಾರರಾಗಿ ಶಿಕ್ಷಕಿ ಜ್ಯೋತಿ ಪರಮೇಶ್ ಪಟೇಲ್ ಶ್ರೀಮಲೆ ಮಹದೇಶ್ವರಸ್ವಾಮಿ ಹಾಗೂ ಸರಗೂರು ಶರಣರ ಹಿನ್ನೆಲೆ ಕುರಿತು ವಿಷಯ ಮಂಡಿಸಲಿದ್ದಾರೆ ಎಂದರು.

ಬಸವ ಬಳಗದ ಅಧ್ಯಕ್ಷ ಪರಮೇಶ್ ಪಟೇಲ್, ಸೇತುವೆ ಮಠದ ಶ್ರೀಸಹಜಾನಂದಶ್ರೀಗಳು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಕಾರ್ಯದರ್ಶಿ ಕಾರ್ ಮಲ್ಲಪ್ಪ, ನಿರ್ದೇಶಕ ಮಾಯಪ್ಪ, ಶ್ರೀಶಿವಕುಮಾರಸ್ವಾಮಿ ಸೇವಾ ಟ್ರಸ್ಟ್ ಅಧ್ಯಕ್ಷ ನಿಂಗಪ್ಪ, ಮಲ್ಲಿಕಾರ್ಜುನ್ ಇದ್ದರು.

ಮೈಸೂರು ಮಿತ್ರ

ಶನಿವಾರ 14 ಮಾರ್ಚ್ 2026

ವರಕೋಡಲ್ಲಿ ಬೃಹತ್ ಸೇಬಿನ ಹಾರ ಹಾಕಿ ಸಿಎಂಗೆ ಅದ್ಧೂರಿ ಸ್ವಾಗತ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬೃಹತ್ ಸೇಬಿನ ಹಾರ ಹಾಕುತ್ತಿರುವುದು

ಮೈಸೂರು,ಮಾ.13(ಎಂಟಿವೈ)– ಎರಡನೇ ಬಾರಿ ಮುಖ್ಯಮಂತ್ರಿಯಾದ ಬಳಿಕ ಮೊದಲ ಬಾರಿಗೆ ತಮ್ಮ ಗ್ರಾಮಕ್ಕೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ವರಕೋಡು ಗಡಿ ಬೀರೇಶ್ವರಸ್ವಾಮಿ ದೇವಾಲಯ ಸಮಿತಿ ವತಿಯಿಂದ ಸುತ್ತ ಮುತ್ತಲಿನ ಗ್ರಾಮಸ್ಥರು ಹೂವಿನ ಸುರಿಮಳೆ ಯೊಂದಿಗೆ ಬೃಹತ್ ಸೇಬಿನ ಹಾರ ಹಾಕಿ ಸ್ವಾಗತಿಸಿದರು.

ಪುನರ್ ನಿರ್ಮಿಸಿರುವ ವರಕೋಡು ಗ್ರಾಮದ ಬೀರೇಶ್ವರಸ್ವಾಮಿ ದೇವಾಲಯದ ಪುನರ್ ಪ್ರತಿಷ್ಠಾಪನ ಕಾರ್ಯಕ್ರಮ ಮಾ. 10ರಿಂದ ವಿಜೃಂಭಣೆಯಿಂದ ನಡೆಯುತ್ತಿದ್ದು, ಇಂದು ದೇವಾಲಯವನ್ನು ಅಧಿಕೃತವಾಗಿ ಉದ್ಘಾಟಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಮಿಸಿದ್ದರು. ಬೆಳಗ್ಗೆ 11.15ಕ್ಕೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಹೆಲಿಕಾಪ್ಟರ್ ಮೂಲಕ ಆಗಮಿಸಿದ ಸಿಎಂ ಸಿದ್ದರಾಮಯ್ಯ ದೇವಾಲಯದ ಸಮೀಪವೇ ನಿರ್ಮಿಸಿದ್ದ ಹೆಲಿಪ್ಯಾಡ್‌ಗೆ ಪೂರ್ವಾಹ್ನ 11.50ಕ್ಕೆ ಆಗಮಿಸಿದರು. ಬಳಿಕ ತೆರೆದ ವಾಹನದಲ್ಲಿ ದೇವಾಲಯದವರೆಗೂ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು.

ರಸ್ತೆಯ ಎರಡೂ ಬದಿಯಲ್ಲಿ ಕಿಕ್ಕಿರಿದು ನೆರೆದಿದ್ದ ಗ್ರಾಮಸ್ಥರತ್ತ ಕೈ ಬೀಸುತ್ತಾ ದೇವಾಲಯದ ಬಳಿ ಸಿಎಂ ಸಿದ್ದರಾಮಯ್ಯ ಆಗಮಿಸುತ್ತಿದ್ದಂತೆ ಕ್ರೇನ್ ಮೂಲಕ ಬೃಹತ್ ಸೇಬಿನ ಹಾರವನ್ನು ಹಾಕಲಾಯಿತು. ಇದೇ ವೇಳೆ ಎರಡು ಜೆಸಿಬಿಯಿಂದ ಹೂವಿನ ಮಳೆ ಸುರಿಸಲಾಯಿತು.

ದೇವಾಲಯದ ಮೇಲೆ ಗರುಡ ಪ್ರತ್ಯಕ್ಷ: ಮೆರವಣಿಗೆ ಮುಗಿಸಿ ದೇವಾಲಯದ ಆವರಣಕ್ಕೆ ಬರುತ್ತಿದ್ದಂತೆ ದೇವಾಲಯದ ಕಳಸದ ಮೇಲೆ ಗರುಡವೊಂದು ಕುಳಿತುಕೊಂಡಿತ್ತು. ತಮಟೆ, ನಗಾರಿ, ವೀರಮಕ್ಕಳ ಕುಣಿತ, ಮಂಗಳವಾದ್ಯದ ಶಬ್ದ, ದೂಪದಾರತಿ ಹೊಗೆ ಇದ್ದರೂ ಗರುಡ ಕದಲದೇ ಇದ್ದದ್ದು ನೆರೆದಿದ್ದವರಿಗೆ ಆಶ್ಚರ್ಯವನ್ನುಂಟು ಮಾಡಿತು. 10 ರಿಂದ 20 ಸೆಕೆಂಡ್ ಕುಳಿತಿದ್ದ ಗರುಡ ಮತ್ತೆ ಬಲಬದಿಗೆ ಹಾರಿ ಹೋಯಿತು. ಇದನ್ನು ಗಮನಿಸಿದ ಸ್ಥಳೀಯರು ಸಿಎಂಗೆ ಅದನ್ನು ತೋರಿಸಿ ಶುಭ ಸಂಕೇತ ಎಂದು ವಿಶ್ಲೇಷಿಸಿದರು. ಆದರೆ ಸಿಎಂ ಯಾವುದಕ್ಕೂ ಪ್ರತಿಕ್ರಿಯೆ ನೀಡದೆ ದೇವಾಲಯದ ಒಳಗೆ ತೆರಳಿದರು.

ದೇವಾಲಯ ಮೆಚ್ಚಿದ ಸಿಎಂ: ನೂತನ ದೇವಾಲಯವನ್ನು ಉದ್ಘಾಟಿಸಿದ ಸಿದ್ದರಾಮಯ್ಯ ಅವರಿಗೆ ಅರ್ಚಕ ಗಣೇಶ್ ದೀಕ್ಷಿತ್, ಗುಡ್ಡಪ್ಪ ಶಿವು, ಚಿಕ್ಕಣ್ಣ ಸೇರಿದಂತೆ ಇನ್ನಿತರರು ಮಂಗಳಾರತಿ, ತೀರ್ಥ ನೀಡಿ, ಹಣೆಗೆ ಗಂಧ ಹಚ್ಚಿದರು. ಬಳಿಕ ದೇವಾಲಯ ವೀಕ್ಷಿಸಿ ಉತ್ತಮವಾಗಿ ಮೂಡಿ ಬಂದಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಬೆಳ್ಳಿಗದೆ ಸಮರ್ಪಣೆ: ಸಿಎಂ ಆದ ಬಳಿಕ ಮೊದಲ ಬಾರಿಗೆ ಆಗಮಿಸಿದ ಸಿದ್ದರಾಮಯ್ಯ ಅವರಿಗೆ ದೇವಾಲಯದ ವತಿಯಿಂದ ಬೃಹತ್ ಹಾರ ಹಾಕಿ ಬೆಳ್ಳಿಗದೆ ಸಮರ್ಪಿಸಲಾಯಿತು. ಇದೇ ವೇಳೆ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ರೇಷ್ಮೆಗೂಡಿನ ಹಾರ ಹಾಕಿ ಸನ್ಮಾನಿಸಲಾಯಿತು.

ಮುಂಜಾನೆಯಿಂದಲೇ ದೇವಾಲಯದಲ್ಲಿ ಪೂಜೆ

ಬೀರೇಶ್ವರಸ್ವಾಮಿ ದೇವಾಲಯದಲ್ಲಿ ಶುಕ್ರವಾರ ಮುಂಜಾನೆಯಿಂದಲೇ ವಿಶೇಷ ಪೂಜಾ ಕೈಂಕರ್ಯ ಜರುಗಿತ್ತು ಮುಂಜಾನೆ 5.10ರಿಂದ 6.10ರೊಳಗೆ ಸಲ್ಲುವ ಬ್ರಾಹ್ಮಿ ಮುಹೂರ್ತದಲ್ಲಿ ಮಂತ್ರಘೋಷದೊಂದಿಗೆ ಸಂಕಲ್ಪ ನೆರವೇರಿಸಲಾಯಿತು. ಬಳಿಕ ಮೂಲ ವಿಗ್ರಹ ಹಾಗೂ ಬೀರೇಶ್ವರಸ್ವಾಮಿ ಲಿಂಗ ಪ್ರತಿಷ್ಠಾಪನಾ ಕಾರ್ಯ ಜರುಗಿತು. ಬಳಿಕ ದೇವಾಲಯದ ಮುಂಭಾಗದ ಹೋಮ ನೆರವೇರಿಸಿದ ನಂತರ ದೇವಾಲಯದ ಮಹಾದ್ವಾರದಿಂದ ಮೆರವಣಿಗೆಯಲ್ಲಿ ಕುಂಭ ಕಳಸ ತಂದು ಪ್ರತಿಷ್ಠಾಪಿಸಲಾಯಿತು. ನಂತರ ಕುಂಭಾಭಿಷೇಕ, ಸೇರಿದಂತೆ ವಿವಿಧ ಅಭಿಷೇಕ ನೆರವೇರಿಸಲಾಯಿತು. ಬೆಳಗ್ಗಿನಿಂದ ರಾತ್ರಿವರೆಗೆ ಸಾವಿರಾರು ಭಕ್ತರಿಗೆ ನಿರಂತರವಾಗಿ ಅನ್ನ ದಾಸೋಹ ಏರ್ಪಡಿಸಲಾಗಿತ್ತು.



ಕಳಸ ಪ್ರತಿಷ್ಠಾಪನೆಗೆ ಮೆರವಣಿಗೆಯಲ್ಲಿ ಕಳಸ ತರುತ್ತಿರುವುದು

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಘಜನಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೈಸ್ ಆಫ್ ಅಶೋಕ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಆಕಾಶ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಂಪತ್ತಿಗೆ ಸವಾಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾಂಚನಾ–2 (ತೆ)	4 ಪ್ರದರ್ಶನಗಳು
ಸಂಗಂ	
ಹಯಗ್ರೀವ (ಕ)	4 ಪ್ರದರ್ಶನಗಳು
ಲಿಡೋ	
ಭಾರತ ಮಹಾಸಾಯುಲಕು ವಿಘ್ನಪತಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಸಂಪತ್ತಿಗೆ ಸವಾಲ್ (ಕ)	4 ಪ್ರದರ್ಶನಗಳು

ಎಲ್‌ಪಿಜಿ, ತೈಲ ಬಿಕ್ಕಟ್ಟು ನಿರ್ವಹಣೆಗೆ ಮುಂಜಾಗ್ರತಾ ಕ್ರಮ ಅವಶ್ಯ



ಬಿ.ಶಿವಣ್ಣ


ಮೈಸೂರು, ಮಾ.13– ಅಡುಗೆ ಅನಿಲ ಹಾಗೂ ತೈಲ ಬಿಕ್ಕಟ್ಟು ಪರಿಹಾರಕ್ಕೆ ಸರ್ಕಾರ ಪರಿಣಾಮಕಾರಿ ಕ್ರಮ ವಹಿಸಬೇಕು. ಹಾಗೆಯೇ ಸಾರ್ವಜನಿಕರು ತಾತ್ಕಾಲಿಕ ಪರ್ಯಾಯ ವ್ಯವಸ್ಥೆಗೂ ಗಮನಹರಿಸಬೇಕು ಎಂದು ಕರ್ನಾಟಕ ಪ್ರಜಾ ಪಾರ್ಟಿ(ರೈತಪರ್ವ) ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ವಕೀಲ ಬಿ.ಶಿವಣ್ಣ ಮನವಿ ಮಾಡಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ಮಧ್ಯಪ್ರಾಚ್ಯ ಸಂಘರ್ಷದಿಂದಾಗಿ ಎಲ್‌ಪಿಜಿ ಹಾಗೂ ಕಚ್ಚಾ ತೈಲ ಪೂರೈಕೆಯಲ್ಲಿ ಭಾರೀ ವ್ಯತ್ಯಯವಾಗಿದೆ. ವಾಣಿಜ್ಯ ಸಿಲಿಂಡರ್ ಪೂರೈಕೆಯಾಗದೆ ಬಹುತೇಕ ಹೋಟೆಲ್‌ಗಳು ಮುಚ್ಚುವ ಹಂತ ತಲುಪಿವೆ. ಹಾಸ್ಟೆಲ್‌ಗಳಲ್ಲಿ ಸಿಲಿಂಡರ್ ಇಲ್ಲದೆ ವಿದ್ಯಾರ್ಥಿಗಳ ಆಹಾರ ವ್ಯವಸ್ಥೆಗೂ ತೊಂದರೆಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಆತಂಕದಿಂದ ಸಾರ್ವಜನಿಕರು ಗ್ಯಾಸ್ ಸಿಲಿಂಡರ್ ವಿತರಕರ ಕಚೇರಿಗಳ ಬಳಿ ಜಮಾಯಿಸುತ್ತಿದ್ದಾರೆ. ಸಿಲಿಂಡರ್ ಸಿಗುವುದೋ ಇಲ್ಲವೋ ಎಂಬ ಆತಂಕದಿಂದ ಸರತಿಯಲ್ಲಿ ನಿಂತು ವಿಚಾರಿಸುತ್ತಿದ್ದಾರೆ. ಈ ಬಿಕ್ಕಟ್ಟು ಪರಿಹಾರಕ್ಕೆ ಸರ್ಕಾರ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು. ಮೂರ್‍ನಾಲ್ಕು ತಿಂಗಳಿಗೆ ಬೇಕಾಗುವಷ್ಟು ಕಚ್ಚಾ ತೈಲ ಹಾಗೂ ಅಡುಗೆ ಅನಿಲವನ್ನು ಸಂಗ್ರಹಿಸಿಟ್ಟುಕೊಳ್ಳಲು ಮುಂದಾಗಬೇಕು. ಹಾಗೆಯೇ ಇಂತಹ ಸಂದರ್ಭದಲ್ಲಿ ಸಾರ್ವಜನಿಕರು ಸಾಧ್ಯವಾದಷ್ಟು ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ನಿಮ್ಮಲ್ಲಿ ದ್ವೇಷ ರಹಿತ ಭಕ್ತಿ ಇದ್ದರೆ ದೇವರು ಒಲಿಯುತ್ತಾನೆ...!

- ಮುಖ್ಯಮಂತ್ರಿ ಸಿದ್ದರಾಮಯ್ಯ ಕಿವಿಮಾತು
- ವರಕೋಡಲ್ಲಿ ಶ್ರೀ ಬೀರೇಶ್ವರ ಸ್ವಾಮಿ ದೇವಾಲಯ ಪುನರ್ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಭಾಗಿ



ಸಾರ್ವಜನಿಕರನ್ನು ಉದ್ದೇಶಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು

ಮೈಸೂರು, ಮಾ.13(ಎಂಟಿವೈ)– ಗುಡಿ ಮಾತ್ರವಲ್ಲದೆ ಎಲ್ಲಾ ಕಡೆಯಲ್ಲೂ ದೇವರಿದ್ದು, ನಿಷ್ಕಲ್ಮಶ, ಮಾನವೀಯ ಮೌಲ್ಯ ಹಾಗೂ ದ್ವೇಷ ರಹಿತ ಭಕ್ತಿಯಿದ್ದರೆ ಮಾತ್ರ ದೇವರ ಕೃಪೆಗೆ ಪಾತ್ರರಾಗಬಹುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ತಾಲೂಕು ವರಕೋಡು ಗ್ರಾಮದ ಶ್ರೀ ಬೀರೇಶ್ವರ ಸ್ವಾಮಿ ದೇವಾಲಯದ ಪುನರ್ ಪ್ರತಿಷ್ಠಾಪನಾ ಸಮಾರಂಭದಲ್ಲಿ ಮಾತನಾಡಿದ ಅವರು, ದೇವರು ಕೇವಲ ಗರ್ಭಗುಡಿಯಲ್ಲಿ ಮಾತ್ರವೇ ಇರುತ್ತಾನೆ ಎನ್ನುವುದು ಸರಿಯಲ್ಲ. ಎಲ್ಲಾ ಕಡೆಯೂ ಇದ್ದಾನೆ. ನನ್ನಲ್ಲೂ ನಿಮ್ಮಲ್ಲೂ ದೇವರಿದ್ದಾನೆ. ದೇವರು ಸರ್ವಾಂತರ್ಯಾಮಿ. ಭಕ್ತಿಯು ದೇವರಲ್ಲಿ ಇರಬೇಕು. ಭಕ್ತಿ ಎನ್ನುವುದು ಶುದ್ಧವಾಗಿರಬೇಕು. ಇಲ್ಲದಿದ್ದರೆ ಎಷ್ಟೇ ಪೂಜೆ ಮಾಡಿದರೂ ಸಾರ್ಥಕವಾಗುವುದಿಲ್ಲ. ಯಾರನ್ನು ದ್ವೇಷಿಸುವ ಭಕ್ತಿ ಇರಬಾರದು. ದೇವರು ಒಳ್ಳೆಯದು ಮಾಡಬೇಕಾದರೆ ನನಗೆ ಕೇಳಿದಂತೆ ಬೇರೆಯವರಿಗೂ ಒಳಿತನ್ನು ಬಯಸಬೇಕು. ಇದೇ ನಿಜವಾದ ಪ್ರಾರ್ಥನೆ, ಭಕ್ತಿ ಎಂದರು.


ದೇವನೊಬ್ಬ ನಾಮ ಹಲವು ಎನ್ನುವಂತೆ ಆತನು ಸರ್ವಾಂತರ್ಯಾಮಿ. ಭಕ್ತಿಯಿಂದ ಪೂಜಿಸಿದರೆ ಒಳ್ಳೆಯದನ್ನು ಮಾಡುತ್ತಾನೆ. ಬಸವಣ್ಣ ಹೇಳಿದ ಮಾತಿನಂತೆ ದೇವರು ನನ್ನಲ್ಲಿ ಮತ್ತು ನಿಮ್ಮಲ್ಲಿ ಇರುತ್ತಾನೆ. ನಾವು ಮಾಡುವ ಕೆಲಸವನ್ನು ನೋಡುತ್ತಾನೆ. ದೇವರನ್ನು ಒಲಿಸಿಕೊಳ್ಳಬೇಕಾದರೆ ಯಾರಿಗೂ ಕೆಟ್ಟದನ್ನು ಬಯಸಬಾರದು. ಹಿಂದೂ, ಜೈನ, ಇಸ್ಲಾಂ, ಕ್ರೈಸ್ತ ಸೇರಿದಂತೆ ಯಾವ ಧರ್ಮದಲ್ಲೂ ಕೆಟ್ಟದ್ದು ಇಲ್ಲ ಎಂದು ತಿಳಿಸಿದರು.

ಬೀರೇಶ್ವರ ಸ್ವಾಮಿಯ ದೇವಸ್ಥಾನವನ್ನು ನೂತನವಾಗಿ ನಿರ್ಮಾಣ ಮಾಡಿರುವುದನ್ನು ಅತ್ಯಂತ ಸಂತೋಷದಿಂದ ಉದ್ಘಾಟಿಸಿದ್ದೇನೆ. ನಾಲ್ಕು ಗ್ರಾಮಗಳ ಜನರು ಸೇರಿಕೊಂಡು ದೇವಸ್ಥಾನವನ್ನು ಸುಂದರವಾಗಿ ನಿರ್ಮಾಣ ಮಾಡಲಾಗಿದೆ. ಪುನರ್ ಪ್ರತಿಷ್ಠಾಪನೆ ಜೊತೆಗೆ ಜಾತ್ರೆಯೂ ನಡೆಯುತ್ತಿರುವುದು ಸಂತಸದ ಸಂಗತಿ. ಜಾತ್ರೆಯಲ್ಲಿ ಅನೇಕ ಕೂಟಗಳು ಭಾಗವಹಿಸಿವೆ. ಎರಡು ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆ. ಬಹಳ ಉತ್ಸಾಹ, ಭಕ್ತಿಯಿಂದ ಜಾತ್ರೆಯನ್ನು ನಡೆಸಿಕೊಂಡು ಬರಲಾಗುತ್ತಿದೆ ಎಂದರು.

ಜಾತ್ರೆಯಲ್ಲಿ ನಾನೂ ಕುಣಿಯುತ್ತಿದ್ದೆ: ಮೂಡಲಹುಂಡಿ, ಬಡಗಲಹುಂಡಿ, ಕೆಂಪೇಗೌಡನ ಹುಂಡಿ, ಹೊಸಹುಂಡಿ, ವರಕೋಡು ಸೇರಿದಂತೆ 8 ಗಡಿ ಗ್ರಾಮದ ಜನರು ಇಲ್ಲಿ ಸೇರಿದ್ದಾರೆ. ನಮ್ಮೂರಿನಲ್ಲೂ ಸಿದ್ದರಾಮೇಶ್ವರ ಜಾತ್ರೆ ನಡೆಯುತ್ತಿತ್ತು. ಅಲ್ಲಿ ತೆರೆದುಕೊಳ್ಳುತ್ತಿದ್ದ ಕೂಟ, ಓಟ, ನೋಟ, ವೀರಮಕ್ಕಳ ಕುಣಿತ ಮರೆಯಲು ಸಾಧ್ಯವಿಲ್ಲ. ಆಗ ಜಾತ್ರೆ ಅಂಗವಾಗಿ ನಡೆಯುವ ಮೆರವಣಿಗೆಯಲ್ಲಿ ನಾನು ಕುಣಿಯುತ್ತಿದ್ದೆ. ಈಗ ಆಗುವುದಿಲ್ಲ ಬಿಡಿ ಎಂದರು.

ಜನನ, ಮರಣ ನೋಂದಣಿ ಶೇ.100ರಷ್ಟು ಆಗಲೇಬೇಕು

ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಸೂಚನೆ



ಮೈಸೂರು ಡಿಸಿ ಕಚೇರಿಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅಧಿಕಾರಿಗಳ ಸಭೆ ನಡೆಸಿದರು.

ಮೈಸೂರು, ಮಾ.13– ಜನನ ಮರಣ ನೋಂದಣಿ ಶೇ.100ರಷ್ಟು ಕಡ್ಡಾಯವಾಗಿ ಆಗಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಜನನ ಮರಣ ನೋಂದಣಿ ಕುರಿತು ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜನನ ನೋಂದಣಿಗಳು ಕಳೆದ 3 ತಿಂಗಳ ಅವಧಿಯಲ್ಲಿ ಶೇಕಡಾ 100 ರಷ್ಟು ಆಗಿರುವುದಕ್ಕೆ ಸರ್ಕಾರದ ಮಟ್ಟದಲ್ಲಿ ಪ್ರಶಂಸನಾ ಪತ್ರ ನೀಡಿರುವುದು ಜಿಲ್ಲೆಗೆ ಹೆಮ್ಮೆಯ ವಿಷಯವಾಗಿದೆ ಎಂದರು.

ಜನನ ಆದ 21 ದಿನಗಳ ಒಳಗಾಗಿ ನೋಂದಣಿ ಆಗಬೇಕು. ಜಿಲ್ಲೆಯ ಚೆಲುವಾಂಬ ಆಸ್ಪತ್ರೆ, ಟಿ.ನರಸೀಪುರ ತಾಲೂಕು ಆಸ್ಪತ್ರೆ, ಹೆಚ್.ಡಿ.ಕೋಟೆ ತಾಲ್ಲೂಕು ಆಸ್ಪತ್ರೆ ಹಾಗೂ ಮೈಸೂರು pktb & cd ಆಸ್ಪತ್ರೆಗಳು ನಿಗದಿತ ಅವಧಿಯಲ್ಲಿ ನೋಂದಣಿ ಮಾಡಿ ಶೇ.100ರಷ್ಟು ಗುರಿ ಸಾಧನೆ ಮಾಡಿವೆ. ಜನನ ಘಟನೆಗಳ ವಿಳಂಬ ನೋಂದಣಿ ಮಾಡಿರುವ ನಂಜನಗೂಡು ತಾಲೂಕು ಆಸ್ಪತ್ರೆ, ಹುಣಸೂರು ನಗರಸಭೆ, ನಂಜನಗೂಡು ನಗರಸಭೆ, ಟಿ.ನರಸೀಪುರ ಪುರಸಭೆ, ಮೈಸೂರು ವಲಯ ಕಚೇರಿ 2 ಹಾಗೂ ವಲಯ ಕಚೇರಿ–8 ಗಳು ನೋಂದಣಿಯನ್ನು ವಿಳಂಬ ಮಾಡದೇ ನೋಂದಣಿ ಮಾಡಬೇಕು. ವಿಳಂಬ ನೋಂದಣಿಗೆ ಸಾರ್ವಜನಿಕರಿಂದ ಶುಲ್ಕ ಪಡೆಯದೇ ಸಂಬಂಧಿಸಿದ ಅಧಿಕಾರಿಗಳು ಪಾವತಿ ಮಾಡುವಂತೆ ಆಗಬೇಕು. ಆಗ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸುತ್ತಾರೆ ಎಂದು ತಿಳಿಸಿದರು.

ಮರಣ ಸಂಭವಿಸಿದ 21 ದಿನಗಳ ಒಳಗೆ ನೋಂದಣಿ ಆಗಬೇಕು. ಕಡಕೊಳ ಪಟ್ಟಣ ಪಂಚಾಯಿತಿ ಶ್ರೀರಾಂಪುರ, ಕೆ ಆರ್ ಆಸ್ಪತ್ರೆ, ನಂಜನಗೂಡು ನಗರಸಭೆ, ಹೂಟಗಳ್ಳಿ ನಗರಸಭೆ, ಟಿ.ನರಸೀಪುರ ಪುರಸಭೆ, ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ, ಮೈಸೂರು ವಲಯ ಕಚೇರಿ–6, ವಲಯ ಕಚೇರಿ–9, ವಲಯ ಕಚೇರಿ–2, ಕೆ ಆರ್ ನಗರ ಪುರಸಭೆ, ಪಿರಿಯಾಪಟ್ಟಣ ಪುರಸಭೆ, ಬನ್ನೂರು ಪುರಸಭೆ, ಬೋಗಾದಿ ಪಟ್ಟಣ ಪಂಚಾಯಿತಿಗಳಲ್ಲಿ ಮರಣ ನೋಂದಣಿ ವಿಳಂಬವಾಗಿ ಆಗಿದೆ. ಶೇ.92.8ರಷ್ಟು ವಿಳಂಬ ನೋಂದಣಿ ಆಗಿರುವ ಕಡಕೊಳ ಪಟ್ಟಣ ಪಂಚಾಯಿತಿಗೆ ನೋಟಿಸ್ ನೀಡಲಾಗುವುದು ಎಂದು ತಿಳಿಸಿದರು.

ವಿಳಂಬವಾಗಿ ಜನನ ಮರಣ ನೋಂದಣಿ ಮಾಡಿರುವ ಗ್ರಾಮ ಪಂಚಾಯಿತಿಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ಸಂಬಂಧಿಸಿದ ತಾಪಂ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಪತ್ರ ಬರೆಯುವಂತೆ ತಿಳಿಸಿದರು. ಜನನ ಮರಣ ನೋಂದಣಿ ಕುರಿತಂತೆ ಸಿಬ್ಬಂದಿಗೆ ತರಬೇತಿಯನ್ನು ನೀಡಬೇಕು ಎಂದು ಸೂಚನೆ ನೀಡಿದರು. ಸಭೆಯಲ್ಲಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಆರ್ ಚಿತ್ರಾ, ಜಿಲ್ಲಾ ಶಸ್ತ್ರಚಿಕಿತ್ಸರಾದ ಡಾ.ಸತೀಶ್, ಜಿಲ್ಲಾ ಮಕ್ಕಳ ಸಂತಾನೋತ್ಪತ್ತಿ ಅಧಿಕಾರಿ ಡಾ. ಮಹಮ್ಮದ್ ಸಿರಾಜ್ ಅಹಮದ್, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಸುರೇಶ್ ಅಂಗಡಿ, ಕೃಷಿ ಇಲಾಖೆ ಉಪನಿರ್ದೇಶಕ ಮಂಜುನಾಥ್, ತಹಶೀಲ್ದಾರ್ ರಾಮ್ ಪ್ರಸಾದ್, ಸಹಾಯಕ ನಿರ್ದೇಶಕ ಹೊನ್ನೇಗೌಡ, ಸಹಾಯಕ ಸಾಂಖ್ಯಿಕ ಅಧಿಕಾರಿಗಳಾದ ಗಣೇಶ, ಸಂಧ್ಯಾ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಜರಿದ್ದರು.

ಸನ್ನಡತೆ ಮೇಲೆ ಮೈಸೂರು ಜೈಲಿಂದ ಮಹಿಳಾ ಕೈದಿ ಬಿಡುಗಡೆ

ಮೈಸೂರು, ಮಾ.13(ಎಂಕೆ)– ಮೈಸೂರಿನ ಕೇಂದ್ರ ಕಾರಾಗೃಹದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಮಹಿಳಾ ಕೈದಿ ಚಂದ್ರಮ್ಮ ಅವರನ್ನು ಸನ್ನಡತೆ ಆಧಾರದ ಮೇಲೆ ಶುಕ್ರವಾರ ಬಿಡುಗಡೆ ಮಾಡಲಾಯಿತು. ರಾಜ್ಯ ಸರ್ಕಾರದ ಆದೇಶದ ಮೇರೆಗೆ ಸನ್ನಡತೆ ಆಧಾರದ ಮೇಲೆ ಬಿಡುಗಡೆ ಮಾಡುವ ಮೂಲಕ ಮುಂದೆ ಯಾವುದೇ ಅಪರಾಧ ಚಟುವಟಿಕೆಗಳಲ್ಲಿ ಭಾಗವಹಿಸದೆ ಉತ್ತಮ ಜೀವನ ನಡೆಸುವಂತೆ ಶುಭ ಕೋರಲಾಯಿತು.

ಬಂಧಿಯಾಗಿದ್ದ ವೇಳೆ ಕಾಯರ್ ಮ್ಯಾಟ್ ಮೇಕಿಂಗ್, ಹೊಲಿಗೆ, ಬ್ಯೂಟಿಷಿಯನ್ ಹಾಗೂ ಕೃತಕ ಹೂವಿನ ಹಾರಗಳನ್ನು ತಯಾರಿಸುವ ತರಬೇತಿ ಪಡೆದಿರುವ ಅವರು, ಮುಂದೆ ಹೊಲಿಗೆ ಕೆಲಸವನ್ನು ಮುಂದುವರೆಸಿಕೊಂಡು ಉತ್ತಮ ಜೀವನ ನಡೆಸುವಂತೆ ಕೇಂದ್ರ ಕಾರಾಗೃಹದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗ ಪತ್ರಿಕಾ ಪ್ರಕಟಣೆ ಮೂಲಕ ಆಶಯ ವ್ಯಕ್ತಪಡಿಸಿದ್ದಾರೆ.

ವಿದ್ಯಾರ್ಥಿನಿಯರಿಗೆ 'ದಿ ಕೇರಳ ಸ್ಟೋರಿ 2' ಉಚಿತ ಪ್ರದರ್ಶನ



ಮೈಸೂರು, ಮಾ. 13– ಲವ್ ಜಿಹಾದ್ ಕುರಿತಂತೆ 'ದಿ ಕೇರಳ ಸ್ಟೋರಿ 2' ಸಿನಿಮಾ ಚರ್ಚೆ ಹುಟ್ಟುಹಾಕಿದೆ. ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಡಿಆರ್‌ಸಿಯಲ್ಲಿ ವಿದ್ಯಾರ್ಥಿನಿಯರು ಹಾಗೂ ಮಹಿಳೆಯರಿಗೆ ವಿಷನ್ ಟೀಮ್ ಆಫ್ ಮೈಸೂರು ವತಿಯಿಂದ ಈ ಚಿತ್ರವನ್ನು ಉಚಿತ ಪ್ರದರ್ಶನ ಮಾಡಲಾಗಿದೆ. ಇದಕ್ಕೆ ಬಿಜೆಪಿ–ಹಿಂದು ಮುಖಂಡರು ಸಾಥ್ ನೀಡಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡರಾದ ಡಾ. ಹೇಮಾನಂದೀಶ್, ಪ್ರತಿಯೊಬ್ಬ ಹಿಂದು ಯುವತಿ ನೋಡಲೇಬೇಕಾದ ಚಿತ್ರ ಕರ್ನಾಟಕದ ಪ್ರತಿ ಕ್ಷೇತ್ರದಲ್ಲೂ ಹಿಂದು ನಾಯಕರು ನಮ್ಮ ಹೆಣ್ಣು ಮಕ್ಕಳ ರಕ್ಷಣೆಗಾಗಿ ದಿ ಕೇರಳ ಸ್ಟೋರಿ 2 ಉಚಿತ ಪ್ರದರ್ಶನಕ್ಕೆ ಮುಂದಾಗಲಿ. ನಮ್ಮ ವಿಷನ್ ಟೀಮ್ ಆಫ್ ಮೈಸೂರು ತಂಡದ ವತಿಯಿಂದ 15 ದಿನಗಳು ಜಯಲಕ್ಷ್ಮಿಪುರಂನಲ್ಲಿರುವ ಡಿಆರ್‌ಸಿ ಮಾಲ್‌ನಲ್ಲಿ 10,000ಕ್ಕೂ ಹೆಚ್ಚು ಯುವತಿಯರು ಹಾಗೂ ಮಹಿಳೆಯರಿಗೆ ಉಚಿತ ಪ್ರದರ್ಶನ ನೀಡಲಾಗುವುದು ಎಂದು ಹೇಳಿದರು. ಉಚಿತ ಟಿಕೆಟ್ ಹಾಗೂ ಹೆಚ್ಚಿನ ಮಾಹಿತಿಗಾಗಿ 99865 54557,9740685611 ಸಂಪರ್ಕಿಸಬಹುದು. ಇದೇ ಸಂದರ್ಭದಲ್ಲಿ ರೇವತಿ ಕೃಷ್ಣಪ್ಪ, ಪೂರ್ಣಿಮಾ, ಹಾಗೂ ಟೀಮ್‌ನ ಎಲ್ಲಾ ಸದಸ್ಯರು ಹಾಜರಿದ್ದರು.

ಯುವರಾಜ ಕಾಲೇಜು ಸ್ವಾಯತ್ತ ಸ್ಥಾನಮಾನ ಹಿಂತೆಗೆದುಕೊಳ್ಳುವ ನಿರ್ಧಾರಕ್ಕೆ ಆಕ್ಷೇಪ

ಮೈಸೂರು, ಮಾ.13(ಎಂಕೆ)– ಮೈಸೂರು ವಿವಿ ಯುವರಾಜ ಕಾಲೇಜಿನ ಸ್ವಾಯತ್ತ ಸ್ಥಾನಮಾನ ಹಿಂತೆಗೆದುಕೊಳ್ಳುವ ಕುರಿತು ಟೇಬಲ್ ಅಜೆಂಡಾ ಮೂಲಕ ಅನುಮೋದಿಸುವ ನಿರ್ಧಾರಕ್ಕೆ ವಿವಿ ಸಿಂಡಿಕೇಟ್ ಸದಸ್ಯ ಡಾ.ಟಿ.ಆರ್.ಚಂದ್ರಶೇಖರ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಯುವರಾಜ ಕಾಲೇಜಿನ ಸ್ವಾಯತ್ತ (Autonomous) ಸ್ಥಾನಮಾನವನ್ನು ಹಿಂತೆಗೆದುಕೊಳ್ಳುವ ಕುರಿತು ವಿಶೇಷ ಸಿಂಡಿಕೇಟ್ ಸಭೆಯಲ್ಲಿ ವಿಶ್ವವಿದ್ಯಾಲಯದ ಆಡಳಿತಾತ್ಮಕ ಪಾರದರ್ಶಕತೆ, ಕಾನೂನುಬದ್ಧ ಪ್ರಕ್ರಿಯೆಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳ ಆಡಳಿತದ ನೈತಿಕ ಜವಾಬ್ದಾರಿಗಳೊಂದಿಗೆ ಸಂಬಂಧ ಹೊಂದಿರುವುದರಿಂದ ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಈ ಮಾಹಿತಿಯನ್ನು ಜನತೆಗೆ ತಿಳಿಸದೆ ಹಾಗೂ ಸಿಂಡಿಕೇಟ್ ಸದಸ್ಯರಿಗೂ ಪೂರ್ವ ಸೂಚನೆ ನೀಡದೆ ಟೇಬಲ್ ಅಜೆಂಡಾ ಮೂಲಕ ಮಂಡಿಸಿರುವುದು ಸರಿಯಲ್ಲ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏಕರೂಪ ನಾಗರಿಕ ಸಂಹಿತೆ ಕುರಿತ ಸುಪ್ರೀಂ ನಿಲುವಿಗೆ ನನ್ನ ಸಹಮತವಿದೆ

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌದರಿ ಅಭಿಮತ



ಮೈಸೂರು,ಮಾ.13(ಎಸ್‌ಪಿಎನ್)– ಏಕರೂಪ ನಾಗರಿಕ ಸಂಹಿತೆ (ಯುಸಿಸಿ)ಗೆ ಕಾನೂನು ರೂಪ ನೀಡುವುದರಿಂದ ದೇಶದಾದ್ಯಂತ ಲಿಂಗ ಮತ್ತು ಧರ್ಮ ಭೇದವಿಲ್ಲದೆ ಎಲ್ಲಾ ಮಹಿಳೆಯರ ಸಮಾನ ಹಕ್ಕುಗಳನ್ನು ಖಚಿತಪಡಿಸುವುದು ಅಗತ್ಯ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿರುವುದಕ್ಕೆ ನನ್ನ ಬೆಂಬಲವಿದೆ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷ ಡಾ.ನಾಗಲಕ್ಷ್ಮಿ ಚೌದರಿ ಅಭಿಪ್ರಾಯಪಟ್ಟರು.

ಮೈಸೂರು–ಹುಣಸೂರು ರಸ್ತೆಯಲ್ಲಿರುವ ಪ್ರಾದೇಶಿಕ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಅಧಿಕಾರಿಗಳ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಕುರಿತು ಸುಪ್ರೀಂಕೋರ್ಟ್ ಅಭಿಪ್ರಾಯಕ್ಕೆ ನನ್ನ ಬೆಂಬಲವಿದೆ ಎಂದರು.

ಇತ್ತೀಚೆಗೆ ರಾಜ್ಯ ಸರ್ಕಾರ ಸರ್ಕಾರಿ ಮತ್ತು ಖಾಸಗಿ ಕ್ಷೇತ್ರದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ 'ಋತುಚಕ್ರ' ರಜೆ ಪಡೆಯಲು ಮಹಿಳಾ ನೌಕರರು ಅರ್ಹರು. ಈ ರಜೆ ನೀಡಲು ಮೇಲಾಧಿಕಾರಿಗಳು ಯಾವುದೇ ತಕರಾರು ತೆಗೆದರೆ, ಮಹಿಳಾ ಆಯೋಗಕ್ಕೆ ದಾಖಲಾತಿ ಸಮೇತ ಮಾಹಿತಿ ನೀಡಿದರೆ, ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲು ಆಯೋಗದಿಂದ ಶಿಫಾರಸ್ಸು ಮಾಡಲಾಗುವುದು ಎಂದರು.

ಗ್ರಾಮೀಣ ಪ್ರದೇಶದಿಂದ ನಗರಪ್ರದೇಶಕ್ಕೆ ಅಧ್ಯಯನ ಮಾಡಲು ಬರುವ ಹೆಣ್ಣು ಮಕ್ಕಳಿಗೆ ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣ, ಶಾಲಾ–ಕಾಲೇಜು ಹಾಗೂ ಸರ್ಕಾರಿ ಕಚೇರಿಗಳಲ್ಲಿ ಮಹಿಳಾ ಶೌಚಾಲಯಗಳ ಉತ್ತಮ ರೀತಿ ನಿರ್ವಹಣೆ ಮಾಡಬೇಕು ಎಂದು ಮೈಸೂರು ಡಿಸಿಯವರಿಗೆ ಸೂಚನೆ ನೀಡಿದ್ದೇನೆ ಎಂದು ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ನಾಲ್ಕು ವರ್ಷಗಳಲ್ಲಿ 1294 ಪ್ರಕರಣ: ಮೈಸೂರು ನಗರ ವ್ಯಾಪ್ತಿಯಲ್ಲಿ ನಾಪತ್ತೆ ಪ್ರಕರಣಗಳ ಕುರಿತು ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 2023ರಿಂದ 2026ರವರೆಗೆ 1294 ನಾಪತ್ತೆ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ 1,136 ಪ್ರಕರಣಗಳು ಪತ್ತೆಯಾಗಿವೆ. ಇನ್ನು 93 ಪ್ರಕರಣಗಳ ತನಿಖೆ ಮುಂದುವರೆದರೆ, 65 ಪ್ರಕರಣಗಳು ಪತ್ತೆಯಾಗಿಲ್ಲ. ಅಂತೆಯೇ 2026ರಲ್ಲಿ 69 ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ 29 ಪತ್ತೆಯಾಗಿವೆ. ಇನ್ನು 40 ಪ್ರಕರಣಗಳ ತನಿಖೆ ಮುಂದುವರೆದಿದೆ ಎಂದರು.

2023ರಲ್ಲಿ 424 ಪ್ರಕರಣಗಳು ದಾಖಲಾಗಿದ್ದು, 379 ಪ್ರಕರಣಗಳು ಪತ್ತೆಯಾಗಿವೆ. ಉಳಿದ 45 ಪ್ರಕರಣಗಳ ತನಿಖೆ ಮುಂದುವರೆದಿವೆ. 2024ರಲ್ಲಿ 434 ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ 379 ಪ್ರಕರಣಗಳು ಪತ್ತೆಯಾಗಿವೆ. ಉಳಿದ 45 ಪ್ರಕರಣಗಳ ತನಿಖೆ ಮುಂದುವರೆದಿದೆ. 2025ರಲ್ಲಿ 367 ಪ್ರಕರಣಗಳು ದಾಖಲಾಗಿದ್ದು, 16 ಪ್ರಕರಣಗಳ ತನಿಖೆ ಮುಂದುವರೆದಿದ್ದು, ಇನ್ನು 20 ಪ್ರಕರಣಗಳು ಪತ್ತೆಯಾಗಿಲ್ಲ ಎಂದು ತಿಳಿಸಿದರು.

ಅಮೆರಿಕಾ ವಿರುದ್ಧ ಯುದ್ಧ ಅನಿವಾರ್ಯವಾದರೆ ಕನ್ನಡಿಗರು ಸಿದ್ಧ!

ಡೊನಾಲ್ಡ್ ಟ್ರಂಪ್ ವಿರುದ್ಧ ವಾಟಾಳ್ ಅಸಮಾಧಾನ



ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು

ಮೈಸೂರು, ಮಾ.13(ಎಂಕೆ)– ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಮೇಲೆ ಕುಳಿತು, ಕಟ್ಟಿಗೆ ಒಲೆಯಲ್ಲಿ ಬಿಸಿ ನೀರು ಕಾಯಿಸುವ ಮೂಲಕ ವಿನೂತನ ರೀತಿ ಪ್ರತಿಭಟನೆ ನಡೆಸಿದ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್, ಕೂಡಲೇ ಇರಾನ್–ಇಸ್ರೇಲ್ ಮತ್ತು ಅಮೆರಿಕಾ ನಡುವಿನ ಯುದ್ಧ ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಕಟ್ಟಿಗೆ ಒಲೆಯಲ್ಲಿ ಬಿಸಿ ನೀರು ಕಾಯಿಸುತ್ತಾ 'ಬೇಕೆ ಬೇಕು ಗ್ಯಾಸ್ ಬೇಕು' ಘೋಷಣೆಯೊಂದಿಗೆ ಗ್ಯಾಸ್ ಸಿಲಿಂಡರ್ ನೀಡದ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ಹೊರಹಾಕಿದರಲ್ಲದೆ ಅಗತ್ಯವಿದ್ದರೆ ಕರ್ನಾಟಕ ಬಂದ್‌ಗೆ ಕರೆ ನೀಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಇರಾನ್–ಇಸ್ರೇಲ್ ಮತ್ತು ಅಮೆರಿಕಾ ನಡುವಿನ ಯುದ್ಧದ ಪರಿಣಾಮ ಇಡೀ ಪ್ರಪಂಚಕ್ಕೆ ಆವರಿಸಿದೆ. ಸಾಮ್ರಾಜ್ಯಶಾಹಿ ಧೋರಣೆಯೊಂದಿಗೆ ಯುದ್ಧ ಮುಂದುವರೆಸಿರುವ ಅಮೆರಿಕ ಯುದ್ಧ ನಿಲ್ಲಿಸದಿದ್ದರೆ, ಇಡೀ ಪ್ರಪಂಚವೇ ಅಮೆರಿಕ ವಿರುದ್ಧ ಯುದ್ಧ ಮಾಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಲಿದೆ. ಅಂತಹ ಪರಿಸ್ಥಿತಿ ಬಂದರೆ ಕನ್ನಡಿಗರು ಯುದ್ಧಕ್ಕೆ ಸಿದ್ಧರಿದ್ದೇವೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಈಗಾಗಿರುವ ಸಾವು–ನೋವುಗಳಿಗೆ ಜಾಗತಿಕವಾಗಿ ಕ್ಷಮಾಪಣೆ ಕೇಳಬೇಕು ಎಂದು ಆಗ್ರಹಿಸಿದರು.

ಅಲ್ಲಿ ಬಾಂಬ್‌ಗಳ ಸುರಿಮಳೆಯಾಗುತ್ತಿದ್ದರೆ, ಇಲ್ಲಿ ಅನ್ನ, ನೀರು, ಆಯಿಲ್, ಗ್ಯಾಸ್ ಇಲ್ಲದೆ ಜನರು ಕಣ್ಣೀರು ಸುರಿಸುತ್ತಿದ್ದಾರೆ. ಹಳೆ ಗಂಡನ ಪಾದವೇ ಗತಿ ಎಂಬಂತೆ ಸೌದೆ ಒಲೆ ಬಳಕೆ ಹೆಚ್ಚಾಗುತ್ತಿದೆ. ಸೌದೆ ಬಳಕೆ ಹೆಚ್ಚಿದರೆ, ಅರಣ್ಯ ನಾಶವಾಗಲಿದೆ. ಆದ್ದರಿಂದ ಮಾನವ ಕುಲಕ್ಕೆ ಕಂಟಕವಾದ ಈ ಯುದ್ಧ ಕೂಡಲೇ ನಿಲ್ಲಬೇಕು. ಎಲ್‌ಪಿಜಿ ಸಿಲಿಂಡರ್ ಪೂರೈಕೆ ಸರಾಗವಾಗಬೇಕು. ಯುದ್ಧ ನಿಲ್ಲಿಸಲು ದೇಶದ ಎಲ್ಲಾ ಪಕ್ಷದ ನಾಯಕರು ಒಟ್ಟಾಗಿ ಟ್ರಂಪ್ ಭೇಟಿ ಮಾಡಬೇಕು ಎಂದು ಒತ್ತಾಯಿಸಿದರು.

ಭಾರತ ದೇಶ ಮಹಾತ್ಮ ಗಾಂಧಿಯವರ ಸತ್ಯ ಮತ್ತು ಅಹಿಂಸಾ ಮಾರ್ಗದಲ್ಲಿ ನಡೆಯುತ್ತಿರುವ ದೇಶವಾಗಿದ್ದು, ಇಡೀ ಪ್ರಪಂಚವೇ ಗಾಂಧಿ ತತ್ವಕ್ಕೆ ಬದ್ಧವಾಗಿದೆ. ಆದ್ದರಿಂದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ವಿಪಕ್ಷ ನಾಯಕ ರಾಹುಲ್ ಗಾಂಧಿ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಎಲ್ಲರೂ ಒಂದಾಗಿ ಯುದ್ಧ ನಿಲ್ಲಿಸುವಂತೆ ಒತ್ತಡ ತರಬೇಕು ಎಂದು ಹೇಳಿದರು. ನಟ ಟೆನ್ನಿಸ್ ಕೃಷ್ಣ, ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಕನ್ನಡ ಸೇನೆ ರಾಜ್ಯಾಧ್ಯಕ್ಷ ಕೆ.ಆರ್.ಕುಮಾರ್, ಪಾರ್ಥಸಾರಥಿ, ಶಿವಶಂಕರ್ ಮತ್ತಿತರರಿದ್ದರು.

SITE FOR SALE
40x60 W/F
L.V.R. Enclave
Srirampura 2nd Stage, Adjacent to Preethi Layout, Maramma Temple, Ring Road, Mysuru.
9900466811, 9980270076

WANTED
80'x50' Residential Plot in areas around Vontikoppal, Jaylaxmipuram, Yadavgiri, Gokulam, Vijaynagar 1st Stage, Vijaynagar 2nd Stage
Contact: Whatsapp on
9845112377

REPUTED DISTRIBUTOR COMPANY IN HEBBAL INDUSTRIAL AREA REQUIRED
1. OFFICE ASSISTANT - 2 No's
   Any Degree
   1 Year Experience
   (M S Excel, M S Word & Mail Conversation)
2. DELIVERY BOYS - 2 No's
   SSLC/PUC - WITH DL

Contact No:
7899947666

ಸಾರ್ವಜನಿಕ ಪ್ರಕಟಣೆ
ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಮೈಸೂರು–570008, ಕಸಬಾ ಹೋಬಳಿ, ಶ್ರೀರಾಂಪುರ ಗ್ರಾಮದಲ್ಲಿ ವಾಸವಾಗಿರುವ ಎಸ್.ಎನ್.ರಾಜಣ್ಣ ಬಿನ್ ಲೇಟ್.ನಾರಾಯಣ ಶೆಟ್ಟಿ ರವರಿಗೆ ಸೇರಿದ ಸ್ವತ್ತಿನ ಕ್ರಯ ಪತ್ರದ ಸಂಖ್ಯೆ–4149/1992–93 ದಿನಾಂಕ 16/09/1992 ರ ಕ್ರಯಪತ್ರವು ದಿನಾಂಕ 13/03/2026 ರಂದು ಕಳೆದು ಹೋಗಿರುತ್ತದೆ. ಇದರ ಸಂಬಂದ ದಿನಾಂಕ 13/03/2026 ರಂದು ಮೈಸೂರಿನ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಗೆ ದೂರಿನ ಸಂಖ್ಯೆ 2107774/2026 ರಂತೆ ದೂರನ್ನು ದಾಖಲಿಸಿರುತ್ತಾರೆ. ಸದರಿ ಕ್ರಯಪತ್ರ ಯಾರಿಗಾದರೂ ದೊರಕಿದಲ್ಲಿ ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಸಾರ್ವಜನಿಕ ಪ್ರಕಟಣೆ ದಿನಾಂಕದಿಂದ 7 (ಏಳು) ದಿನಗಳ ಒಳಗಾಗಿ ತಲುಪಿಸತಕ್ಕದ್ದು. ಒಂದೊಮ್ಮೆ ಯಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಕ್ರಯಪತ್ರವನ್ನು ದುರುಪಯೋಗಪಡಿಸಿಕೊಂಡಲ್ಲಿ ಸದರಿ ವ್ಯಕ್ತಿಗಳೇ ಹೊಣೆಗಾರರಾಗುತ್ತಾರೆ. ಹಾಗೂ ನಮ್ಮ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸಹಿ /– ಲೋಹಿತ್ ಎನ್
ವಕೀಲರು ಶ್ರೀ ಸಾಯಿ ಲಾ ಅಸೋಸಿಯೇಟ್ಸ್
ನಂ 2967/, 14ನೇ ಮೇನ್, 2ನೇ ಕ್ರಾಸ್,
ಸರಸ್ವತಿಪುರಂ ಮೈಸೂರು – 570009
ದಿನಾಂಕ: 13/03/2026 ಮೊ: 9611113323
ಸ್ಥಳ : ಮೈಸೂರು

ಸಂಜಯ್ ಇನ್‌ಫ್ರಾ
ಗ್ರೇಟರ್ ಮೈಸೂರಿನ ಬೆಲೆ ಏರಿಕೆಯ ಮುನ್ನ ನಿಮ್ಮದಾಗಿಸಿಕೊಳ್ಳಿ

ಸಂಜಯ್ ನಗರ
ಲೇಔಟ್, ನಂಜನಗೂಡು
30X40
2 ಬೆಡ್‌ರೂಂ ಮನೆ
₹39.75 ಲಕ್ಷ
30X40 ಸೈಟು
₹14 ಲಕ್ಷ
ಸಂಪರ್ಕಿಸಿ: NH-150A ಪಕ್ಕದಲ್ಲಿ
8792306996

WANTED
1. Comapny HR
   (Exp 3-4 years)
2. SERVICE COORDINATOR
   Exp in A/C or appliance service industries 2-3 years)
3. GENERAL MANAGER
   Exp in service industries or Ex Army officers retired

Contact: +918431435008
hrbreezairindia@gmail.com

LOANS HUB
ALL LOANS UNDER ONE ROOF
- Business Loans
- Housing Loans
- Mortgage Loans
- Balance Transfer & Top up

TRUSTED SERVICE
NO SERVICE CHARGES
SRI SAI FINANCIAL SERVICES
Railway Gate Road KG Koppal Mysore
Contact :
88844 47314 / 88844 47318

WANTED DRIVER
Wanted driver for a Corporate Company. The candidate should hold a valid license, aged between 45 - 55 years and having experience in driving high-end cars.
Call : **76768 01709**

HOUSE FOR SALE
As Per Your Requirement Architect Designed.

AT MYSURU	*AT HUNSUR*
Near Vajamangala, Bannur Road.	Near KSRTC Bus Depot.
20x30 30.5 Lakhs	20x30 24 Lakhs
20x40 34 Lakhs	20x40 24.6 Lakhs
30x40 54 Lakhs	30x40 29 Lakhs.
Near St. Josheph School.	Contact
20x40 - 44 Lakhs	
30x50 - 82 Lakhs	

8123387555 / 7259348777

GEETHANJALI INTERNATIONAL GLOBAL SCHOOL
In association with
ROTARY E-CLUB OF MYSORE CENTRE
Is Conducting
Free Health Camp for Children between age 5 to 15 years and Their Parents.
Free Checkup and Consultation for BP, Sugar, Eye Checkup and Dental Checkup.
Venue: CA7, BEML Layout, 2nd Stage Srirampura, Mysuru.
Date : Sunday, 15-03-2026, Time: 10am to 4pm
For more Details call : **9110285914**

ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ
ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ), ಮಂಡ್ಯ–571 401
(ಮೈಸೂರು ವಿಶ್ವವಿದ್ಯಾನಿಲಯ ಸಂಯೋಜನೆಗೆ ಒಳಪಟ್ಟಿದೆ ಹಾಗೂ ನ್ಯಾಕ್ ಮರು ಮೌಲ್ಯಮಾಪನದಲ್ಲಿ ಬಿ' ಮಾನ್ಯತೆ ಪಡೆದಿದೆ)
ಬೆಂಗಳೂರು – ಮೈಸೂರು ರಸ್ತೆ, ಮಂಡ್ಯ–571401
ವೆಬ್‌ಸೈಟ್ : www.gcwm.in ಇ–ಅಂಚೆ:gcm@gmail.com
ದಿ:12.03.2026

ಪ್ರಕಟಣೆ
ಈ ಕಾಲೇಜಿನ 2025–26ನೇ ಸಾಲಿನ ವಾರ್ಷಿಕ ಸಂಚಿಕೆ "ನೆಲದ ಸಿರಿ" ಪುಸ್ತಕವನ್ನು ಮುದ್ರಿಸಿ ಸರಬರಾಜು ಮಾಡಲು ಅರ್ಹ ಸರಬರಾಜುದಾರರಿಂದ ಟೆಂಡರ್ ಆಹ್ವಾನಿಸಿದೆ. ಆಸಕ್ತರು ಸೂಚಿಸಿರುವ ಪುಸ್ತಕದ ಮಾಹಿತಿಯನ್ನು ಹಾಗೂ ಟೆಂಡರ್ ಅರ್ಜಿಯನ್ನು ಪಡೆದುಕೊಳ್ಳಲು ದಿನಾಂಕ:16.03.2026ರಿಂದ ಕಛೇರಿಯಲ್ಲಿ ಸಂಪರ್ಕಿಸತಕ್ಕದ್ದು. ಮುಚ್ಚಿದ ಲಕೋಟೆಯಲ್ಲಿ ವಿವರಗಳನ್ನು ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ:31.03.2026 ರ ಮಧ್ಯಾಹ್ನ 12.30 ಘಂಟೆಯೊಳಗೆ ಸಲ್ಲಿಸಬೇಕು. ಲಕೋಟೆಯ ಜೊತೆಗೆ ರೂ.5000/– ಇ.ಎಂ.ಡಿ ಮೊತ್ತ ಪಾವತಿಸಬೇಕು. ದಿನಾಂಕ:31.03.2026ರ ಮಧ್ಯಾಹ್ನ 2.30ಕ್ಕೆ ಪ್ರಾಂಶುಪಾಲರ ಕೊಠಡಿಯಲ್ಲಿ ಮುಚ್ಚಿದ ಲಕೋಟೆಗಳನ್ನು ವಾರ್ಷಿಕ ಸಂಚಿಕೆ ಸಮಿತಿಯ ಮುಂದೆ ತೆರೆಯಲಾಗುತ್ತದೆ. ವಾರ್ಷಿಕ ಸಂಚಿಕೆಯನ್ನು ಮುದ್ರಿಸಿ ಸರಬರಾಜು ಮಾಡಲು ಕಡಿಮೆ ದರವನ್ನು ಸೂಚಿಸಿದವರಿಗೆ ಆದೇಶ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಪ್ರಾಂಶುಪಾಲರು, ಸರ್ಕಾರಿ ಮಹಿಳಾ ಕಾಲೇಜು(ಸ್ವಾ), ಮಂಡ್ಯ ಇವರನ್ನು ಸಂಪರ್ಕಿಸತಕ್ಕದ್ದು.

ಸಹಿ/–ಪ್ರಾಂಶುಪಾಲರು, ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ), ಮಂಡ್ಯ–571401
ವಾಸಾಸಂಇ/ಹಿಸನಿ–ಮಂ/ಕಿಎಸ್‌ಎಂಸಿ&ಎ/891/2025–26

CET / NEET CRASH COURSE
Classes Start from 16th March to 18th April 2026,Timings 9.00am to 4.00pm
- Classes will be conducted by Highly experienced teachers who have minimum 15 to 25 years experience.
- 25 classes in each subject
- Periodic Tests
- 3 to 4 Mock Exams will be conducted

Venue :
HARI VIDYALAYA COMPOSITE PU COLLEGE
Bogadi, Mysore - 570 026
Call :
9342572410 / 9449809181

KALPAVRUKSHHA ACADEMY
WANTED FEMALE STAFF
1. Receptionist - Any Degree
2. Counsellor - B.Sc., / M.Sc.,

Interview on
14th March 2:00 - 4:00 PM
at RVPB PU College, J K Tyres Opposite. KRS Road, Metagalli, Mysore.



JOCKEY
FACTORY SECONDS
UPTO **50% OFF***
*T & C apply
10 am to 8 pm · Open All Days · Master / Visa Card Accepted
INNERWEAR · LEISUREWEAR · ACTIVEWEAR · KIDSWEAR · SOCKS
Venue In Mysore
JLB Road | The Institution Of Engineers (Auditorium Hall), Jhansi Lakshmibai Road - 5
Org. by: Surya Agency Pvt. Ltd.

KERALA NILAMBUR TEAK WOOD FURNITURES | ನಮ್ಮ ಮೈಸೂರು | MYSORE LUXURY CUSHION SOFA'S

ಫರ್ನಿಚರ್ ಎಕ್ಸ್‌ಪೋ 2026
FURNITURE EXPO-2026
DIRECT FACTORY SALE
UPTO **60%** Discount

ಅದ್ದೂರಿ ಪ್ರಾರಂಭವಾಗಿದೆ
March 13th - 22nd March 2026
(10 Days Only)
Timings 10.30am to 9.00pm
SCAN FOR LOCATION
SAMBRAMA CONVENTION HALL
80 FEET ROAD, VIJAYANAGARA 2ND STAGE, MYSURU



TEAK WOOD SOFA | LUXURY CUSHION SOFA | TEAK COT | DINING SET | JULA | DIWAN COT
BED ROOM SET | TEAPOY | EC CHAIR | ROCKING CHAIR | SOFA CUM BED | MATTRESS | RECLINER ETC.,
CAR PARKING | ENTRY FREE | 99528 99865

Opportunity! RUNNING HOTEL FOR SALE
Established Hotel Business available for SALE Near Vontikoppal, Mysuru. Prime area with good footfall, fully equipped kitchen and dining setup. Ideal for immediate operation.
INTERESTED BUYERS
Contact : +91 89040 58900

OPERATOR REQUIREMENT
We are Looking for Experienced Operators for the following Machines
1. Manual Milling Machine (Single - Turret)
2. VMC Machine
3. CNC - Aluminium Machining Centre (CAM based with 6m bed)

CRITERIA:
- Experience in relevent machine operation
- ITI / Diploma qualification Required
- Ability to Read mechanical drawings
- Pragramming Knowledge with hands-on experience
- Immediate joining

Location : Hebbal Industrial Area, Mysore
Contact Number : **8123675249, 7795394464**

STG Pre-University College
Chinakurali,Pandavapura Taluk,Mandya district - 571455
RECRUITMENT

POSITIONS	QUALIFICATION
Mathematics Physics Chemistry	M.Sc. / B.Ed
Biology	M.Sc. (CBZ)/ B.Ed
English	MA, B.Ed

candidate with **5+ years** of **PU** Teaching experience.

Required Experienced Faculty for JEE & KCET
Physics / Chemistry / Mathematics
- Postgraduate degree in **Physics, Chemistry, or Mathematics** with proven teaching experience in **JEE** and **KCET** at reputed coaching institutes.
- Master's degree from leading **NITs** or **IITs**.
- Strong command over subject fundamentals and problem-solving techniques. Excellent communication skills in English.

(knowledge of Kannada is an added advantage)

HOSTEL WARDENS (MALE / FEMALE)
Graduate with relevant experience in a Residential PU College
Wardens shall be provided food & accommodation at the campus with PF Facilities

SALARY BEST IN THE INDUSTRY
Kindly email your resume to info@stgpublicschool.com with a passport size photograph within 7 days of publishing this advertisement.
FOR QUERIES CALL - 9108481695

ಸ್ಥಾಪನೆ : 1916 RBI License No. UBD KA 844P, Dt.28.01.1987
ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ.,
ಶಾಖೆಗಳು: 1) ಉದಯಗಿರಿ 2) ರಾಜೀವ್‌ನಗರ 3) ಹುಣಸೂರು
ಮುಖ್ಯ ಶಾಖೆ: ನ್ಯೂ ಸಯ್ಯಾಜಿ ರಾವ್ ರಸ್ತೆ, ಮೈಸೂರು–570001.

ನಿಯಮ 13(4) ಪರಿಶಿಷ್ಟ IV
ಕಬ್ಜೆ (ಸ್ವಾಧೀನ) ವಹಿಸುವ ಬಗೆಗಿನ ತಿಳುವಳಿಕೆ ನೋಟೀಸ್

ಕೆಳಸಹಿದಾರರು **ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ., ಮೈಸೂರು** ಇದರ ಅಧಿಕಾರ ಹೊಂದಿದ ಅಧಿಕಾರಿಯಾಗಿದ್ದು ಹಣಕಾಸು ಸ್ವತ್ತುಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್ ನಿರ್ಮಾಣ ಭದ್ರತೆ ಮತ್ತು ಭದ್ರತಾ ಹಿತಾಸಕ್ತಿ [4][ನಿಯಮ, 2002 (2002ರ 54)] ರ ಅನ್ವಯ ಸೆಕ್ಷನ್ 13(12)ರ [5][ನಿಯಮ 3] ಅನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮ 2002ರ ಅನ್ವಯ ಈ ಕೆಳಗಿನ ಸಾಲಗಾರರಿಗೆ ಸೆಕ್ಷನ್ 13(2) ರ ಅಡಿ ತಗಾದೆ ಸೂಚನೆಯನ್ನು ನೀಡಿದ್ದು, ನೋಟೀಸ್‌ನಲ್ಲಿ ತಿಳಿಸಿರುವ ಮೊತ್ತವನ್ನು ಈ ನೋಟೀಸ್ ನೀಡಿದ 60 ದಿನಗಳ ಒಳಗೆ ಸೂಚಿಸಿರುವ ಮೊಬಲಗನ್ನು ಬಡ್ಡಿಯೊಂದಿಗೆ ಮರು ಪಾವತಿಸುವಂತೆ ಸೂಚಿಸಲಾಗಿತ್ತು.
ಸಾಲಗಾರರುಗಳು ಸಾಲದ ಹಣವನ್ನು ಮರು ಪಾವತಿ ಮಾಡಲು ವಿಫಲರಾಗಿದ್ದು ಸಾಲಗಾರರುಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಕೆಳ ಸಹಿದಾರರು ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13(4) ಕಾಯಿದೆ ನಿಯಮ 8 ಮತ್ತು 9 ಅನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ದಿನಾಂಕದಂದು ವಿವರಿಸಲಾಗಿರುವ ಸ್ವತ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ.
ನಿರ್ದಿಷ್ಟವಾಗಿ ಸಾಲಗಾರರುಗಳಿಗೆ, ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಯಾರೊಬ್ಬರೂ ಸಹ ಸದರಿ ಸ್ವತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೆ ಆದರೆ **ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ., ಮೈಸೂರು.** ಬಾಕಿ ಇರುವ ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಬಾಕಿ ಚುಕ್ತ ಮಾಡುವುದಕ್ಕೆ ಅದು ಒಳಪಟ್ಟಿರುತ್ತದೆ.
ಕಾಯಿದೆ ಸೆಕ್ಷನ್ 13(8) ರ ನಿಬಂಧನೆಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ಸಮಯಕ್ಕೆ ತಮ್ಮ ಸ್ವತ್ತುಗಳನ್ನು ಪಡೆದುಕೊಳ್ಳಲು ಸಾಲಗಾರರ ಗಮನಕ್ಕೂ ತರಲಾಗಿದೆ.

ಕ್ರಮ ಸಂಖ್ಯೆ	ಸಾಲಗಾರರ ಮತ್ತು ಜಾಮೀನುದಾರರ ಹೆಸರು	ಸ್ಥಿರಾಸ್ತಿ ವಿವರ	ಡಿಮ್ಯಾಂಡ್ ನೋಟೀಸ್ ದಿನಾಂಕ	ಸ್ವಾಧೀನಪಡಿಸಿ ಕೊಂಡಿರುವ ದಿನಾಂಕ	ಬಾಕಿ ಇರುವ ಮೊತ್ತ (ರೂ.ಗಳಲ್ಲಿ)
1.	1) ಶ್ರೀಮತಿ ಕಲೀಮುನ್ನೀಸಾ ಕೋಂ ಕರೀಮ್ ಖಾನ್ 2) ಶ್ರೀಮತಿ ಶಾಯೇಶಾ ಬಿನ್ ಕರೀಮ್ ಖಾನ್ ಮನೆ ನಂ.305, ಬೀಡಿ ಕಾಲೋನಿ, ಅಜೀಜ್ ಸೇಟ್ ನಗರ, ಮೈಸೂರು.	ಮೈಸೂರು ಸಿಟಿ, ನಜರ್‌ಬಾದ್ ಮೊಹಲ್ಲಾ, ಅಜೀಜ್ ಸೇಟ್ ನಗರ, ಬೀಡಿ ಕಾರ್ಮಿಕರ ಕಾಲೋನಿ, ಕಾರ್ಪೋರೇಶನ್ ಮನೆ ನಂ. ಎಲ್‌ಐಜಿ–305. ವಿಸ್ತೀರ್ಣ: ಪೂರ್ವ–ಪಶ್ಚಿಮ: 12.20 ಮೀಟರ್‌ಗಳು ಮತ್ತು ಉತ್ತರ–ದಕ್ಷಿಣ: 6.50 ಮೀಟರ್‌ಗಳು. ಚಕ್ಕುಬಂದಿ:– **ಪೂರ್ವಕ್ಕೆ:** ರಸ್ತೆ, **ಪಶ್ಚಿಮಕ್ಕೆ:** ಮನೆ ನಂ.272, **ಉತ್ತರಕ್ಕೆ:** ಮನೆ ನಂ.304, **ದಕ್ಷಿಣಕ್ಕೆ:** ತೆರೆದ ಅಂಗಳ.	27.10.2025 ಎನ್‌ಪಿಎ ದಿನಾಂಕ 05.08.2025	09.03.2026	ಖಾತೆ ಸಂಖ್ಯೆ ಹೆಚ್‌ಪಿ–9447 ರೂ.19,65,172/– + ದಿನಾಂಕ 23.10.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ
2.	1) ಶ್ರೀ ರಹಮತುಲ್ಲಾ ಖಾನ್ ಬಿನ್ ಇಬ್ರಾಹಿಂ ಖಾನ್ 2) ಶ್ರೀಮತಿ ತಾಸೀನ್ ಖಾನುಮ್ ಕೋಂ ರಹಮತುಲ್ಲಾ ಖಾನ್ ಮನೆ ನಂ.604, ಅಲ್‌ಬದರ್ ಮಸೀದಿ ಹತ್ತಿರ, 2ನೇ ಸ್ಟೇಜ್, ರಾಜೀವ್ ನಗರ, ಮೈಸೂರು.	ಮೈಸೂರು ಸಿಟಿ, ಎನ್.ಆರ್. ಮೊಹಲ್ಲಾ, ದೇವನೂರು ಬಡಾವಣೆ, 2ನೇ ಸ್ಟೇಜ್, ಮನೆ ನಂ.604. ವಿಸ್ತೀರ್ಣ: ಪೂರ್ವ–ಪಶ್ಚಿಮ: 6.00 ಮೀಟರ್‌ಗಳು ಮತ್ತು ಉತ್ತರ–ದಕ್ಷಿಣ: 9.00 ಮೀಟರ್‌ಗಳು. ಚಕ್ಕುಬಂದಿ:– **ಪೂರ್ವಕ್ಕೆ:** 603ನೇ ನಂಬರಿನ ಸ್ವತ್ತು, **ಪಶ್ಚಿಮಕ್ಕೆ:** 605ನೇ ನಂಬರಿನ ಸ್ವತ್ತು, **ಉತ್ತರಕ್ಕೆ:** ರಸ್ತೆ, **ದಕ್ಷಿಣಕ್ಕೆ:** 601ನೇ ನಂಬರಿನ ಸ್ವತ್ತು.	27.10.2025 ಎನ್‌ಪಿಎ ದಿನಾಂಕ 11.08.2025	09.03.2026	ಖಾತೆ ಸಂಖ್ಯೆ ಹೆಚ್‌ಪಿ–9450 ರೂ.20,08,904/– + ದಿನಾಂಕ 16.10.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ
3.	ಶ್ರೀ ಫಾರೂಖ್ ಅಹ್ಮದ್ ಖಾನ್ ಬಿನ್ ಮೊಹಮ್ಮದ್ ಇಲ್ಯಾಜ್ ಖಾನ್ ಮನೆ ನಂ.45/ಎ, 10ನೇ ಕ್ರಾಸ್, ರಾಜೇಂದ್ರ ನಗರ, ಎನ್.ಆರ್. ಮೊಹಲ್ಲಾ, ಮೈಸೂರು–570007.	ಮೈಸೂರು ಸಿಟಿ, ಎನ್.ಆರ್. ಮೊಹಲ್ಲಾ, ಕೆಸರೆ, ರಾಜೇಂದ್ರ ನಗರ ಬಡಾವಣೆ, S.I.H.S. ಬ್ಲಾಕ್, K.H.B. ಕಾಲೋನಿ, 10ನೇ ಕ್ರಾಸ್, ಮನೆ ನಂ.45/ಎ. ವಿಸ್ತೀರ್ಣ: ಪೂರ್ವ–ಪಶ್ಚಿಮ: 9.50 ಮೀಟರ್‌ಗಳು ಮತ್ತು ಉತ್ತರ–ದಕ್ಷಿಣ: 14.90 ಮೀಟರ್‌ಗಳು. ಚಕ್ಕುಬಂದಿ:– **ಪೂರ್ವಕ್ಕೆ:** ಮನೆ ನಂ.45/ಬಿ, **ಪಶ್ಚಿಮಕ್ಕೆ:** ಮನೆ ನಂ.49/ಡಿ, **ಉತ್ತರಕ್ಕೆ:** ಮನೆ ನಂ.46/ಡಿ, **ದಕ್ಷಿಣಕ್ಕೆ:** ರಸ್ತೆ.	04.12.2025 ಎನ್‌ಪಿಎ ದಿನಾಂಕ 28.07.2025	09.03.2026	ಖಾತೆ ಸಂಖ್ಯೆ ಒಡಿ–1 ರೂ.36,03,864/– + ದಿನಾಂಕ 21.11.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ
4.	1) ಶ್ರೀಮತಿ ಸಮೀನಾ ಬಾನು ಕೋಂ ಅಬ್ರಾರ್ ಪಾಷ 2) ಶ್ರೀ ಅಬ್ರಾರ್ ಪಾಷ ಬಿನ್ ಜಾಫರ್ ಮನೆ ನಂ.3215/2, ಸಿ.ವಿ. ರಸ್ತೆ, 8ನೇ ಕ್ರಾಸ್, 2ನೇ ಈದ್ಗಾ, ಮಂಡಿ ಮೊಹಲ್ಲಾ, ಮೈಸೂರು.	ಮೈಸೂರು ಸಿಟಿ, ಮಂಡಿ ಮೊಹಲ್ಲಾ, 2ನೇ ಈದ್ಗಾ, ಚಿಕ್ಕ ವೀರಣ್ಣ ಮಿಲ್ ಕ್ರಾಸ್ ರಸ್ತೆ (ಸಿ.ವಿ. ರಸ್ತೆ), 8ನೇ ಕ್ರಾಸ್, ಮನೆ ನಂ. ಎಂ–28/2. ವಿಸ್ತೀರ್ಣ: ಪೂರ್ವ–ಪಶ್ಚಿಮ: 16.00 ಅಡಿಗಳು ಮತ್ತು ಉತ್ತರ–ದಕ್ಷಿಣ: 20.00 ಅಡಿಗಳು. ಚಕ್ಕುಬಂದಿ:– **ಪೂರ್ವಕ್ಕೆ:** ಮೊಹಮ್ಮದ್ ಪೀರ್ ಸಾಹೆಬ್ @ ಬಾಬಾ ರವರ ಸ್ವತ್ತು, **ಪಶ್ಚಿಮಕ್ಕೆ:** ಶುಕೂರ್ ಸಾಹೆಬ್ ರವರ ಸ್ವತ್ತು, **ಉತ್ತರಕ್ಕೆ:** ರಸ್ತೆ, **ದಕ್ಷಿಣಕ್ಕೆ:** ಖಾಸಗಿ ಸ್ವತ್ತು.	24.10.2025 ಎನ್‌ಪಿಎ ದಿನಾಂಕ 05.08.2025	09.03.2026	ಖಾತೆ ಸಂಖ್ಯೆ ಹೆಚ್‌ಪಿ–9462 ರೂ.8,54,977/– + ದಿನಾಂಕ 16.10.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ
5.	1) ಶ್ರೀ ಮುಜೀಬ್ ಅಹ್ಮದ್ ಬಿನ್ ಲೇಟ್ ಅಬ್ದುಲ್ ರಜಾಖ್ 2) ಶ್ರೀಮತಿ ಹಜೀರ ಬಾನು ಕೋಂ ಮುಜೀಬ್ ಅಹ್ಮದ್ ಮನೆ ನಂ.2374, ಎಲ್–2/1, 22ನೇ ಕ್ರಾಸ್, ಎರೆಕಟ್ಟೆ ಬೀದಿ, ಲಷ್ಕರ್ ಮೊಹಲ್ಲಾ, ಮೈಸೂರು.	ಮೈಸೂರು ಸಿಟಿ, ಲಷ್ಕರ್ ಮೊಹಲ್ಲಾ, ಎರೆಕಟ್ಟೆ ಬೀದಿ, ಕಾರ್ಪೋರೇಷನ್ ಮನೆ ನಂ.2377/ಎ, ಹೊಸ ನಂ. ಎಲ್102ಎ. ವಿಸ್ತೀರ್ಣ: ಪೂರ್ವ–ಪಶ್ಚಿಮ: 16.10 ಅಡಿಗಳು ಮತ್ತು ಉತ್ತರ–ದಕ್ಷಿಣ: 30.09 ಅಡಿಗಳು. ಚಕ್ಕುಬಂದಿ:– **ಪೂರ್ವಕ್ಕೆ:** ಸೈಯದ್ ಘೌಸ್ ರವರ ಮನೆ, **ಪಶ್ಚಿಮಕ್ಕೆ:** ರಹಮತ್ ಬಿ ರವರ ಮನೆ, **ಉತ್ತರಕ್ಕೆ:** ಗುಲಾಮ್ ಜಾಫರ್ ಖಾನ್ @ ನಿಸಾರ್ ಅಹಮದ್ ರವರ ಮನೆ, **ದಕ್ಷಿಣಕ್ಕೆ:** ರಸ್ತೆ ನಂತರ ಖಾಸಗಿ ಸ್ವತ್ತು.	24.10.2025 ಎನ್‌ಪಿಎ ದಿನಾಂಕ 03.06.2025	09.03.2026	ಖಾತೆ ಸಂಖ್ಯೆ ಹೆಚ್‌ಪಿ–9389 ರೂ.16,08,603/– + ದಿನಾಂಕ 16.10.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ
6.	1) ಶ್ರೀ ಎಸ್.ಜೆ. ಫಯಾಜ್ ಅಹ್ಮದ್ ಬಿನ್ ಲೇಟ್ ಸಾಬ್ ಜಾನ್ 2) ಶ್ರೀಮತಿ ಫಾತಿಮ ಪರ್ವೀನ್ ಬಿನ್ ನಜೀರ್ ಅಹ್ಮದ್ ಮನೆ ನಂ.396/1, ಅಶೋಕ ರಸ್ತೆ, 19ನೇ ಕ್ರಾಸ್, ಲಷ್ಕರ್ ಮೊಹಲ್ಲಾ, ಮೈಸೂರು.	ಮೈಸೂರು ಸಿಟಿ, ಲಷ್ಕರ್ ಮೊಹಲ್ಲಾ, ಅಶೋಕ ರಸ್ತೆ, 19 ಪಶ್ಚಿಮ ಕ್ರಾಸ್ ರಸ್ತೆ, ಕಾರ್ಪೋರೇಶನ್ ಮನೆ ನಂ.396:1, ಹೊಸ ನಂ. ಎಲ್–37. ವಿಸ್ತೀರ್ಣ: ಪೂರ್ವ–ಪಶ್ಚಿಮ: 41.09 ಅಡಿಗಳು ಮತ್ತು ಉತ್ತರ–ದಕ್ಷಿಣ: 48.00 ಅಡಿಗಳು. ಚಕ್ಕುಬಂದಿ:– **ಪೂರ್ವಕ್ಕೆ:** ಮಿರ್ ಮೊಹಮದ್ ಖಾಸೀಂ ರವರ ಸ್ವತ್ತು, **ಪಶ್ಚಿಮಕ್ಕೆ:** ಸರ್ಕಾರಿ ಸ್ವತ್ತು, **ಉತ್ತರಕ್ಕೆ:** ಮಸ್ಜೀದ್–ಇ–ಅಜಾಮ್, **ದಕ್ಷಿಣಕ್ಕೆ:** ರಸ್ತೆ.	24.10.2025 ಎನ್‌ಪಿಎ ದಿನಾಂಕ 21.05.2025	09.03.2026	ಖಾತೆ ಸಂಖ್ಯೆ ಹೆಚ್‌ಪಿ–9434 ರೂ.40,38,608/– + ದಿನಾಂಕ 16.10.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ

ದಿನಾಂಕ: 13.03.2026
ಸ್ಥಳ: ಮೈಸೂರು
ಸಹಿ/– ಅಧಿಕೃತ ಅಧಿಕಾರಿ
ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮೈಸೂರು